ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 23 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 67 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಮಾಜಿ ಪ್ರಧಾನಿ ದೇವೇಗೌಡರಿಗೆ ಶ್ರೀ ಗಂಗ ಸಾಮ್ರಾಟ ಶ್ರೀಪುರುಷ ಪ್ರಶಸ್ತಿ ಪ್ರದಾನ

ನನ್ನ ಜನರ ನೀರಿನ ಬವಣೆ ನೋಡಲಾರೆ...



ಬೆಂಗಳೂರಿನಲ್ಲಿ ದೇವೇಗೌಡ ಅಭಿನಂದನಾ ಸಮಿತಿ ಆಯೋಜಿಸಿದ್ದ ಸಮಾರಂಭದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ 'ಶ್ರೀ ಗಂಗ ಸಾಮ್ರಾಟ ಶ್ರೀಪುರುಷ' ಪ್ರಶಸ್ತಿಯನ್ನು ಆದಿಚುಂಚನಗಿರಿ ಮಠದ ಶ್ರೀಗಳು, ಸುತ್ತೂರು ಶ್ರೀಗಳು, ಮಾದಾರ ಚನ್ನಯ್ಯ ಶ್ರೀಗಳು, ನಂಜಾವಧೂತ ಶ್ರೀಗಳು ಪ್ರದಾನ ಮಾಡಿದರು. ಚಿತ್ರದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಸಂಸದ ಡಾ.ಸಿ.ಎನ್.ಮಂಜುನಾಥ್ ಇತರರಿದ್ದಾರೆ.

ಬೆಂಗಳೂರು: ಮಾಜಿ ಪ್ರಧಾನಿ ದೇವೇಗೌಡರಿಗೆ 'ಶ್ರೀ ಗಂಗ ಸಾಮ್ರಾಟ ಶ್ರೀ ಪುರುಷ' ಪ್ರಶಸ್ತಿ ಪ್ರದಾನ ಮಾಡಿ, ಸನ್ಮಾನಿಸಲಾಯಿತು. ಬೆಂಗಳೂರಿನಲ್ಲಿ ದೇವೇಗೌಡ ಅಭಿನಂದನಾ ಸಮಿತಿ ಆಯೋಜಿಸಿದ್ದ ಸಮಾರಂಭದಲ್ಲಿ ಆದಿಚುಂಚನಗಿರಿ ಮಠದ ಶ್ರೀಗಳು, ಸುತ್ತೂರು ಶ್ರೀಗಳು, ಮಾದಾರ ಚನ್ನಯ್ಯ ಶ್ರೀಗಳು, ನಂಜಾವಧೂತ ಶ್ರೀಗಳು ದೇವೇಗೌಡರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಇದೇ ವೇಳೆ, ದೇವೇಗೌಡರ ಕುರಿತಾದ ಪುಸ್ತಕ ಬಿಡುಗಡೆ ಮಾಡಲಾಯಿತು. ಈ ವೇಳೆ ಮಾತನಾಡಿದ ದೇವೇಗೌಡರು, ಜೀವನದ ಕೊನೆ ಹಂತ ಇದು. ನಿಮ್ಮ ಆಶೀರ್ವಾದ ಈ ಹಂತದಲ್ಲಿ ನನ್ನ ಆತ್ಮಕ್ಕೆ ಸಮಾಧಾನ ತಂದಿದೆ. ನಾನು ಅನೇಕ ಬಾರಿ ಚುನಾವಣೆಯಲ್ಲಿ ಸೋತಿದ್ದೇನೆ. ರಾಜಕೀಯದಲ್ಲಿ ಸೋಲು, ಗೆಲುವುಗಳಿಗೆ ಯಾರೂ ತಲೆಕೆಡಿಸಿಕೊಳ್ಳಬಾರದು. ನನ್ನ ಧರ್ಮಪತ್ನಿ ಶ್ರೀಮತಿ ಚನ್ನಮ್ಮ ಎಲ್ಲಾ ಹಂತದಲ್ಲಿ ನನ್ನ ಜೊತೆ ನಿಂತಿದ್ದಾರೆ. ಅನೇಕ ಕಷ್ಟದಲ್ಲಿ ನನ್ನ ಗೌರವ ಉಳಿಸಿದ್ದಾರೆ. ನನ್ನ ಬೆಳವಣಿಗೆಗೆ ಅವರ ಕೊಡುಗೆ ಸಾಕಷ್ಟು ಇದೆ ಎಂದು ಚೆನ್ನಮ್ಮರ ತ್ಯಾಗ ನೆನೆದು ಕಣ್ಣೀರು ಹಾಕಿದರು. ಆದಿಚುಂಚನಗಿರಿ ಹಿಂದಿನ ಗುರುಗಳ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸ ಆಯ್ತು ಸತ್ಯ ಹೇಳ್ತೀನಿ, ಎಲ್ಲರ ಮಧ್ಯೆ ನಾವು ಏನಾದರೂ ಗೌರವ ಸಂಪಾದನೆ ಮಾಡಿದ್ದೇವೆ ಅಂದರೆ ಅದು ಬಾಲಗಂಗಾಧರನಾಥ ಸ್ವಾಮೀಜಿಗಳಿಂದ. ರಾಮಕೃಷ್ಣ ಆಶ್ರಮದಲ್ಲಿ ನನ್ನ ದೊಡ್ಡ ಮಗನನ್ನು ಹಾಸ್ಟೆಲ್‌ಗೆ ಸೇರಿಸಿದ್ದೆ. ಆಗ ಅಲ್ಲಿನ ಶ್ರೀಗಳು ಬಾಲಕೃಷ್ಣ ಹೆಸರಿನಲ್ಲಿ ಗೌಡ ▶ 6ನೇ ಪುಟಕ್ಕೆ

ಇಸ್ರೇಲ್–ಇರಾನ್ ಕದನ ಕಣಕ್ಕೆ ಅಮೆರಿಕಾ ಎಂಟ್ರಿ...

ಇರಾನ್‌ನ 3 ಅಣು ಸ್ಥಾವರಗಳು ಧ್ವಂಸ

ಅಮೆರಿಕ ದಾಳಿಗೆ ರಷ್ಯಾ, ಚೀನಾ, ಉ.ಕೊರಿಯಾ, ಪಾಕಿಸ್ತಾನ ತೀವ್ರ ವಿರೋಧ

ವಾಷಿಂಗ್ಟನ್: ಇಸ್ರೇಲ್–ಇರಾನ್ ನಡುವಿನ ಯುದ್ಧ ಮಹಾತಿರುವು ಪಡೆದುಕೊಂಡಿದೆ. ವಿಶ್ವದ 'ದೊಡ್ಡಣ್ಣ' ಅಮೆರಿಕಾ ಅಧಿಕೃತವಾಗಿ ಯುದ್ಧ ಕಣ ಪ್ರವೇಶಿಸಿರುವ ಪರಿಣಾಮ ಇಸ್ರೇಲ್–ಇರಾನ್ ಸಂಘರ್ಷ ಮತ್ತಷ್ಟು ಧಗಧಗಿಸುತ್ತಿದೆ.



ಇರಾನ್‌ನಲ್ಲಿರುವ ಮೂರು ಪ್ರಮುಖ ಅಣುಸ್ಥಾವರಗಳ ಮೇಲೆ ಅಮೆರಿಕಾ ನೇರ ವೈಮಾನಿಕ ದಾಳಿ ನಡೆಸಿ ಧ್ವಂಸಗೊಳಿಸಿದ್ದು, ಈ ಕುರಿತು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಮಾಧ್ಯಮ ಜಾಲತಾಣದಲ್ಲಿ ಪೋಸ್ಟ್ ಮಾಡಿ, ಘೋಷಿಸಿದ್ದಾರೆ. ಫೋರ್ಡೋ, ನಟಾಂಜ್ ಮತ್ತು ಇಸ್ಫಹಾನ್‌ನಲ್ಲಿರುವ ಇರಾನಿನ ಪರಮಾಣು ನೆಲೆಗಳ ಮೇಲೆ ಅಮೆರಿಕವು ಅತ್ಯಂತ ಯಶಸ್ವಿಯಾಗಿ ದಾಳಿ ನಡೆಸಿದ್ದು, ಎಲ್ಲಾ ವಿಮಾನಗಳು ಈಗ ಇರಾನಿನ ವಾಯುಪ್ರದೇಶದಿಂದ ಹೊರಗೆ ಸುರಕ್ಷಿತವಾಗಿವೆ ಎಂದು ತಿಳಿಸಿದ್ದಾರೆ.

ಪ್ರಾಥಮಿಕ ತಾಣವಾದ ಫೋರ್ಡೋದಲ್ಲಿ ಪೂರ್ಣ ಪ್ರಮಾಣದಲ್ಲಿ ಬಾಂಬ್ ದಾಳಿ ಮಾಡಲಾಗಿದೆ. ಎಲ್ಲಾ ವಿಮಾನಗಳು ಸುರಕ್ಷಿತವಾಗಿ ವಾಪಸ್ ನೆಲೆಗಳಿಗೆ ಹೋಗುತ್ತಿವೆ. ನಮ್ಮ ಅಮೆರಿಕದ ಮಹಾನ್ ಯೋಧರಿಗೆ ಅಭಿನಂದನೆಗಳು. ಈ ರೀತಿ ಕಾರ್ಯಾಚರಣೆ ಮಾಡಬಹುದಾದ ಮತ್ತೊಂದು ಸೇನೆಯು ಜಗತ್ತಿನಲ್ಲಿ ಇಲ್ಲ. ಇದು ಶಾಂತಿಯ ಸಮಯ. ಈ ಬೆಳವಣಿಗೆಯ ಬಗ್ಗೆ ನೀವು ಗಮನ ಹರಿಸಿದ್ದಕ್ಕಾಗಿ ಧನ್ಯವಾದಗಳು ಎಂದಿದ್ದಾರೆ. ಆದರೆ ಈ ಬೆಳವಣಿಗೆಯಿಂದಾಗಿ ಅಣುಯುದ್ಧದ ಭೀತಿ ಮತ್ತಷ್ಟು ಹೆಚ್ಚಾಗಿದೆ. ಈಗಾಗಲೇ ಇಸ್ರೇಲ್–ಹಮಾಸ್ ಯುದ್ಧ, ಅದರಿಂದ ಶುರುವಾದ ಇಸ್ರೇಲ್–ಇರಾನ್ ಸಂಘರ್ಷ, ಈಗ ಅಮೆರಿಕದ ▶ 6ನೇ ಪುಟಕ್ಕೆ

ಬಲಿಷ್ಠ ಬಾಂಬರ್ ಯುದ್ಧ ವಿಮಾನ ಬಳಕೆ...


ಇರಾನ್‌ನ ಪರಮಾಣು ನೆಲೆಗಳನ್ನು ಹೊಡೆದುರುಳಿಸಲು ಅಮೆರಿಕ ಸೇನೆ ಬಲಿಷ್ಠ 'ಬಿ–2 ಸ್ಪಿರಿಟ್' ಯುದ್ಧ ವಿಮಾನಗಳನ್ನು ಬಳಸಿದೆ. ಈ ಪ್ರಬಲ ಯುದ್ಧ ವಿಮಾನ ಅಮೆರಿಕದ ಮಿಸೌರಿಯಿಂದ ಸುಮಾರು 37 ಗಂಟೆಗಳ ಕಾಲ ನಿರಂತರವಾಗಿ ಹಾರಾಟ ನಡೆಸಿದೆ. ಹಲವಾರು ಬಾರಿ ಮಧ್ಯದಲ್ಲೇ ಯುದ್ಧ ವಿಮಾನಕ್ಕೆ ಇಂಧನ ತುಂಬಿಸಲಾಗಿತ್ತು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಫೋರ್ಡೋ ಅಣು ಸ್ಥಾವರವನ್ನು ಇರಾನ್‌ನ ಅತ್ಯಂತ ಸುರಕ್ಷಿತ ಪರಮಾಣು ನೆಲೆ ಎಂದೇ ಪರಿಗಣಿಸಲಾಗಿತ್ತು. ಇದು ಭಾರಿ ಕೋಟೆಯ ಭೂಗತ ಅಣು ಸೌಲಭ್ಯವಾಗಿತ್ತು. ಇಂತಹ ಭದ್ರನೆಲೆಯನ್ನೇ ಧ್ವಂಸಗೊಳಿಸಲಾಗಿದೆ. ಬಂಕರ್–ಬಸ್ಟರ್ ಬಾಂಬ್‌ಗಳು ಮತ್ತು ಟೊಮಾಹಾಕ್ ಕ್ಷಿಪಣಿಗಳ ಸಂಯೋಜನೆಯೊಂದಿಗೆ ನಡೆಸಲಾದ ದಾಳಿ, ಇರಾನ್ ವಿರುದ್ಧದ ಅತ್ಯಂತ ನೇರವಾದ ಅಮೆರಿಕ ಮಿಲಿಟರಿ ಕ್ರಮವಾಗಿತ್ತು. ಫೋರ್ಡೋ ಮೇಲೆ ಆರು ಬಂಕರ್–ಬಸ್ಟರ್ ಬಾಂಬ್‌ಗಳನ್ನು ಬೀಳಿಸಲಾಗಿದೆ. ಇತರ ಪರಮಾಣ ನೆಲೆಗಳ ಮೇಲೆ ಸುಮಾರು 30 ಟೊಮಾಹಾಕ್ ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ ಎಂದು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಡಿಂಬಾಸನದಲ್ಲಿ ಕೊಡಗಿನ ಬಾಲಕಿ ವಿಶ್ವ ದಾಖಲೆ

ಮಡಿಕೇರಿ,ಜೂ.22–'ಡಿಂಬಾಸನ' ಭಂಗಿಯಲ್ಲಿ 30 ನಿಮಿಷ 5 ಸೆಕೆಂಡ್ ಯೋಗ ಪ್ರದರ್ಶನದ ಮೂಲಕ ಕೊಡಗಿನ ವಿದ್ಯಾರ್ಥಿನಿ ಗಿನ್ನೀಸ್ ವಿಶ್ವದಾಖಲೆಗೆ ಅರ್ಹತೆ ಪಡೆದಿದ್ದಾಳೆ.

ಮಡಿಕೇರಿಯ ಕೊಡಗು ಪತ್ರಿಕಾ ಭವನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮದೆನಾಡು ಬಿಜಿಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಬಿ.ಕೆ.ಸಿಂಚನ ಯೋಗ ಪ್ರದರ್ಶನದಲ್ಲಿ ಈ ವಿಶಿಷ್ಟ ಸಾಧನೆಯೊಂದಿಗೆ ಗಮನ ಸೆಳೆದಿದ್ದಾಳೆ.

ಯೋಗಾಸನದ 'ಡಿಂಬಾಸನ' ಭಂಗಿಯಲ್ಲಿ ಆಸ್ಟ್ರಿಯಾದ 32 ವರ್ಷದ ಸ್ಟೆಫಿನಿ ಮಿಲಿಂಗರ್ 30 ನಿಮಿಷ 3 ಸೆಕೆಂಡ್‌ಗಳ ಕಾಲ ಸ್ಥಿರ ಪ್ರದರ್ಶನದ ಮೂಲಕ ಗಿನ್ನಿಸ್ ವಿಶ್ವದಾಖಲೆ ಮಾಡಿದ್ದಾರೆ. 'ಡಿಂಬಾಸನ'ದಲ್ಲಿ ದಾಖಲಾಗಿರುವ ಈವರೆಗಿನ ವಿಶ್ವದಾಖಲೆಗಿಂತ 2 ಸೆಕೆಂಡ್ ಹೆಚ್ಚು ಕಾಲ ಸ್ಥಿರ ಪ್ರದರ್ಶನ ನೀಡುವ ಮೂಲಕ ಹೊಸ ದಾಖಲೆ ಬರೆದ ಬಿ.ಕೆ.ಸಿಂಚನಳಿಗೆ ಕೊಡಗು ಪತ್ರಕರ್ತರ ಸಂಘ ಮತ್ತು ಮಡಿಕೇರಿ ರೋಟರಿ ಮಿಸ್ಟಿ ಹಿಲ್ಸ್ ಸಂಘಟನೆ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಭಿನಂದನಾ ಪತ್ರ ನೀಡಿ, ಗೌರವಿಸಲಾಯಿತು.



'ಡಿಂಬಾಸನ' ಭಂಗಿಯಲ್ಲಿ 30 ನಿಮಿಷ 5 ಸೆಕೆಂಡ್ ಯೋಗ ಪ್ರದರ್ಶಿಸಿದ ಬಿ.ಕೆ.ಸಿಂಚನ

ಈ ವೇಳೆ ಮಡಿಕೇರಿಯ ಯೋಗ ಗುರು ಕೆ.ಕೆ.ಮಹೇಶ್‌ಕುಮಾರ್ ಮಾತನಾಡಿ, ಡಿಂಬಾಸನವು ಚಕ್ರಾಸನದ ಮುಂದುವರೆದ ಭಾಗ. ಈ ಆಸನ ಪ್ರಶಾಂತ ಚಿತ್ತತೆ ಜೊತೆಗೆ ಬೆನ್ನುಹುರಿ, ಕಾಲು, ಸೊಂಟ ಭಾಗದ ಕೀಲುಗಳ ಆರೋಗ್ಯ ರಕ್ಷಣೆಗೆ ಅತ್ಯಂತ ಪೂರಕವಾಗಿದೆ ಎಂದು ಹೇಳಿದರು. ▶ 6ನೇ ಪುಟಕ್ಕೆ

ಗಿನ್ನೀಸ್ ದಾಖಲೆ ಸೇರಲಿದೆ ಸಿಂಚನ ಯೋಗ ಪ್ರದರ್ಶನ

ಈವರೆಗಿನ ಈ ವಿಶ್ವದಾಖಲೆಯನ್ನು ಮೀರಿಸಿದ ಪ್ರದರ್ಶನ ನೀಡುವ ಮೂಲಕ ಕೊಡಗಿನ ಕುವರಿ ಬಿ.ಕೆ. ಸಿಂಚನ ಸಾಧನೆ ಮೆರೆದಿದ್ದಾಳೆ. ಈಕೆ 30 ನಿಮಿಷ 5 ಸೆಕೆಂಡ್ 'ಡಿಂಬಾಸನ' ಸ್ಥಿರ ಪ್ರದರ್ಶನ ನೀಡಿ, ದಾಖಲೆ ಬರೆದಿದ್ದಾಳೆ. ಈ ಸಾಧನೆ ಗಿನ್ನೀಸ್ ದಾಖಲೆಗೆ ಸೇರಲಿದೆ.

ಕೆರಳಿದ ಇರಾನ್; ಇಂಧನ ಪ್ರಮುಖ ದ್ವಾರ ಹೋರ್ಮುಜ್ ಜಲಸಂಧಿ ಬಂದ್ ನಿರ್ಧಾರ

ಪೆಟ್ರೋಲಿಯಂ ಉತ್ಪನ್ನಗಳ ಅಭಾವ; ಭಾರಿ ಬೆಲೆ ಏರಿಕೆ ಭಯ



ಟೆಹರಾನ್, ಜೂ.22– ಪಶ್ಚಿಮ ಏಷ್ಯಾ ರಾಷ್ಟ್ರಗಳಿಂದ ತೈಲ ಸರಬರಾಜಿಗೆ ಪ್ರಮುಖ ಮಾರ್ಗವಾಗಿರುವ ಹೋರ್ಮುಜ್ ಜಲಸಂಧಿಯನ್ನು ಮುಚ್ಚಲು ಇರಾನ್ ಸಂಸತ್ತು ಅನುಮೋದನೆ ನೀಡಿದೆ. ಈ ಜಲಸಂಧಿಯು ಇರಾನ್, ಇರಾಕ್, ಓಮನ್, ಕುವೈತ್, ಕತಾರ್, ಯುಎಇಗೆ ಹೊಂದಿಕೊಂಡಿದೆ. ವಿಶ್ವದ 5ನೇ ಒಂದರಷ್ಟು ತೈಲ ಈ ಮಾರ್ಗವಾಗಿಯೇ ಸರಬರಾಜಾಗುತ್ತದೆ. ಭಾರತಕ್ಕೆ ಆಮದಾಗುವ ಕಚ್ಚಾತೈಲದಲ್ಲಿ ಶೇ 40ರಷ್ಟು ಹಾಗೂ ಅರ್ಧದಷ್ಟು ಅನಿಲ ಇಂಧನ, ಕಿರಿದಾದ ಈ ಮಾರ್ಗದ ಮೂಲಕವೇ ಬರುತ್ತದೆ. ಇರಾನ್–ಇಸ್ರೇಲ್ ಸಂಘರ್ಷದಲ್ಲಿ ಅಮೆರಿಕ ಮಧ್ಯಪ್ರವೇಶಿಸಿರುವುದರಿಂದ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದೆ. ಹೀಗಾಗಿ, ಇರಾನ್ ಸಂಸತ್ತು ಹೋರ್ಮುಜ್ ಜಲಸಂಧಿ ಮುಚ್ಚಲು ಅನುಮೋದನೆ ನೀಡಿದೆ. ಉನ್ನತ ಭದ್ರತಾ ಮಂಡಳಿಯು ಈ ಸಂಬಂಧ ಅಂತಿಮ ನಿರ್ಧಾರ ಕೈಗೊಳ್ಳಲಿದೆ. ▶ 6ನೇ ಪುಟಕ್ಕೆ

ಪ್ರತೀಕಾರದ ಪ್ರತಿಜ್ಞೆ ಮಾಡಿದ ಇರಾನ್

ಟೆಹರಾನ್, ಜೂ.22– ತನ್ನ ಮೂರು ಪ್ರಮುಖ ಪರಮಾಣು ತಾಣಗಳ ಮೇಲೆ ಅಮೆರಿಕ ನಡೆಸಿದ ಬಾಂಬ್ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಭಾನುವಾರ ಪ್ರತಿಜ್ಞೆ ಮಾಡಿದೆ. ಅಮೆರಿಕದ ದಾಳಿಗಳು ಶಾಶ್ವತ ಪರಿಣಾಮಗಳನ್ನು ಬೀರುತ್ತವೆ ಎಂದು ಹೇಳಿದೆ.



ಅಬ್ಬಾಸ್ ಅರಘ್ಚಿ

ಫೋರ್ಡೋ, ನಟಾಂಜ್ ಮತ್ತು ಇಸ್ಫಹಾನ್‌ನಲ್ಲಿರುವ ಇರಾನಿನ ಪರಮಾಣು ಸೌಲಭ್ಯಗಳ ಮೇಲೆ ಅಮೆರಿಕ ಬಂಕರ್ ಬಸ್ಟರ್ ಬಾಂಬ್‌ಗಳನ್ನು ಬಳಸಿ ದಾಳಿ ಮಾಡಿದ ಕೆಲವೇ ಗಂಟೆಗಳ ನಂತರ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಈ ಪ್ರತಿಕ್ರಿಯೆ ನೀಡಿದ್ದಾರೆ.

ಅಮೆರಿಕದ ದಾಳಿಯ ನಂತರ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನಿನ ಪರಮಾಣು ಸೌಲಭ್ಯಗಳು ಸಂಪೂರ್ಣವಾಗಿ ನಾಶವಾಗಿವೆ ಎಂದು ಹೇಳಿದ್ದರು. ಇರಾನ್‌ನ ಶಾಂತಿಯುತ ಪರಮಾಣು ತಾಣಗಳ ಮೇಲೆ ದಾಳಿ ಮಾಡುವ ಮೂಲಕ ಅಮೆರಿಕವು ವಿಶ್ವಸಂಸ್ಥೆಯ ನಿಯಮ, ಅಂತರರಾಷ್ಟ್ರೀಯ ಕಾನೂನು ಮತ್ತು ಪರಮಾಣು ಪ್ರಸರಣ ನಿಷೇಧ ಒಪ್ಪಂದದ(ಎನ್‌ಪಿಟಿ) ಗಂಭೀರ ಉಲ್ಲಂಘನೆ ಮಾಡಿದೆ ಎಂದು ಅರಘ್ಚಿ ಹೇಳಿದ್ದಾರೆ.

ಇಂದು ಬೆಳಿಗ್ಗೆ ನಡೆದ ದಾಳಿಗಳು ಅತಿರೇಕದಿಂದ ಕೂಡಿದ್ದವು. ಅವು ಶಾಶ್ವತ ಪರಿಣಾಮಗಳನ್ನು ಬೀರುತ್ತವೆ. ಈ ಅತ್ಯಂತ ಅಪಾಯಕಾರಿ, ಕಾನೂನುಬಾಹಿರ ಮತ್ತು ಕ್ರಿಮಿನಲ್ ನಡವಳಿಕೆ ಬಗ್ಗೆ ವಿಶ್ವಸಂಸ್ಥೆಯ ಪ್ರತಿಯೊಬ್ಬ ಸದಸ್ಯ ರಾಷ್ಟ್ರ ಧ್ವನಿ ಎತ್ತಬೇಕು ಎಂದು ಅವರು ಹೇಳಿದ್ದಾರೆ.

ಇರಾನ್‌ಗೆ ತನ್ನ ದೇಶದ ಸಾರ್ವಭೌಮತ್ವ, ಹಿತಾಸಕ್ತಿ ಮತ್ತು ಜನರನ್ನು ರಕ್ಷಿಸಿಕೊಳ್ಳುವ ಹಕ್ಕಿದೆ ಎಂದು ಹೇಳಿದೆ. ಮಾಸ್ಕೋಗೆ ತೆರಳಿ ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಭೇಟಿ ಮಾಡುವುದಾಗಿ ಅವರು ಹೇಳಿದ್ದಾರೆ. ಇದೇವೇಳೆ, ಅಮೆರಿಕ ▶ 6ನೇ ಪುಟಕ್ಕೆ

ಪಹಲ್ಗಾಮ್ ದಾಳಿಯ ಉಗ್ರರಿಗೆ ಆಶ್ರಯ ನೀಡಿದ ಇಬ್ಬರ ಬಂಧನ

ಶ್ರೀನಗರ: ಏಪ್ರಿಲ್ 22ರಂದು ನಡೆದ ಪಹಲ್ಗಾಮ್ ಭಯೋತ್ಪಾದಕ ದಾಳಿ ಪ್ರಕರಣಕ್ಕೆ ಸಂಬಂಧಪಟ್ಟಂತೆ, ರಾಷ್ಟ್ರೀಯ ತನಿಖಾ ಸಂಸ್ಥೆ ಉಗ್ರರಿಗೆ ಆಶ್ರಯ ನೀಡಿದ್ದಕ್ಕಾಗಿ ಇಬ್ಬರನ್ನು ಬಂಧಿಸಿದೆ. ಉಗ್ರರು ದಾಳಿ ಮಾಡಿ, 25 ಪ್ರವಾಸಿಗರು ಮತ್ತು ಸ್ಥಳೀಯ ಪೋನಿವಾಲಾನನ್ನು ಕೊಂದಿದ್ದರು. ಬಂಧಿತ ಇಬ್ಬರು ವ್ಯಕ್ತಿಗಳನ್ನು ಪಹಲ್ಗಾಮ್‌ನ ಬಟ್ಕೋಟ್‌ನ ಪರ್ವೈಜ್ ಅಹ್ಮದ್ ಜೋಥರ್ ಮತ್ತು ಹಿಲ್ ಪಾರ್ಕ್‌ನ ಬಶೀರ್ ಅಹ್ಮದ್ ಜೋಥರ್ ಎಂದು ಗುರುತಿಸಲಾಗಿದೆ.

2028ಕ್ಕೆ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರ ಖಚಿತ

- ವಿಪಕ್ಷ ನಾಯಕ ಆರ್.ಅಶೋಕ್ ಭವಿಷ್ಯ
- ಡಿ.ಕೆ.ಶಿವಕುಮಾರ್ ಸಿಎಂ ಆಗಲಿ ಎಂದು ಜನ ಅವರಿಗೆ ಅಧಿಕಾರ ಕೊಟ್ಟಿದ್ದು 2023ಕ್ಕೆ; 2028ಕ್ಕೆ ಅಲ್ಲ
- ಬೇಕಿದ್ದರೆ ಮುಂದಿನ ಅಕ್ಟೋಬರ್‌ಗೆ ಸಿದ್ದರಾಮಯ್ಯರ ಬಳಿ ಅಧಿಕಾರ ಕಿತ್ತುಕೊಳ್ಳಲಿ!
- ರಾಜ್ಯದಲ್ಲಿ ಲಕ್ಷ ಮಂದಿ ಬಾಂಗ್ಲಾದೇಶಿಯರು ಅಡಗಿದ್ದಾರೆ

ಮಂಡ್ಯ, ಜೂ.22 (ಮೋಹನ್ ರಾಜ್)–ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಹಾಲು ಜೇನಿನಂತಿದ್ದು ಕೆಲವೊಂದು ವಿಚಾರದಲ್ಲಿ ಕುಮಾರಸ್ವಾಮಿಯವರ ಸಲಹೆ ಪಡೆದು ಹೋರಾಟಗಳನ್ನು ರೂಪಿಸುತ್ತಿದ್ದೇವೆ.



ಆರ್.ಅಶೋಕ್

2028ಕ್ಕೆ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಭವಿಷ್ಯ ನುಡಿದರು.

ಭಾನುವಾರ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್ 2028ಕ್ಕೂ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಮೊದಲು ಮುಂದಿನ ಅಕ್ಟೋಬರ್‌ಗೆ ಸಿದ್ದರಾಮಯ್ಯ ಅವರ ಬಳಿ ಇರುವ ಅಧಿಕಾರ ಕಿತ್ತುಕೊಳ್ಳಲಿ. ಒದ್ದು ಕಿತ್ತುಕೊಳ್ಳುವುದಾಗಿ ಅವರೇ ಮೊದಲು ಹೇಳಿದ್ದಾರಲ್ಲ. 2028ಕ್ಕೆ ಯಾರು ಅಧಿಕಾರಕ್ಕೆ ಬರುತ್ತಾರೆ ಎಂಬುದನ್ನು ಜನರು ತೀರ್ಮಾನಿಸುತ್ತಾರೆ. ಡಿ.ಕೆ. ಶಿವಕುಮಾರ್ ಸಿಎಂ ಆಗಲಿ ಎಂದು ಜನ ಅಧಿಕಾರ ಕೊಟ್ಟಿದ್ದು, 2023ಕ್ಕೆ ಹೊರತು 2028ಕ್ಕಲ್ಲ ಎಂದರು.

ಹೆಚ್ಚುತ್ತಿರುವ ಅಕ್ರಮ ಬಾಂಗ್ಲಾ ವಲಸಿಗರು: ರಾಜ್ಯದಲ್ಲಿ ಅಕ್ರಮ ಬಾಂಗ್ಲಾ ನಿವಾಸಿಗಳು ಹೆಚ್ಚುತ್ತಿದ್ದಾರೆ. ನಮಗಿರುವ ಮಾಹಿತಿ ಪ್ರಕಾರ ಒಂದು ಲಕ್ಷಕ್ಕೂ ಹೆಚ್ಚು ಬಾಂಗ್ಲಾ ನಿವಾಸಿಗಳು ರಾಜ್ಯದಲ್ಲಿದ್ದು, ಮಂಡ್ಯದಲ್ಲೂ ಸಾಕಷ್ಟು ಮಂದಿ ಇದ್ದಾರೆ. ಪಶ್ಚಿಮಬಂಗಾಳದ ಮೂಲಕ ಭಾರತ ತಲುಪಿ, ಬಂಗಾಳದಲ್ಲಿ ದಾಖಲೆಗಳ ಸೃಷ್ಟಿಸಿಕೊಂಡು ದೇಶದ ನಾನಾ ಭಾಗಕ್ಕೆ ವಿಸ್ತರಣೆಯಾಗಿದ್ದಾರೆ. ಇಂಥವರ ವಿರುದ್ಧ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳದೆ ಓಟ್ ಬ್ಯಾಂಕ್‌ಗಾಗಿ ಸುಮ್ಮನೆ ಕುಳಿತಿದ್ದಾರೆ ಎಂದರು. ▶ 6ನೇ ಪುಟಕ್ಕೆ

ಬಡವರ ಮನೆಗೆ ಕನ್ನ ಹಾಕುವ ಸರ್ಕಾರ

ಬಡವರಿಗೆ ಅನ್ನ ಕೊಡಿ ಎಂದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಬಡವರ ಮನೆಗಳಿಗೆ ಕನ್ನ ಹಾಕುತ್ತಿದೆ. ಇದಕ್ಕೆ ಅವರದ್ದೇ ಪಕ್ಷದ ಹಿರಿಯ ಶಾಸಕ ಬಿ.ಆರ್.ಪಾಟೀಲ್ ಮಾಡಿರುವ ಆರೋಪವೇ ಸಾಕ್ಷಿ ಎಂದ ಅಶೋಕ್, ಇದು ನುಡಿದಂತೆ ನಡೆಯುವ ಸರ್ಕಾರವಲ್ಲ. ಹಣ ಹೊಡೆಯುವ ಸರ್ಕಾರವಾಗಿದೆ. ರಾಜೀವ್ ಗಾಂಧಿ ವಸತಿ ಯೋಜನೆ, ಪ್ರಧಾನಮಂತ್ರಿ ಆವಾಸ್ ಯೋಜನೆ, ಡಾ.ಅಂಬೇಡ್ಕರ್ ವಸತಿ ಯೋಜನೆ ಸೇರಿದಂತೆ ಎಲ್ಲಾ ವಸತಿ ಯೋಜನೆಗಳಲ್ಲಿ ಕಮಿಷನ್ ಮೂಲಕ ಹಣ ಹೊಡೆಯುವುದೇ ಸರ್ಕಾರದ ಚಾಳಿಯಾಗಿದ್ದು, ಅವರದ್ದೇ ಪಕ್ಷದ ಶಾಸಕರ ಮುಖಾಂತರ ಈ ಹಗರಣ ಬಯಲಿಗೆ ಬಂದಿದೆ ಎಂದು ಆರ್.ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು.

ದಲಿತ, ಹಿಂದುಳಿದ ವರ್ಗಕ್ಕೆ ಅನ್ಯಾಯ: ವಸತಿ ಯೋಜನೆಯಲ್ಲಿ ಈಗಾಗಲೇ ಅಲ್ಪಸಂಖ್ಯಾತರಿಗೆ ಶೇ.15ರಷ್ಟು ಮೀಸಲಾತಿ ನೀಡುವ ಮೂಲಕ ದಲಿತ, ಹಿಂದುಳಿದ ವರ್ಗಕ್ಕೆ ದೊಡ್ಡ ಅನ್ಯಾಯ ಮಾಡಿದ್ದಾರೆ. ಹಿಂದುಳಿದ ಹಿಂದೂಗಳ ಮುಖಾಂತರ ಶೇ.60ರಷ್ಟು ಕಮಿಷನ್ ಹೊಡೆದು, ಶೇ.15ರಷ್ಟು ಮುಸ್ಲಿಮರಿಗೆ ಮೀಸಲಾತಿ ನೀಡುವ ಮೂಲಕ ನಮ್ಮದು ಟಿಪ್ಪು ಸರ್ಕಾರ ಎಂಬುದನ್ನು ಸಾಬೀತುಪಡಿಸಿದ್ದಾರೆ. ವಸತಿ ಯೋಜನೆಗಳಿರುವುದು ಬಡವರಿಗೆ, ನಿರ್ಗತಿಕರಿಗೆ, ಹಿಂದುಳಿದವರಿಗೆ ಮನೆ ನೀಡುವ ಉದ್ದೇಶ. ಆದರೆ ರಾಜ್ಯ ಸರ್ಕಾರ ಉಳ್ಳವರಿಗೆ ವಸತಿ ಮಾರಿಕೊಳ್ಳುತ್ತಿದೆ. ಬಡವರ ರಕ್ತವನ್ನು ಜಿಗಣೆಗಳಂತೆ ಹೀರುತ್ತಾ, ಬಡವರ ಮನೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಈ ಕೂಡಲೇ ಇದು ನಿಲ್ಲಬೇಕು ಎಂದು ಆಗ್ರಹಿಸಿದರು.

ವಸತಿ ಇಲಾಖೆ ಭ್ರಷ್ಟಾಚಾರದಿಂದ ಜನರ ಗಮನ ಬೇರೆಡೆ ಸೆಳೆಯಲು ಪಾಟೀಲ್ ಪತ್ರ ತೇಲಿ ಬಿಟ್ಟಿದ್ದಾರೆ

- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ
- ಹಣ ಬಿಡುಗಡೆಗೆ ಶಾಸಕರೂ ಹಣ ಕೊಡಲೇಬೇಕಿದೆ
- ಎಲ್ಲವೂ ಮಧ್ಯವರ್ತಿಗಳ ಮೂಲಕವೇ ನಿರ್ವಹಣೆ ಆಗುತ್ತಿದೆ

ಬೆಂಗಳೂರು, ಜೂ.22– ವಸತಿ ಇಲಾಖೆಯಲ್ಲಿ ಕೇಳಿ ಬರುತ್ತಿರುವ ಅಕ್ರಮಗಳಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಸಚಿವ ಹೆಚ್.ಕೆ. ಪಾಟೀಲ್ ಬರೆದಿರುವ ಪತ್ರವನ್ನು ಈಗ ತೇಲಿ ಬಿಡಲಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಗಂಭೀರ ಆರೋಪ ಮಾಡಿದರು.

ಮಂಡ್ಯದಲ್ಲಿ ಸುಸಜ್ಜಿತ ಆಟೋ ನಿಲ್ದಾಣ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ನಂತರ ಅವರು ಮಾಧ್ಯಮಗಳ ಜತೆ ಮಾತನಾಡಿದರು. ವಸತಿ ಇಲಾಖೆಯಲ್ಲಿ ಏನೆಲ್ಲಾ ಅಕ್ರಮಗಳು ನಡೆದಿವೆ ಎಂಬುದನ್ನು ಜನರು ಹಾದಿಬೀದಿಗಳಲ್ಲಿ ಮಾತನಾಡುತ್ತಿದ್ದಾರೆ. ಹಣ ಕೊಟ್ಟವರಿಗೆ ಮನೆ ಹಂಚಿಕೆ ಮಾಡಲಾಗಿದೆ ಎಂದು ಸ್ವತಃ ಕಾಂಗ್ರೆಸ್ ಶಾಸಕರು, ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ್ ಮಾತನಾಡಿರುವ ಆಡಿಯೋದಲ್ಲಿ ಏನಿದೆ ಎಂಬುದನ್ನು ಎಲ್ಲರೂ ಕೇಳಿದ್ದಾರೆ. ವಸತಿ ಇಲಾಖೆ ಬಗ್ಗೆ ಕೇಳಿಬಂದಿರುವ ಈ ಆರೋಪದ ಬಗ್ಗೆ ನನಗೇನು ಅಚ್ಚರಿ ಆಗಿಲ್ಲ. ಪಾಟೀಲ್ ಅವರ ಆರೋಪಗಳ ಬಗ್ಗೆಯೂ ನನಗೆ ಅಚ್ಚರಿ ಆಗಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ ಎಂದು ಹೇಳಿದರು.



ಕುಮಾರಸ್ವಾಮಿ

ಶಾಸಕರೂ ಹಣಕೊಡಬೇಕು: ಸರ್ಕಾರ ಬಹುತೇಕ ಎಲ್ಲಾ ಇಲಾಖೆಗಳಲ್ಲಿ ದುಡ್ಡು ಬಿಡುಗಡೆ ಆಗಲು ಸ್ವತಃ ಆಡಳಿತ ಪಕ್ಷ ಶಾಸಕರು ಸೇರಿ ಎಲ್ಲಾ ಪಕ್ಷಗಳ ಶಾಸಕರು ಹಣ ಕೊಡಬೇಕಿದೆ. ಕೆಲ ಶಾಸಕರು ನಿಮ್ಮದೊಂದು ಲೆಟರ್ ಕೊಡಿ ಸರ್, ದುಡ್ಡು ತಗೊಂಡು ಬರ್ತೀವಿ ಅಂತಾರೆ. ಹೆಸರಿಗೆ ಶಾಸಕರ ಪಾತ್ರವಷ್ಟೇ. ಮಿಕ್ಕಿದ್ದೆಲ್ಲವನ್ನೂ ಮಧ್ಯವರ್ತಿಗಳು ನೋಡಿಕೊಳ್ಳುತ್ತಾರೆ. ಮಧ್ಯವರ್ತಿಗಳು ದುಡ್ಡು ಕೊಟ್ಟು ಹಣ ತರುತ್ತಾರೆ. ಇದು ರಾಜ್ಯದಲ್ಲಿ ಸದ್ಯಕ್ಕೆ ನಡೆಯುತ್ತಿರುವ ಅತ್ಯಂತ ಕೆಟ್ಟ ವ್ಯವಸ್ಥೆಯಾಗಿದೆ ಎಂದು ಆರೋಪ ಮಾಡಿದರು.

> “ ಮನೆ ಎನ್ನುವುದು ಸಮಾಜದಲ್ಲಿ ಎಲ್ಲರ ಕನಸು. ಆದರೆ, ಬಡವರ ಪಾಲಿಗೆ ಇದೊಂದು ಗಗನಕುಸುಮ. ಅಂತವರಿಂದಲೇ ವಸತಿ ಇಲಾಖೆಯಲ್ಲಿ ಸುಲಿಗೆ ಮಾಡಲಾಗುತ್ತಿದೆ. ಎಲ್ಲಾ ಇಲಾಖೆಯಲ್ಲೂ ಇದು ನಡೆಯುತ್ತಿದೆ. ಮುಂದಿನ ಚುನಾವಣೆ ಬರುವವರೆಗೆ ಕಾಯಬೇಕು. ವಿಧಾನಸೌಧದಲ್ಲಿ ಮಧ್ಯವರ್ತಿಗಳ ಅವಶ್ಯಕತೆ ಇಲ್ಲ. ಸಚಿವರೇ ಎಲ್ಲಾ ಶುರು ಮಾಡಿಕೊಂಡಿದ್ದಾರೆ. ಆಯಾ ಇಲಾಖೆಗಳಲ್ಲಿ ಅವರೇ ರೇಟ್ ಫಿಕ್ಸ್ ಮಾಡಿಕೊಂಡಿದ್ದಾರೆ! ಎಷ್ಟು ಕೊಡಬೇಕು ಅಂತಾ ರೇಟ್ ಕಾರ್ಡ್ ಇದೆ.
> –ಹೆಚ್.ಡಿ.ಕುಮಾರಸ್ವಾಮಿ

ಮೈಸೂರು ಮಿತ್ರ ಸೋಮವಾರ 23 ಜೂನ್ 2025

ಸಾವಿರಾರು ಕರಾಟೆ ಪಟುಗಳಿಂದ ಆತ್ಮರಕ್ಷಣಾ ಕೌಶಲ ಪ್ರದರ್ಶನ

● ಶಿಸ್ತು, ಆರೋಗ್ಯ ವೃದ್ಧಿ, ಪುಂಡರ ಎದುರಿಸಲು ಕರಾಟೆ ಅಗತ್ಯ: ಶಾಸಕ ಜಿಟಿಡಿ ● ಸ್ವಯಂ ರಕ್ಷಣೆಗೆ ಸಾಹಸ ಕಲೆ ಅವಶ್ಯ: ಸಂಸದ ಯದುವೀರ್




ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಹಾಕಿ ಮೈದಾನದಲ್ಲಿ ಮೈಸೂರು ಕರಾಟೆ ಅಸೋಸಿಯೇಷನ್ ಭಾನುವಾರ ಆಯೋಜಿಸಿದ್ದ ವಿಶ್ವ ಕರಾಟೆ ದಿನದ ಕಾರ್ಯಕ್ರಮಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು. ಕರಾಟೆ ಪಟುಗಳು ಸಾಮೂಹಿಕ ಕರಾಟೆ ಪ್ರದರ್ಶನ ನೀಡುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.22(ಎಂಟಿವೈ)– ವಿಶ್ವ ಕರಾಟೆ ದಿನದ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಪೆವಿಲಿಯನ್‌ನ ಹಾಕಿ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಕರಾಟೆ ಪ್ರದರ್ಶನದಲ್ಲಿ ಸಾವಿರಾರು ಕರಾಟೆ ಪಟುಗಳು ಪಾಲ್ಗೊಂಡು ಆತ್ಮರಕ್ಷಣೆಯ ಕಲೆಯ ವಿವಿಧ ಭಂಗಿಯನ್ನು ಪ್ರದರ್ಶಿಸಿ, ನೆರೆದಿದ್ದವರ ನಿಬ್ಬೆರಗಾಗಿಸಿದರು.

ಮೈಸೂರು ಕರಾಟೆ ಅಸೋಸಿಯೇಷನ್ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಮೈಸೂರಿನ ವಿವಿಧ ಬಡಾವಣೆಗಳಿಂದ ಆಗಮಿಸಿದ್ದ ಕರಾಟೆ ಪಟುಗಳು ಸಾಮೂಹಿಕವಾಗಿ ಕರಾಟೆ ಕೌಶಲ ಪ್ರದರ್ಶಿಸಿದರು. ಪ್ರಮುಖವಾಗಿ ಆತ್ಮರಕ್ಷಣೆಗೆ ಅನುಸರಿಸಬೇಕಾದ ಕರಾಟೆ ಭಂಗಿಗಳನ್ನು ಕ್ರಮಬದ್ಧವಾಗಿ ಪ್ರದರ್ಶಿಸಿ ಗಮನ ಸೆಳೆದರು.

ಕರಾಟೆ ಕಲೆ ಕಲಿಯುವುದು ಅನಿವಾರ್ಯ: ಇದಕ್ಕೂ ಮುನ್ನ ವಿಶ್ವ ಕರಾಟೆ ದಿನ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಅನಿರೀಕ್ಷಿತವಾಗಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಹಾಗೂ ಸ್ವಯಂ ಆತ್ಮರಕ್ಷಣೆಗಾಗಿ ಸಮರ ಕಲೆ ಎನಿಸಿರುವ ಕರಾಟೆಯನ್ನು ಕಲಿಯುವ ಅನಿವಾರ್ಯತೆ ಇದೆ. ಇತ್ತೀಚಿನ ವರ್ಷಗಳಲ್ಲಿ ಸಮಾಜದಲ್ಲಿ ಪುಂಡರ ಹಾವಳಿ ಹೆಚ್ಚಾಗಿದೆ. ಅವರನ್ನು ಎದುರಿಸಲು ಜನ ಅಶಕ್ತರಾಗುತ್ತಾರೆ. ಭಯೋತ್ಪಾದಕರ ವಿರುದ್ಧ ಹೋರಾಟ ಮಾಡಿದ ಸಿಂಧೂರ ಕಾರ್ಯಾಚರಣೆಯಂತೆ ಸ್ವಯಂರಕ್ಷಣೆಗೆ ಕರಾಟೆ ಕಲಿಯಬೇಕು. ಇದರಿಂದ ಆರೋಗ್ಯವನ್ನೂ ಕಾಪಾಡಿಕೊಳ್ಳಬಹುದು. ದೇಸಿ ಕ್ರೀಡೆಯಾಗಿರುವ ಕರಾಟೆ ಅಭ್ಯಾಸ ಮಾಡಿದರೆ ಜೀವನದಲ್ಲಿ ಶಿಸ್ತು, ಶಕ್ತಿ, ಆರೋಗ್ಯ ವೃದ್ಧಿಯಾಗಲಿದೆ ಎಂದರು.

ಸಂಸದರಿಗೆ ಪ್ರಶಂಸೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾದಾಗ ಕೆಲವರು ಕುಹಕದ ಮಾತುಗಳಾಡಿದರು. ಅರಮನೆ ಒಳಗೆ ಇರುವವರು ಜನ ಸಾಮಾನ್ಯರ ಕಾರ್ಯಕ್ರಮಕ್ಕೆ ಎಲ್ಲಿ ಬರುತ್ತಾರೆ ಎಂದು ಅಪಪ್ರಚಾರ ಮಾಡುತ್ತಿದ್ದರು. ಅಲ್ಲದೆ, ಜನರ ಸಮಸ್ಯೆ ಬಗೆಹರಿಸಲು ಅರಮನೆಯಿಂದ ಹೊರಗೆ ಬರಲಾರರು. ನಿಮ್ಮ ಊರಿಗೆ ಅವರು ಬರುವುದಿಲ್ಲ ಎನ್ನುತ್ತಿದ್ದರು. ಆದರೆ, ಈಗ ಒಬ್ಬ ರಾಜಕಾರಣಿಯಾಗಿ ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಓಡಾಡುತ್ತಿದ್ದಾರೆ. ಕ್ಷೇತ್ರದ ಜನರ ಸಮಸ್ಯೆ ನಿವಾರಣೆಗೆ ರಾಜ್ಯ, ಕೇಂದ್ರ ಸಚಿವರನ್ನು ಭೇಟಿ ಮಾಡಿ ಕೆಲಸ ಮಾಡುತ್ತಿದ್ದಾರೆ. ಯಾವುದೇ ಗ್ರಾಮಗಳಲ್ಲಿ ಕಾರ್ಯಕ್ರಮ ನಡೆದರೂ ಭಾಗವಹಿಸುತ್ತಿದ್ದಾರೆ. ಅಭಿವೃದ್ಧಿ ಪರವಾಗಿ ಕೆಲಸ ಮಾಡುತ್ತಿರುವುದರಿಂದ ಜನರಿಗೂ ಸಂತೋಷ ತಂದಿದೆ ಎಂದು ಸಂಸದ ಯದುವೀರರ ಕಾರ್ಯವೈಖರಿಗೆ ಜಿಟಿಡಿ ಮೆಚ್ಚುಗೆ ವ್ಯಕ್ತಪಡಿಸಿದರು.

> “ಶಿಕ್ಷಣದೊಂದಿಗೆ ಮಕ್ಕಳಿಗೆ ಕ್ರೀಡೆ ಮತ್ತು ಕರಾಟೆ ಕಲಿಸಲು ಕ್ರಮ ಕೈಗೊಳ್ಳಬೇಕು. ಸಮಾಜದಲ್ಲಿ ಕಾಡುತ್ತಿರುವ ಸಮಾಜಘಾತುಕ ಶಕ್ತಿ ಹಿಮ್ಮೆಟ್ಟಿಸಲು ಕರಾಟೆಯಂತಹ ಕಲೆ ಕಲಿಸುವುದು ಅನಿವಾರ್ಯ. ಮೈಸೂರಲ್ಲಿ ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಕ್ರೀಡಾ ಚಟುವಟಿಕೆಗಳು ಹೆಚ್ಚಾಗಿ ನಡೆಯುತ್ತಿರುವುದು ಶ್ಲಾಘನೀಯ. ನಾಡಹಬ್ಬ ದಸರಾ ಮಹೋತ್ಸವದ ಕ್ರೀಡಾ ದಸರೆಯಲ್ಲಿ ನಡೆಯುವ ಕರಾಟೆ ಸ್ಪರ್ಧೆಯಲ್ಲಿ ಮೈಸೂರಿನ ಕರಾಟೆ ಪಟುಗಳು ಹೆಚ್ಚಿನ ಪದಕ ತನ್ನದಾಗಿಸಿಕೊಳ್ಳಬೇಕು. ಅಲ್ಲದೆ, ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪದಕ ಗೆದ್ದು ಮೈಸೂರಿಗೆ ಕೀರ್ತಿ ತರಬೇಕು. **–ಜಿ.ಟಿ.ದೇವೇಗೌಡ, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ**

ಕರಾಟೆ ದಿನ ಕಾರ್ಯಕ್ರಮಕ್ಕೆ ಸಂಸದ ಯದುವೀರ್ ಒಡೆಯರ್ ಚಾಲನೆ ನೀಡಿ ಮಾತನಾಡಿ, ಕರಾಟೆ ಎಂಬುದು ಒಂದು ಶಿಸ್ತು ಬದ್ಧ ಕ್ರೀಡೆಯೂ ಆಗಿದೆ. ಇದು ಮೇಲಾಗಿ ಆತ್ಮ ರಕ್ಷಣೆಯ ಕಲೆಯೂ ಆಗಿದೆ. ಕರಾಟೆ ಕಲೆ ಕಲಿತಿದ್ದರೆ ಸಂಕಷ್ಟದ ಪರಿಸ್ಥಿತಿಯಲ್ಲಿ ನೆರವಾಗುತ್ತದೆ. ಅದರಲ್ಲೂ ಹೆಣ್ಣು ಮಕ್ಕಳಿಗೆ ಕರಾಟೆ ಕಲಿಸುವ ಅಗತ್ಯವಿದೆ. ಇತ್ತೀಚಿನ ವರ್ಷಗಳಲ್ಲಿ ಕರಾಟೆ ವಿಶ್ವಮಟ್ಟದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಎಸ್ಪಿ ಸಿ.ಮಲ್ಲಿಕ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಮಾಜಿ ನಿರ್ದೇಶಕ ಕೃಷ್ಣಯ್ಯ, ಜೆಡಿಎಸ್ ಮುಖಂಡ ಸುರೇಶ್, ಮೈಸೂರು ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಎಸ್.ಸುನಿಲ್ ಕುಮಾರ್, ಕಾರ್ಯದರ್ಶಿ ಭಾರತಿ ಆನಂದ್, ಸೋಸಲೆ ಸಿದ್ದರಾಜು ಉಪಸ್ಥಿತರಿದ್ದರು.

ಭೋವಿ ಸಮುದಾಯದವರನ್ನು ಪರಿಷತ್‌ಗೆ ನಾಮನಿರ್ದೇಶನ ಮಾಡಿ

ಕೆಪಿಸಿಸಿ ವಕ್ತಾರ ಜಿ.ವಿ.ಸೀತಾರಾಮು ಸಿಎಂ, ಡಿಸಿಎಂಗೆ ಮನವಿ

ಮೈಸೂರು, ಜೂ.22(ಜಿಎ)–ಕಾಂಗ್ರೆಸ್ ಪಕ್ಷವೂ 45 ವರ್ಷಗಳಿಂದ ಭೋವಿ ಸಮುದಾಯದವರನ್ನು ಎಂಎಲ್‌ಸಿ ಮಾಡಿಲ್ಲ. ಈ ಬಾರಿಯಾದರೂ ಈ ಸಮುದಾಯದ ಯಾರನ್ನಾದರೂ ಒಬ್ಬರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡುವಂತೆ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ವಕ್ತಾರರಾದ ಜಿ.ವಿ. ಸೀತಾರಾಮು, ಸಿಎಂ ಸಿದ್ದರಾಮಯ್ಯ, ಡಿಸಿಎಂ, ಕೆಪಿಸಿಸಿ ಅಧ್ಯಕ್ಷರೂ ಆದ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ. ಪಕ್ಷದ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದು, ಕಳೆದ ಚುನಾವಣೆಯಲ್ಲಿ ಪಕ್ಷಕ್ಕೆ ಶೇ.80ರಷ್ಟು ಮಂದಿ ಮತ ಚಲಾಯಿಸಿದ ಅಂಕಿ ಅಂಶ ಇವೆ. ಈ ಹಿಂದೆ ಸಿಎಂ ಸಿದ್ದರಾಮಯ್ಯ ಅವರು ನಿಗಮಕ್ಕೆ ತಮ್ಮನ್ನು ಅಧ್ಯಕ್ಷರನ್ನಾಗಿಸಿದ್ದರು. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಈ ಸಮುದಾಯದ ಬಗ್ಗೆ ಒಲವಿದೆ. ಹೀಗಾಗಿ ಈ ಬಾರಿ ಸಮುದಾಯದ ಒಬ್ಬರನ್ನು ಎಂಎಲ್‌ಸಿ ಮಾಡಬೇಕೆಂದು ಕೋರಿದರು.

1980ರಲ್ಲಿ ಆರ್.ಪೀರಣ್ಣ ಅವರನ್ನು ಗುಂಡೂರಾವ್ ಅವರು ಎಂಎಲ್‌ಸಿ ಮಾಡಿದ್ದರು. ನಂತರ ಇದುವರೆಗೆ ಸಮುದಾಯದ ಯಾರೂ ಸಹ ಎಂಎಲ್‌ಸಿ ಆಗಿಲ್ಲ. ಪರಿಷತ್‌ನ 75 ಸ್ಥಾನಗಳಲ್ಲಿ 64 ಚುನಾಯಿತರು, 11 ನಾಮನಿರ್ದೇಶನ ಸದಸ್ಯರಾಗಿರುತ್ತಾರೆ. ಈ 11 ಮಂದಿಯನ್ನು ರಾಜ್ಯಪಾಲರು ನಾಮ ನಿರ್ದೇಶನ ಮಾಡುತ್ತಾರೆ. ಹೀಗಾಗಿ ಪರಿಶಿಷ್ಟರ ಆಯ್ಕೆ ವೇಳೆ ಈ ಸಮುದಾಯಕ್ಕೆ ಆದ್ಯತೆ ನೀಡಬೇಕು ಎಂದರು. ಕಾಂಗ್ರೆಸ್‌ನಿಂದ ಈಗ 33 ಮಂದಿ ಎಂಎಲ್‌ಸಿಗಳು ಇದ್ದಾರೆ. ಆದರೆ ಇವರಲ್ಲಿ ಒಬ್ಬರು ಭೋವಿ ಸಮುದಾಯದವರು ಇಲ್ಲ. 2013, 2023ರ ಚುನಾವಣೆ ವೇಳೆ ಇವರು ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಪಕ್ಷದ ಪರವಾಗಿ ಕೆಲಸ ಮಾಡಿದ್ದಾರೆ. ಪಕ್ಷದ ಪರವಾಗಿ ನಿಂತಿದ್ದಾರೆ. ಆದರೂ ಒಂದೇ ಸಂಸದ ಅಥವಾ ರಾಜ್ಯಸಭಾ ಸ್ಥಾನವೂ ದೊರೆತಿಲ್ಲ. ಆದ್ದರಿಂದ ಕನಿಷ್ಠ ಪಕ್ಷ ಈ ಬಾರಿ ಎಂಎಲ್‌ಸಿಯನ್ನಾದರೂ ಮಾಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಬಸವರಾಜು, ಪರಮೇಶ್, ರಾಮಸ್ವಾಮಿ, ದಾಸ್, ದೇವರಾಜ್ ಉಪಸ್ಥಿತರಿದ್ದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣರಿಗೆ ಹುಟ್ಟುಹಬ್ಬದ ಶುಭಾಶಯ...



ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರಿಗೆ ತುಮಕೂರಿನ ಅವರ ನಿವಾಸದಲ್ಲಿ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಶಾಸಕ ಜಿ.ಟಿ.ದೇವೇಗೌಡ, ಮಾಜಿ ಕಾರ್ಪೊರೇಟರ್ ಲೋಕೇಶ್ ಪಿಯಾ, ಪೊಲೀಸ್ ವರಿಷ್ಠಾಧಿಕಾರಿಗಳು ಇನ್ನಿತರರಿದ್ದರು.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.22– 2025–26ನೇ ಸಾಲಿನಲ್ಲಿ Cerebral palsy, Muscular Dystrophy, Parkinsons, Multiple Sclerosis, Autism, intellectual disability, multiple disability (Deaf and Blind) ನ್ಯೂನತೆಯಿಂದ ಬಳಲುತ್ತಿರುವ ವಿಕಲಚೇತನರ ಆರೈಕೆದಾರರಿಗೆ ಮಾಸಿಕ 1000 ರೂ.ಗಳ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳು ವಿಕಲಚೇತನರ ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯಲ್ಲಿ ಲಭ್ಯವಿರುತ್ತದೆ. ಅರ್ಜಿಗಳನ್ನು ಜಿಲ್ಲಾ ಕಲ್ಯಾಣಾಧಿಕಾರಿಗಳ ಕಚೇರಿ ಪುಲಿಕೇಶಿ ರಸ್ತೆ ತಿಲಕ್ ನಗರ ಇವರಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು. ಮಾಹಿತಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಕಚೇರಿ, ಪುಲಕೇಶಿ ರಸ್ತೆ, ತಿಲಕ್‌ನಗರ ದೂ.0821–2490333 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ತಾಲೂಕು ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರ ದೂ.ಸಂ: ಹೆಚ್.ಡಿ.ಕೋಟೆ–9611519719, ಸರಗೂರು–7090994492, ಹುಣಸೂರು–9739644342, ಕೆ.ಆರ್.ನಗರ–9480253203, ಮೈಸೂರು ತಾಲೂಕು–6360483829, ನಂಜನಗೂಡು–8951113120, ಪಿರಿಯಾಪಟ್ಟಣ–7204151852, ತಿ.ನರಸಿಪುರ–8050829685 ಅನ್ನು ಸಂಪರ್ಕಿಸಿ.



ಪ್ರಮಾಣಪತ್ರ ವಿತರಣೆ

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಅಂಗಸಂಸ್ಥೆ ವಿವೇಕ ಗ್ರಾಮೀಣ ಜೀವಾನಾಧಾರ ಕೇಂದ್ರ ಜಯಪುರ ಶಾಖೆಯಲ್ಲಿ ಬ್ಯೂಟಿಷಿಯನ್, ಫ್ಯಾಷನ್ ಡಿಸೈನಿಂಗ್ ತರಬೇತಿ ಪಡೆದ ಮಹಿಳೆಯರಿಗೆ ವಿವೇಕ ಗ್ರಾಮೀಣ ಜೀವಾನಾಧಾರ ಕೇಂದ್ರದ ಹಿರಿಯ ವ್ಯವಸ್ಥಾಪಕ ಪಿ.ಡಿ.ನಾಯಕ್ ಪ್ರಮಾಣಪತ್ರ ವಿತರಿಸಿದರು. ಸಮಾಜ ಸೇವಕಿ ಮಹಾದೇವಿ, ಕೇಂದ್ರ ಸಂಯೋಜಕ ಅಬ್ದುಲ್ ರಶೀದ್, ಪ್ರೋಗ್ರಾಂ ಮ್ಯಾನೇಜರ್ ಚಿನ್ನಮಹಾದೇವ, ಕ್ಷೇತ್ರ ಮಾರ್ಗದರ್ಶಕರಾದ ಸಿದ್ದರಾಜು, ರುಕ್ಮಿಣಿ, ಬ್ಯೂಟಿಷಿಯನ್ ತರಬೇತಿ ಶಿಕ್ಷಕಿ ನೇತ್ರಾವತಿ, ಫ್ಯಾಷನ್ ಡಿಸೈನಿಂಗ್ ತರಬೇತಿ ಶಿಕ್ಷಕಿ ಎಚ್.ಪಲ್ಲವಿ ಉಪಸ್ಥಿತರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಗಣಿತಶಾಸ್ತ್ರ ವಿಷಯದಲ್ಲಿ ಡಾ.ಪುಟ್ಟಸ್ವಾಮಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಎಂ.ನಂಜುಂಡಸ್ವಾಮಿ ಅವರು ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿಯು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು: ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ಅನುಷ್ಠಾನ ಹೊಂದಿರುವ ಕಲ್ಯಾಣ ಕಾರ್ಯಕ್ರಮದಡಿ 2025–26ನೇ ಸಾಲಿಗೆ ಶೇ.24.10, ಶೇ.7.25, ಹಾಗೂ ಶೇ.5 ಕಲ್ಯಾಣ ಯೋಜನೆ ಅಡಿ ಪಕ್ಕಾ ಮನೆ ನಿರ್ಮಾಣಕ್ಕಾಗಿ ನೀಡುವ ಸಹಾಯ ಧನವನ್ನು ಸರ್ಕಾರದ ಇತರೆ ವಸತಿ ಯೋಜನೆಗಳೊಡನೆ ಹೊಂದಾಣಿಕೆ ಮಾಡಬಹುದಾಗಿದ್ದು, ಅರ್ಹ ಅರ್ಜಿದಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 18 ಕೊನೆಯ ದಿನ. ಆಸಕ್ತದಾರರು ನಿಗದಿತ ನಮೂನೆಯನ್ನು ಕಚೇರಿಯ ವೇಳೆಯಲ್ಲಿ ಪಡೆದು ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು.

ಹಾಸನದಲ್ಲಿ ಊಟಕ್ಕೆ ಕುಳಿತಿದ್ದಾಗಲೇ ಹೃದಯಾಘಾತ; ಯುವಕ ಸಾವು



ಹಾಸನ, ಜೂ.22– ಇತ್ತೀಚಿನ ದಿನಗಳಲ್ಲಿ ಹೃದಯಾಘಾತದಿಂದ ಬಲಿಯಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಸಣ್ಣ ವಯಸ್ಸಿನವರೇ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವುದು ಆತಂಕಕಾರಿಯಾಗಿದೆ. ಊಟಕ್ಕೆ ಕುಳಿತಿದ್ದ ವ್ಯಕ್ತಿಯೊಬ್ಬ ಎದೆನೋವೆಂದು ಹೇಳುತ್ತಿದ್ದಂತೆಯೇ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ಹಾಸನದಲ್ಲಿ ನಡೆದಿದೆ.

ಹಾಸನ ನಗರದ ಸತ್ಯಮಂಗಲ ಬಡಾವಣೆಯ 35 ವರ್ಷದ ಚೇತನ್ ಹೃದಯಾಘಾತದಿಂದ ಸಾವನ್ನಪ್ಪಿದವರು. ಕಿಕ್ಕೇರಿ ಮೂಲದ ಚೇತನ್ ಹಾಸನದ ಹಳೇ ಬಸ್ ನಿಲ್ದಾಣದ ಬಳಿ ಮೊಬೈಲ್ ಅಂಗಡಿ ಇಟ್ಟುಕೊಂಡಿದ್ದರು. ಸತ್ಯಮಂಗಲ ಬಡಾವಣೆಯಲ್ಲಿ ಪತ್ನಿ ಹಾಗೂ ಮಗುವಿನೊಂದಿಗೆ ವಾಸವಾಗಿದ್ದರು.

ರಾತ್ರಿ ಅಂಗಡಿ ಬಾಗಿಲು ಹಾಕಿಕೊಂಡು ಚೇತನ್ ಮನೆಗೆ ಬಂದಿದ್ದಾರೆ. ಈ ವೇಳೆ ಅವರ ಪತ್ನಿ ಊಟಕ್ಕೆ ಕರೆದಿದ್ದು, ಕುಳಿತುಕೊಳ್ಳುವಾಗ ದಿಢೀರ್ ಎದೆನೋವು ಕಾಣಿಸಿ ಕೊಂಡಿದೆ. ಎದೆ ನೋಯುತ್ತಿದೆ ಎಂದು ಪತ್ನಿಗೆ ಹೇಳಿ, ಮೇಲೆ ಎದ್ದೇಳುವಾಗಲೇ ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಅಷ್ಟರಲ್ಲಿ ಚೇತನ್ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.


ನಿಧನ

ಹುಯಿಲಾಳು ಚಿಕ್ಕಯ್ಯ



ಮೈಸೂರು, ಜೂ.22– ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದ ನಿವಾಸಿ ಚಿಕ್ಕಯ್ಯ(75) ತಮ್ಮ ನಿವಾಸದಲ್ಲಿ ಭಾನುವಾರ ಮುಂಜಾನೆ ನಿಧನರಾದರು. ಮೈಸೂರಿನ ಡಿ.ಬನುಮಯ್ಯ ಕಾಲೇಜಿನ ಕಚೇರಿಯಲ್ಲಿ 35 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಚಿಕ್ಕಣ್ಣ ಅವರು ಹುಯಿಲಾಳು ಗ್ರಾಮದಲ್ಲಿ ವಾಸವಾಗಿದ್ದರು. ಮೃತರು ಪತ್ನಿ ನಾಗಮ್ಮ, ಪುತ್ರ ಮಹದೇವ್, ಸೊಸೆ ಸವಿತಾ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಭಾನುವಾರ ಸಂಜೆ ಅವರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎಸ್.ಶಶಿಧರ್



ಮೈಸೂರಿನ ನಿವೇದಿತಾನಗರ ನಿವಾಸಿ, ಭಾರತೀಯ ಜೀವ ವಿಮಾ ನಿಗಮ(ಎಲ್‌ಐಸಿ)ದ ವಿಜಯನಗರ ಶಾಖೆಯ ಅಭಿವೃದ್ಧಿ ಅಧಿಕಾರಿ ಕೆ.ಎಸ್.ಶಶಿಧರ್(57) ತೀವ್ರ ಹೃದಯಾಘಾತದಿಂದ ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ(ಜೂ.23) ಮಧ್ಯಾಹ್ನ 1 ಗಂಟೆಗೆ ವಿದ್ಯಾರಣ್ಯಪುರಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.06.2025 ಸೋಮವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025 ರಿಂದ 05.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

* **ಶ್ರೀ ಚಲುವನಾರಾಯಣಸ್ವಾಮಿ ಧರ್ಮ ಕಾರ್ಯ ಟ್ರಸ್ಟ್:** ಶ್ರೀ ಚಲುವನಾರಾಯಣ ಸ್ವಾಮಿ ದೇವಸ್ಥಾನ ನೂತನ ಶಿಲಾಬಿಂಬ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ, ಮುಂಜಾನೆ 4 ಗಂಟೆಗೆ ಪಿಂಡಿಕಾ ಪೂಜೆ, ಅಷ್ಟ ಬಂಧನ ಸಹಿತ ಶ್ರೀ ಚಲುವನಾರಾಯಣ ಸ್ವಾಮಿಯವರ ಸ್ಥಿರ ಶಿಲಾ ವಿಗ್ರಹ ಪ್ರಾಣ ಪ್ರತಿಷ್ಠಾಪನೆ, ಕಳಶಾರಾಧನೆ, ಅಗ್ನಿ ಪ್ರತಿಷ್ಠ, ಗಣಪತಿ ಹೋಮ, ನವಗ್ರಹ ಹೋಮ, ಪ್ರಾಣ ಪ್ರತಿಷ್ಠಾಪನಾ ಹೋಮ, ನಯನೋನ್ಮಲ ಹೋಮ, ಪ್ರಧಾನ ಮೂರ್ತಿ ಹೋಮ, ಪ್ರಾಯಶ್ಚಿತ ಶಾಂತಿ ಹೋಮ, ಪೂರ್ಣಾಹುತಿ, ಕಳಶ ವಿಸರ್ಜನೆ, ದೇವಾಲಯ ಪ್ರದಕ್ಷಿಣೆ, ಮಹಾಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಅಲಂಕಾರ ಸೇವೆ, ಕೂಷ್ಮಾಂಡ ಬಲಿ, ಗೋದರ್ಶನ, ಪಂಚಕನ್ಯೆಯರ ದರ್ಶನ, ದರ್ಪಣ ದರ್ಶನ, ಕದಳಿ ಛೇದನ, ಸಂಕಲ್ಪ, ಪುಷ್ಪಾರ್ಚನೆ, ಧೂಪ–ದೀಪ ನೈವೇದ್ಯ, ಬಲಿಹರಣ, ಅಷ್ಟಾವಧಾನ ಸೇವೆ, ರಾಷ್ಟ್ರಾಶೀರ್ವಾದ, ಮಹಾ ಮಂಗಳಾರತಿ ಮತ್ತು ತೀರ್ಥ–ಪ್ರಸಾದ ವಿನಿಯೋಗ, 1 ಗಂಟೆಗೆ ಮಹಾಪ್ರಸಾದ, ಶುಭಾಶೀರ್ವಾದ: ಶ್ರೀಕ್ಷೇತ್ರ ಸುತ್ತೂರಿನ ಶ್ರೀ ಜಗದ್ಗುರು ಶಿವರಾತ್ರೀಶ್ವರ ದೇಶೀಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ಯೋಗಾನರಸಿಂಹಸ್ವಾಮಿ ದೇವಸ್ಥಾನದ ಶ್ರೀ ಭಾಷ್ಯಂ ಸ್ವಾಮೀಜಿ, ಮೇಲುಕೋಟೆಯ ಶ್ರೀ ಮೇಲುಕೋಟೆ ರಾಮಪ್ರಿಯ ಮತ್ತು ರಂಗಪ್ರಿಯ, ಸ್ಥಳ: ಹೊರವರ್ತುಲ ರಸ್ತೆ, ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಹತ್ತಿರ, ಮೇಟಗಳ್ಳಿ.

* **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

* **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ಮುಖದಲ್ಲಿ ಮೊಡವೆಗಳಿಗೆ ಚಿಕಿತ್ಸೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

* **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಗುಜರಾತ್ ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

* **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳು ಮತ್ತು ಸಾಧಕರಿಗೆ ಸನ್ಮಾನಕ್ಕಾಗಿ ಇಂಡಕ್ಷನ್ ಕಾರ್ಯಕ್ರಮ, ಉದ್ಘಾಟನೆ: ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಮಹಾಮೇದ ನಂದಾಜೀ, ಅಧ್ಯಕ್ಷತೆ: ಸಂಸ್ಥೆಯ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10 ಗಂಟೆಗೆ.

* **ಕರ್ನಾಟಕ ರಾಜ್ಯ ಸವಿತಾ ನಾದಬ್ರಹ್ಮ ಸಂಗೀತ ಕಲಾ ಸಂಘ, ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಕಣ್ಣಿನ ಆಸ್ಪತ್ರೆ, ರೋಟರಿ ಪಂಚಶೀಲ, ಮೈಸೂರು ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ:** ದಿ॥ ಬಿ.ಎಂ. ಮರೀಗೌಡ ಸ್ಮರಣಾರ್ಥ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿ: ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಸ್ಥಳ: ಕರ್ನಾಟಕ ರಾಜ್ಯ ಸವಿತಾ ನಾದಬ್ರಹ್ಮ ಸಂಗೀತ ಕಲಾ ಸಂಘದ ಆವರಣ, ತೊಣಚಿಕೊಪ್ಪಲು, ಗಣೇಶ ಭಂಡಾರದ ಹತ್ತಿರ, ಬೆಳಗ್ಗೆ 10ಕ್ಕೆ.

* **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶೀಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್ ರೋಟರಿ ಭವನ, ವಿಜಯನಗರ, ರೈಲ್ವೇ ಬಡಾವಣೆ, ಬೆಳಗ್ಗೆ 10.30ರಿಂದ.

* **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಶ್ರೀ ನಟರಾಜ ಪ್ರತಿಷ್ಠಾನ (ಶ್ರೀ ಹೊಸಮಠ):** ಹಿರಿಯ ಜಾನಪದ ವಿದ್ವಾಂಸ ಟಿ.ಎಸ್. ರಾಜಪ್ಪ ಅವರಿಗೆ ನುಡಿನಮನ, ರಾಜಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು, ಸ್ಥಳ: ಶ್ರೀ ನಟರಾಜ ಸಭಾ ಭವನ, ಶ್ರೀ ಹೊಸ ಮಠ, ಬೆಳಗ್ಗೆ 11 ಗಂಟೆಗೆ.

* **ಓಟಿಕೇರ್ ಆಸ್ಪತ್ರೆ:** ಉಚಿತ ವಾಕ್ ಮತ್ತು ಶ್ರವಣ ತಪಾಸಣಾ ಶಿಬಿರ, ಸ್ಥಳ: ಓಟಿಕೇರ್ ಆಸ್ಪತ್ರೆ, ಸಯ್ಯಾಜಿರಾವ್ ರಸ್ತೆ, ಅಗ್ರಹಾರದ ಬಳಿ, ಬೆಳಗ್ಗೆ 11ರಿಂದ.

* **ಮಹಾರತ್ನ ಟ್ರಸ್ಟ್ (ಮೈಸೂರು):** ವಿಶ್ವ ಸಂಗೀತ ಮತ್ತು ಯೋಗ ದಿನಾಚರಣೆ, ಉದ್ಘಾಟನೆ: ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ನಗರ ಸಮಿತಿ ಅಧ್ಯಕ್ಷ ಕೆ.ಎಸ್. ಗೋಪಾಲಕೃಷ್ಣ, ಅಧ್ಯಕ್ಷತೆ: ಸಹಕಾರ ರತ್ನ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಸಿ.ವಿ. ಪಾರ್ಥಸಾರಥಿ, ಸ್ಥಳ: ಬಸವ ಸಮಿತಿ, ಕೊಡವ ಸಮಾಜದ ಪಕ್ಕ, ವಿಜಯನಗರ, ಸಂಜೆ 4 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ‘ಸಸ್ಯ ಸಿರಿ’: ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ– ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಮತ್ತೂರು ಕುಮಾರಸ್ವಾಮಿ, ಸದಾಶಿವ ಪಾಟೀಲ್ ಹಾಗೂ ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ‘ಭರವಸೆ ಹೊನಲು–ವೈದ್ಯರ ಕಿವಿಮಾತು’ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30 ಯೋಗ ಕುರಿತ ವಿಶೇಷ ಸರಣಿ– ‘ಮಹಾಯೋಗ’, 8.35 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆರ್.ಕೆ. ಶ್ರೀಕಂಠನ್–ಹಾಡುಗಾರಿಕೆ, 10.30 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ: ಒಂದು ವರ್ಷ ಪೂರೈಸಿದ ಸಂದರ್ಭದಲ್ಲಿ ವಿಶೇಷ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಸ್ತುತಿ– ಬಿ.ದಿಗ್ವಿಜಯ್, ಕೀರ್ತನ .ವಿ ಹಾಗೂ ಚಿನ್ಮಯಿ ಕೆ.ಎಸ್. **ಮಧ್ಯಾಹ್ನ:** 11.15 ಮಿಶ್ರ ಮಾಧುರ್ಯ, 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ: ಜಾನಕಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಎನ್.ಜ್ಯೋತಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ: ‘ಬಂಗಾರದ ಮನೆ’, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ: ತಾಳಮದ್ದಲೆ. **ಸಂಜೆ:** 4.00 ಮಹಿಳಾರಂಗ: ಪುರಂದರ ದಾಸರ ಕುರಿತು ಮೈಸೂರಿನ ನಿವೇದಿತಾ ನಗರದ ಚಿತ್ಕಲಾ ಮಹಿಳಾ ಸಂಘದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ, 4.45 ಹಿಂದಿ ಪಾಠ: ಪ್ರಸ್ತುತಿ: ಎಸ್.ಎನ್. ಭಟ್ ಸೈಪಂಗಲ್ಲು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕಳೆಗಳ ನಿರ್ವಹಣೆ ಈ ಕುರಿತು ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ (ICAR) ನಿವೃತ್ತ ವಿಜ್ಞಾನಿ ಮೈಸೂರಿನ ಎನ್.ಟಿ.ಯದುರಾಜ್ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವ ಮೂರ್ತಿ. **ರಾತ್ರಿ:** 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಯುವಪ್ರತಿಭೆ: ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105 ಘಟಿಕೋತ್ಸವದಲ್ಲಿ ಬಿ.ಎ. ಪದವಿಯ ಸಂಸ್ಕೃತ ಭಾಷಾ ವಿಷಯದಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ 2 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಮೈಸೂರಿನ ಶ್ರೇಯಾ ಸಿ.ಎಸ್. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 8.30 ಹಿಂದಿ ಚಿತ್ರಗೀತೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ‘ಯಕ್ಷಸಂಪದ’: ಬಡಗುತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಪ್ರಸ್ತುತಿ–ದಿವಾಕರ ಹೆಗಡೆ, 10.30 ಸವಿನೆನಪು.

ಮೈಸೂರು ಮಿತ್ರ

ಬಸವನಹಳ್ಳಿಯ ಸರ್ವೇ ನಂ.108, 109ರಲ್ಲಿ ಒಟ್ಟು 8.28 ಎಕರೆ ಜಮೀನು ಸ್ವಾಧೀನಕ್ಕೆ

ಇಂದು ಎಂಡಿಎಯಿಂದ ತೆರವು ಕಾರ್ಯಾಚರಣೆ

ಸದರಿ ಭೂಮಿಯಲ್ಲಿರುವ ಎರಡು ಮನೆ, ಸಾಮಗ್ರಿ ತೆರವು

ಮೈಸೂರು,ಜೂ.22(ಪಿಎಂ)– ತಾಲೂಕಿನ ಬಸವನಹಳ್ಳಿ ಗ್ರಾಮದ ಸರ್ವೇ ನಂ. 108ರಲ್ಲಿ 4.36 ಹಾಗೂ 109ರಲ್ಲಿ 3.32 ಎಕರೆ ಸೇರಿದಂತೆ ಒಟ್ಟು 8.28 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಮುಂದಾಗಿದೆ. ಸದರಿ ಜಮೀನಿನಲ್ಲಿ ನಿರ್ಮಿಸಿರುವ ಎರಡು ಮನೆಗಳು ಹಾಗೂ ಜಮೀನಿನಲ್ಲಿ ಹಾಕಿರುವ ಸಾಮಗ್ರಿಗಳನ್ನು ತೆರವುಗೊಳಿಸಲು ಜೂ.23ರಂದು ಬೆಳಗ್ಗೆ 6 ಗಂಟೆಗೆ ಕಾರ್ಯಾಚರಣೆ ನಡೆಸಲು ಎಂಡಿಎ ಸಿದ್ಧತೆ ನಡೆಸಿದೆ.

ಈ ಸಂಬಂಧ ಅಧಿಕೃತ ಜ್ಞಾಪನ ಪತ್ರ ಪ್ರಕಟಿಸಿರುವ ಎಂಡಿಎ ಕಾರ್ಯದರ್ಶಿಗಳು ಹಾಗೂ ಕಂಪೇಟೆಂಟ್ ಆಫೀಸರ್ ಫಾರ್ ಎವಿಕ್ಷನ್‌ರವರು, ಪೊಲೀಸ್ ಅಧಿಕಾರಿಗಳು ಹಾಗೂ ಎಂಡಿಎ ಅಧಿಕಾರಿಗಳಿಗೆ ಕಾರ್ಯಾಚರಣೆಯ ಮಾಹಿತಿ ರವಾನಿಸಿದ್ದಾರೆ. ಮೈಸೂರು ತಾಲೂಕು ಕಸಬಾ ಹೋಬಳಿ ಬಸವನಹಳ್ಳಿ ಗ್ರಾಮದ ಸದರಿ ಸರ್ವೇ ನಂಬರ್‌ಗಳ ಒಟ್ಟು 8 ಎಕರೆ 28 ಗುಂಟೆ ಜಮೀನನ್ನು 'ವಿಜಯನಗರ 4ನೇ ಹಂತ ಬಡಾವಣೆ ನಿರ್ಮಾಣಕ್ಕಾಗಿ ಪ್ರಾಧಿಕಾರವು 1991ರ ಡಿ.23ರಂದು ಪ್ರಾಥಮಿಕ ಅಧಿಸೂಚನೆ ಹಾಗೂ 1992ರ ಡಿ.10ರಂದು ಅಂತಿಮ ಅಧಿಸೂಚನೆ ಹೊರಡಿಸಿದೆ.

1994ರ ಆ.6ರಂದು ಸಾಮಾನ್ಯ ಅವಾರ್ಡ್ ನಿರ್ಣಯಿಸಿ, ಭೂ ಪರಿಹಾರದ ಮೊತ್ತ 4,55,506 ರೂ.ಗಳನ್ನು 2002ರ ಮಾ.5ರಂದು ಸಿವಿಲ್ ನ್ಯಾಯಾಲಯಕ್ಕೆ ಠೇವಣಿಕರಿಸಲಾಗಿದೆ. ಅದಾಗ್ಯೂ ಅಂತಿಮ ಅಧಿಸೂಚನೆ ಹೊರಡಿಸಿ ಯೋಜನೆ ಕಾರ್ಯಗತ ಮಾಡದೇ ಇರುವುದನ್ನು ಭೂ ಮಾಲೀಕರು ಪ್ರಶ್ನಿಸಿ ಭೂಸ್ವಾಧೀನತೆ ಕೈಬಿಡುವಂತೆ ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದರು. ಸದರಿ ಪ್ರಕರಣದಲ್ಲಿ ಹೈಕೋರ್ಟ್ ಪ್ರಾಧಿಕಾರದ ಪರವಾಗಿ ತೀರ್ಪು ನೀಡಿದೆ.

ಸದರಿ ಸರ್ವೇ ನಂಬರ್‌ಗಳ ಜಮೀನಿನಲ್ಲಿ ಎರಡು ಮನೆಗಳಿದ್ದು, ಜಮೀನಿನಲ್ಲಿ ಜಲ್ಲಿ ಮತ್ತು ಮರಗಳನ್ನು ಸುರಿಯಲಾಗಿದೆ ಎಂದು ಎಂಡಿಎ ವಲಯ ಕಚೇರಿ 3ರ ವಲಯಾಧಿಕಾರಿಗಳು ವರದಿ ನೀಡಿದ್ದಾರೆ. ಬಸವನಹಳ್ಳಿ ಗ್ರಾಮದ ಪ್ರಸ್ತಾಪಿತ ಸರ್ವೇ ನಂಬರ್‌ಗಳ ಒಟ್ಟು 8.28 ಎಕರೆ ಜಮೀನು ಪ್ರಾಧಿಕಾರದ ಆಸ್ತಿಯಾಗಿದ್ದು, ಸದರಿ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಿರುವುದು ಕಾನೂನು ಬಾಹಿರವಾದ ಕಾರಣ 2016ರ ಸರ್ಕಾರದ ಸುತ್ತೋಲೆಯಂತೆ ತೆರವು ಕಾರ್ಯಾಚರಣೆ ನಿಗದಿಪಡಿಸಲಾಗಿದೆ. ಆದ್ದರಿಂದ ಸದರಿ ಕಾರ್ಯಾಚರಣೆಗೆ ಪ್ರಾಧಿಕಾರದ ಅಧಿಕಾರಿಗಳು ಖುದ್ದು ಹಾಜರಾಗಬೇಕೆಂದು ಅಧಿಕೃತ ಜ್ಞಾಪನ ಪತ್ರದಲ್ಲಿ ಸೂಚಿಸಲಾಗಿದೆ.

ಬಸವ ಮಾರ್ಗ ಸಂಸ್ಥೆಯಿಂದ ಕುಕ್ಕರಹಳ್ಳಿ ಸರ್ಕಾರಿ ಶಾಲೆಗೆ ನೂತನ ಬಸ್ ಕೊಡುಗೆ

ಸದ್ಬಳಕೆಗೆ ಸಂಸ್ಥೆಯ ಛೇರ್ಮನ್ ಎಸ್.ಬಸವರಾಜು ಸಲಹೆ



ಮೈಸೂರಿನ ಕುಕ್ಕರಹಳ್ಳಿ ಸರ್ಕಾರಿ ಶಾಲೆಗೆ ಬಸವ ಮಾರ್ಗ ಸಂಸ್ಥೆಯಿಂದ ನೂತನ ಬಸ್ ಅನ್ನು ಕೊಡುಗೆಯಾಗಿ ನೀಡಲಾಯಿತು. ಚಿತ್ರದಲ್ಲಿ ಸಂಸ್ಥೆ ಛೇರ್ಮನ್ ಎಸ್.ಬಸವರಾಜು ಹಾಗೂ ಶಾಲಾ ವರ್ಗದವರಿದ್ದಾರೆ.

ಮೈಸೂರು,ಜೂ.22(ಪಿಎಂ)– ಬಸವ ಮಾರ್ಗ ಸಂಸ್ಥೆ ಹಾಗೂ ಇಂಡಿಯನ್ ಟಿವಿ ಛೇರ್ಮನ್ ಎಸ್.ಬಸವರಾಜು ಅವರು ತಮ್ಮ ಸಮಾಜ ಸೇವೆಯ ಭಾಗವಾಗಿ ನಗರದ ಕುಕ್ಕರಹಳ್ಳಿಯ ಸರ್ಕಾರಿ ಪ್ರೌಢಶಾಲೆಗೆ ನೂತನ ಬಸ್ಸೊಂದನ್ನು ಕೊಡುಗೆಯಾಗಿ ನೀಡಿದರು.

ಈ ಬಸ್ಸಿಗೆ ಅವರು ಅಧಿಕೃತ ಚಾಲನೆ ನೀಡಿ ಮಾತನಾಡಿ, ಈ ಬಸ್ಸು ಕೇವಲ ವಾಹನವಲ್ಲ, ಇದು ಮಕ್ಕಳ ಭವಿಷ್ಯವನ್ನು ಬೆಳಗಿಸುವಲ್ಲಿ ಮಹತ್ತರ ಪಾತ್ರ ವಹಿಸಲಿದೆ. ಈ ಬಸ್ಸು ನನ್ನದಲ್ಲ, ನಿಮ್ಮದು ಎಂದು ಭಾವಿಸಬೇಕು. ವಿದ್ಯಾರ್ಥಿಗಳು ಈ ಬಸ್ಸನ್ನು ಸದುಪಯೋಗಪಡಿಸಿಕೊಂಡು ಉನ್ನತ ಸ್ಥಾನದತ್ತ ಸಾಗಬೇಕು. ಈ ವರ್ಷ ಸಂಸ್ಥೆಯ ವತಿಯಿಂದ 5 ಶಿಕ್ಷಕರನ್ನು ನೇಮಿಸಲಾಗಿದೆ ಎಂದು ಹೇಳಿದರು.

ಬಸವ ಮಾರ್ಗ ಸಂಸ್ಥೆ ಕಳೆದ ಮೂರು ವರ್ಷಗಳಿಂದ ಈ ಶಾಲೆಯನ್ನು ದತ್ತು ಪಡೆದುಕೊಂಡು ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಈಗ ಬಸ್ ವ್ಯವಸ್ಥೆಯ ಜೊತೆಗೆ ಹಾಸ್ಟೆಲ್ ಹಾಗೂ ಟ್ಯೂಷನ್ ಸೌಲಭ್ಯವನ್ನೂ ಕಲ್ಪಿಸಿದೆ. ಮುಂದೆಯೂ ಶಾಲೆಗೆ ಅಗತ್ಯವಾದ ಯಾವುದೇ ಸಹಾಯ ಕಲ್ಪಿಸಲು ಸಂಸ್ಥೆ ಸಿದ್ಧವಿದೆ ಎಂದು ಭರವಸೆ ನೀಡಿದರು.

ಇದೇ ವೇಳೆ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕರು, ನಮ್ಮ ಶಾಲೆ ಈಗ ಕ್ರಾಂತಿಕಾರಕ ಬದಲಾವಣೆಯತ್ತ ಸಾಗುತ್ತಿದೆ. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಶ್ರಮ ಒಂದೆಡೆಯಾದರೆ, ಬಸವ ಮಾರ್ಗ ಸಂಸ್ಥೆಯ ಸೇವೆಯೂ ಮಹತ್ತರ ಕೊಡುಗೆಯಾಗಿದೆ ಎಂದು ಹೇಳಿದರು. ಶಾಲೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎನ್.ಆರ್.ಕ್ಷೇತ್ರದಲ್ಲಿ ವಿಶ್ವ ಯೋಗ ದಿನ



ಮೈಸೂರಿನ ಎನ್.ಆರ್. ಕ್ಷೇತ್ರದ ಶ್ರೀ ಕಲ್ಯಾಣ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಬಿಜೆಪಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ಆಯೋಜಿಸಿತ್ತು.

ಮೈಸೂರು, ಜೂ.22(ಬಿಎಲ್‌ಯು)– ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶ್ರೀ ಕಲ್ಯಾಣ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಭಾರತೀಯ ಜನತಾ ಪಾರ್ಟಿ ವಿಶ್ವ ಯೋಗ ದಿನಾಚರಣೆಯನ್ನು ಆಯೋಜಿಸಿತ್ತು.

ಮಾಜಿ ಮೇಯರ್ ಸಂದೇಶ್ ಸ್ವಾಮಿ, ಯೋಗ ಶಿಕ್ಷಕರಾದ ಹೇಮ, ಕುಮಾರ್, ಕ್ಷೇತ್ರದ ಅಧ್ಯಕ್ಷ ಎಸ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಪದ್ಮನಾಭ, ಜಿ.ಮಂಜು, ನಗರ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಮಣಿರತ್ನಂ, ಸಂಚಾಲಕರಾದ ಸು.ಮುರುಳಿ, ವೇಲು, ಪದಾಧಿಕಾರಿಗಳಾದ ಶಿವಕುಮಾರ್, ಆನಂದ್, ರಮೇಶ್, ಸುರೇಶ್, ಶೇಖರ್, ಕೃಷ್ಣಮೂರ್ತಿ, ರಾವತ್, ನವೀನ್, ಕಿರಣ್ ಸಿಂಗ್, ಸಂದೇಶ್, ಅರುಣ್, ಮಾಲಿನಿ, ಪಾಲಾಕ್ಷ, ಕವಿತಾ ಸಿಂಗ್, ಉಮಾಶ್ರೀ, ದಿವ್ಯ, ಪವಿತ್ರ, ರಾಧಾ, ಪವನ್, ಅಖಿಲೇಶ್, ರೀತು ಹಲವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಹಾಡು ಕೋಗಿಲೆ ತಂಡದಿಂದ ಸಂಗೀತ ಗಾನಾಮೃತ ಕಾರ್ಯಕ್ರಮ

ಮೈಸೂರು,ಜೂ.22(ಎಂಟಿವೈ)– ವಿಶ್ವ ಸಂಗೀತ ದಿನದ ಅಂಗವಾಗಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ನಾಳೆ(ಜೂ.23) ಸಂಜೆ 4 ಗಂಟೆಗೆ ಹಾಡು ಕೋಗಿಲೆ ತಂಡದಿಂದ ಕನ್ನಡ ಮತ್ತು ಹಿಂದಿ ರೆಟ್ರೋ ಗೀತೆಗಳ ಸಂಗೀತ ಗಾನಾಮೃತ ಕಾರ್ಯಕ್ರಮ ಜರುಗಲಿದೆ. ಸಂಜೆ 4ರಿಂದ ರಾತ್ರಿ 9 ಗಂಟೆವರೆಗೆ ಜರುಗುವ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಡಾ.ರಾಜ್‌ಕುಮಾರ್. ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಆಶಾ ಬೋಸ್ಲೆ ಸೇರಿದಂತೆ ದಿಗ್ಗಜ ಗಾಯಕರು ಹಾಡಿರುವ ಸೂಪರ್ ಹಿಟ್ ಗೀತೆಗಳನ್ನು ಸೋಹನ್ ಕುಮಾರ್, ರಾಜಕುಮಾರ್ ಭಾವಸಾರ್, ಎಂ.ಜೆ.ಶಾಲಿನಿ, ಜಗದೀಶ್ ಕುಶ್ನಿಕರ್, ಮಮತಾಗೌಡ, ಜಯರತ್ನ, ವೀಣಾ ಸಂಪತ್, ರಾಮಪ್ರಸಾದ್,ರಂಗಸ್ವಾಮಿ ಹಾಗೂ ಇನ್ನಿತರರು ಪ್ರಸ್ತುತಪಡಿಸಲಿದ್ದಾರೆ

ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯಲ್ಲಿ ಯೋಗ ಸಮಾಗಮ

● ಅಂತರರಾಷ್ಟ್ರೀಯ ಖ್ಯಾತಿಯ ಯೋಗಗುರು ಡಾ.ರಮೇಶ್ ಶೆಟ್ಟಿ ಅವರಿಂದ ಯೋಗ ಪಾಠ ● ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಮಹೇಶ್ ಶೆಣೈ ಯೋಗದಲ್ಲಿ ಭಾಗಿ





ಮೈಸೂರಿನ ಜೆ.ಪಿ.ನಗರದ ಕಾಮಾಕ್ಷಿ ಆಸ್ಪತ್ರೆಯಲ್ಲಿ ಭಾನುವಾರ ನಡೆದ ಯೋಗ ಸಮಾಗಮ ಕಾರ್ಯಕ್ರಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಯೋಗಗುರು ಡಾ.ರಮೇಶ್ ಶೆಟ್ಟಿ ಉದ್ಘಾಟಿಸಿದರು. ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಎಂ.ಮಹೇಶ್ ಶೆಣೈ, ಅಸಿಸ್ಟೆಂಟ್ ಅಡ್ಮಿನ್ ನಂದಿತ ಶೆಣೈ, ಶೃತಿ ಅಶೋಕ್, ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನ ಕುಮಾರ್, ರೋಟರಿ ಸಂಸ್ಥೆಯ ಸಮೀರ್ ಕಶ್ಯಪ್ ಅವರನ್ನು (ಎಡಚಿತ್ರ) ಕಾಣಬಹುದು. ಯೋಗಾಭ್ಯಾಸ ಮಾಡುತ್ತಿರುವ ಮಹೇಶ್ ಶೆಣೈ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು, ಮಕ್ಕಳನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಜೂ.22(ಬಿಎಲ್‌ಯು)– ಮೈಸೂರಿನ ಜೆ.ಪಿ.ನಗರದ ಕಾಮಾಕ್ಷಿ ಆಸ್ಪತ್ರೆಯಲ್ಲಿ ಇಂದು ವಿಶ್ವ ಯೋಗ ದಿನಾಚರಣೆ ಅಂಗವಾಗಿ ಯೋಗ ಸಮಾಗಮ ನಡೆಯಿತು. ಅಂತರರಾಷ್ಟ್ರೀಯ ಖ್ಯಾತಿಯ ಯೋಗಗುರು ಡಾ.ರಮೇಶ್ ಶೆಟ್ಟಿ ಅವರು ಆಸ್ಪತ್ರೆಯ ವೈದ್ಯರು, ನರ್ಸ್‌ಗಳು, ಸಿಬ್ಬಂದಿಗಳು ಹಾಗೂ ಶಾಲಾ ಮಕ್ಕಳಿಗೆ ಯೋಗಾಭ್ಯಾಸ ಹೇಳಿಕೊಟ್ಟರು.

ಆಸ್ಪತ್ರೆಯ ಸಭಾಂಗಣದಲ್ಲಿ ನಡೆದ ಯೋಗ ಸಮಾಗಮವನ್ನು ಡಾ.ರಮೇಶ್ ಶೆಟ್ಟಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಬೆಳಿಗ್ಗೆ 7 ಗಂಟೆಗೆ ಆರಂಭವಾದ ಯೋಗ ಸಂಗಮದಲ್ಲಿ ಡಾ.ರಮೇಶ್ ಶೆಟ್ಟಿ ಅವರು ಒಂದೂವರೆ ಗಂಟೆಗಳ ಕಾಲ ಯೋಗದ ವಿವಿಧ ಆಸನಗಳನ್ನು ಮಾಡಿಸಿ ಯೋಗದ ಮಹತ್ವ ತಿಳಿಸಿದರು. ಈ ವೇಳೆ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಎಂ.ಮಹೇಶ್ ಶೆಣೈ ಅವರು ಕೂಡ ಯೋಗಾಭ್ಯಾಸದಲ್ಲಿ ಭಾಗಿಯಾಗಿದ್ದರು.

ಮಂತ್ರಗಳನ್ನು ಉಲ್ಲೇಖಿಸುವ ಮೂಲಕ ಆಧ್ಯಾತ್ಮಿಕತೆಯ ಮಿಳಿತವಾಗಿರುವ 12 ವಿವಿಧ ಬಗೆಯ ಸೂರ್ಯ ನಮಸ್ಕಾರಗಳನ್ನು ಮಾಡಿಸಿದರು. ಇದಲ್ಲದೆ ತಾಡಾಸನ, ವೃಕ್ಷಾಸನ, ರುತ್ಥಾಸನ, ಉತ್ಕಟಾಸನ, ತ್ರಿಕೋನಾಸನ, ಪರಿವೃತ್ತ ಪಾರ್ಶ್ವಕೋನಾಸನ, ಪಶ್ಚಿಮೊತ್ಥಾಸನ, ಶಿರಸ್ಯಾಸನ, ಮೃಷ್ಠಾಸನ, ಶಿಲಾಭ್ಯಾಸನ ಸೇರಿದಂತೆ ಯೋಗದ ವಿವಿಧ ಭಂಗಿಗಳನ್ನು ಡಾ.ರಮೇಶ್ ಶೆಟ್ಟಿ ಅವರು ಹೇಳಿಕೊಟ್ಟರು.

ನೂರಾರು ಸಂಖ್ಯೆಯಲ್ಲಿ ಆಸಕ್ತಿಯಿಂದ ಭಾಗಿಯಾಗಿದ್ದ ಆಸ್ಪತ್ರೆಯ ವೈದ್ಯರು, ನರ್ಸ್‌ಗಳು, ಅಜಿತ ನೆಲೆ ಟ್ರಸ್ಟ್ ಮಕ್ಕಳು, ರೋಟರಿ ಕ್ಲಬ್ ಆಫ್ ಮೈಸೂರ್‌ನವರು, ರೋಟರಿ ಕ್ಲಬ್ ಆಫ್ ಜೆ.ಪಿ. ನಗರದವರು ಯೋಗದ ವಿವಿಧ ಆಸನಗಳನ್ನು ಮಾಡಿದರು. ಈ ಮೂಲಕ ಪ್ರತಿದಿನ ಯೋಗಾಭ್ಯಾಸ ಮಾಡುವುದಾಗಿ ಸಂಕಲ್ಪ ಮಾಡಿದರು.

ಇದೇ ವೇಳೆ ಮಾತನಾಡಿದ ಡಾ.ರಮೇಶ್ ಶೆಟ್ಟಿ ಅವರು, ಯೋಗಾಸನ ದೈಹಿಕ ವ್ಯಾಯಾಮ ಮಾತ್ರವಲ್ಲದೆ ಮನಸ್ಸು, ಶರೀರ ಮತ್ತು ಉಸಿರಾಟದ ಗಮನವನ್ನು ಕೇಂದ್ರೀಕರಿಸುವುದಾಗಿದೆ. ಅಲ್ಲದೆ ಯೋಗದ ವಿವಿಧ ರೀತಿಯ ಆಸನಗಳ ಮೂಲಕ ಆಧ್ಯಾತ್ಮಿಕತೆಯಲ್ಲಿ ಮನಸು ಲೀನಗೊಳಿಸುವುದಾಗಿದೆ. ಜೊತೆಗೆ ಶರೀರ ಮತ್ತು ಮನಸ್ಸನ್ನು ಒಂದುಗೂಡಿಸುವುದಾಗಿದೆ ಎಂದು ಯೋಗದ ಮಹತ್ವವನ್ನು ತಿಳಿಸಿದರು.

ದೇಹವನ್ನು ನಮಗೆ ಬೇಕಾದ ಹಾಗೆ ನಿಯಂತ್ರಿಸಿ ನೋವುಗಳಿಲ್ಲದೆ ಯೋಗದ ವಿವಿಧ ಆಸನಗಳನ್ನು ಮಾಡುವುದು ಯೋಗಾಸನವಾಗಿದೆ ಎಂದು ಯೋಗದ ಅರ್ಥವನ್ನು ಡಾ.ರಮೇಶ್ ಶೆಟ್ಟಿ ವ್ಯಾಖ್ಯಾನಿಸಿದರು. ಆಸ್ಪತ್ರೆಯ ಅಸಿಸ್ಟೆಂಟ್ ಅಡ್ಮಿನ್ ನಂದಿತ ಶೆಣೈ, ಶೃತಿ ಅಶೋಕ್, ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನ ಕುಮಾರ್, ರೋಟರಿ ಸಂಸ್ಥೆಯ ಸಮೀರ್ ಕಶ್ಯಪ್ ಕಾರ್ಯಕ್ರಮದ ಉದ್ಘಾಟನೆ ವೇಳೆ ಹಾಜರಿದ್ದರು.

ಆಸ್ಪತ್ರೆಯ ಕರ್ಮಯೋಗಿಗಳ ಆರೋಗ್ಯ ಕಾಪಾಡಲು ಯೋಗ ಸಮಾಗಮ

ಇದೇ ವೇಳೆ ಮಾತನಾಡಿದ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಎಂ.ಮಹೇಶ್ ಶೆಣೈ ಅವರು, ಆಸ್ಪತ್ರೆಗೆ ಬರುವ ರೋಗಿಗಳಿಗೆ ಚಿಕಿತ್ಸೆ ನೀಡಿ ಜನ ಸೇವೆ ಮಾಡುವ ಆಸ್ಪತ್ರೆಯ ಕರ್ಮಯೋಗಿಗಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಯೋಗ ಸಮಾಗಮ ಹಮ್ಮಿಕೊಳ್ಳಲಾಗಿದೆ ಎಂದರು.

ಆಸ್ಪತ್ರೆಯ ವೈದ್ಯರು, ನರ್ಸ್‌ಗಳು ಸೇರಿದಂತೆ ಸಿಬ್ಬಂದಿಗಳು ನಮ್ಮ ಕುಟುಂಬ ಇದ್ದಂತೆ. ನಮ್ಮ ಕುಟುಂಬದವರ ಆರೋಗ್ಯದ ದೃಷ್ಟಿಯಿಂದ ಮೊದಲ ಬಾರಿಗೆ ಯೋಗ ಸಂಗಮ ಕಾರ್ಯಕ್ರಮ ಆಯೋಜಿಸಿದ್ದೇವೆ. ಪ್ರತಿ ವರ್ಷ ವಿಶ್ವ ಯೋಗ ದಿನದಂದು ಈ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ ಎಂದು ಹೇಳಿದರು.

ಅಜಿತ್ ನೆಲೆ ಟ್ರಸ್ಟ್ ಮಕ್ಕಳು ಯೋಗ ಸಮಾಗಮದಲ್ಲಿ ಭಾಗಿಯಾಗಿ ಯೋಗಾಭ್ಯಾಸ ಮಾಡಿದ್ದಾರೆ. ಪ್ರತಿ ದಿನ ಯೋಗಾಭ್ಯಾಸ ಮಾಡಿ ಸ್ವಾಸ್ಥ್ಯ ಆರೋಗ್ಯ ಕಾಪಾಡಿಕೊಳ್ಳುವಂತೆ ಈ ಮೂಲಕ ಉತ್ತೇಜಿಸಲಾಗಿದೆ. ಕುವೆಂಪು ನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆಯ ವೈದ್ಯರು, ನರ್ಸ್‌ಗಳು ಸೇರಿದಂತೆ ಇತರೆ ಸಿಬ್ಬಂದಿ ಕೂಡ ಇಂದಿನ ಯೋಗ ಸಮಾಗಮದಲ್ಲಿ ಭಾಗಿಯಾಗಿದ್ದಾರೆ ಎಂದರು.

ರೋಗಿಗಳ ಆರೋಗ್ಯ ಕಾಪಾಡುವುದರ ಜೊತೆಗೆ ನಮ್ಮ ಆರೋಗ್ಯವನ್ನು ಕೂಡ ಕಾಪಾಡಿಕೊಳ್ಳಬೇಕು ಎಂಬುದನ್ನು ನಮ್ಮ ಸಿಬ್ಬಂದಿಗಳಿಗೆ ಅರ್ಥ ಮಾಡಿಸಿದ್ದೇವೆ. ಈ ಮೂಲಕ ಸಮಾಜದ ಸ್ವಾಸ್ಥ್ಯ ಕಾಪಾಡಲು ಇಂತಹ ವಿಶಿಷ್ಟ ಕಾರ್ಯಕ್ರಮದ ಅಗತ್ಯವಿದೆ ಎಂದು ಮಹೇಶ್ ಶೆಣೈ ಅಭಿಪ್ರಾಯಪಟ್ಟರು.

ಯೋಗದಿಂದ ನಮ್ಮ ಆರೋಗ್ಯದ ಜೊತೆಗೆ ಸಮಾಜದ ಸ್ವಾಸ್ಥ್ಯ ಕಾಪಾಡಬಹುದು

ನಮ್ಮ ಆರೋಗ್ಯ ಮಾತ್ರವಲ್ಲದೆ ಸಮಾಜದ ಸ್ವಾಸ್ಥ್ಯ ಕಾಪಾಡಲು ಯೋಗದ ಮಹತ್ವವಿದೆ ಎಂದು ಇಂದಿನ ಯೋಗ ಸಮಾಗಮದಲ್ಲಿ ಭಾಗಿಯಾದವರಿಗೆ ಮನದಟ್ಟು ಮಾಡಲಾಗಿದೆ ಎಂದು ಆಸ್ಪತ್ರೆಯ ಅಸಿಸ್ಟೆಂಟ್ ಅಡ್ಮಿನ್ ನಂದಿತ ಶೆಣೈ ತಿಳಿಸಿದರು.

ವಿಶ್ವ ಯೋಗ ದಿನಾಚರಣೆಯ ಮೂಲಕ ಯೋಗವನ್ನು ಭಾರತ ಮಾತ್ರವಲ್ಲದೆ ವಿಶ್ವದ ಎಲ್ಲಾ ರಾಷ್ಟ್ರಗಳು ಅನುಕರಿಸಬೇಕು ಎಂಬುದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಶಯವಾಗಿದೆ. ನಮ್ಮ ಆರೋಗ್ಯ ಮಾತ್ರವಲ್ಲದೆ ಸಮಾಜದ ಸ್ವಾಸ್ಥ್ಯ ಆರೋಗ್ಯ ಕಾಪಾಡಲು ಯೋಗದ ಮೂಲ ಉದ್ದೇಶವಾಗಿದೆ ಎಂದರು.

ವಿಶ್ವದ ಹಲವು ರಾಷ್ಟ್ರದ ಜನರು ಡಾ.ರಮೇಶ್ ಶೆಟ್ಟಿ ಅವರಲ್ಲಿ ಯೋಗ ಕಲಿತಿದ್ದಾರೆ. ಅಂತಹ ಯೋಗ ಗುರುಗಳಿಂದ ಇಂದು ಯೋಗ ಸಮಾಗಮ ನಡೆಸಲಾಗಿದೆ. ಮಹೇಶ್ ಶೆಣೈ ಅವರ ಮಾರ್ಗದರ್ಶನದಲ್ಲಿ ನಡೆದ ಯೋಗ ಸಮಾಗಮದ ಮೂಲಕ ವೈದ್ಯರು, ನರ್ಸ್ ಗಳು, ಸಿಬ್ಬಂದಿಗಳು ಸೇರಿದಂತೆ ಮಕ್ಕಳಿಗೆ ಯೋಗ ಕಲಿಕೆಗೆ ವೇದಿಕೆ ಕಲ್ಪಿಸಲಾಗಿದೆ ಎಂದು ನಂದಿತ ಶೆಣೈ ಹೇಳಿದರು.

ವಿಕಲಚೇತನರಿಗೆ ಸಹಾಯ ಮಾಡುವುದಾಗಿ ಹಣ, ಬ್ಯಾಂಕ್ ದಾಖಲೆ ಪಡೆದು ವಂಚನೆ

● ನೆರವಿನ ನಿರೀಕ್ಷೆಯಲ್ಲಿದ್ದ ಮಹಿಳೆಗೆ ಈಗ ಭಾರಿ ಸಂಕಷ್ಟ

● ಇವರಿಂದ ಪಡೆದ ದಾಖಲೆಗಳ ಮೂಲಕ ಇತರರಿಗೆ 38 ಲಕ್ಷ ವಂಚನೆ

ಕ್ರೈಂ ಬ್ಯಾಕ್

ಮೈಸೂರು, ಜೂ.22(ಎಸ್‌ಬಿಡಿ)– ವಿಕಲಚೇತನರ ಔಷಧೋಪಚಾರಕ್ಕೆ ಸಹಾಯ ಮಾಡುವುದಾಗಿ ನಂಬಿಸಿ, ಹಣದ ಜೊತೆಗೆ ಬ್ಯಾಂಕ್ ದಾಖಲೆಗಳನ್ನು ಪಡೆದು ಅವ್ಯವಹಾರ ನಡೆಸಿ, ಸಂಕಷ್ಟ ತಂದೊಡ್ಡಿರುವ ಪ್ರಕರಣ ಮೈಸೂರಿನಲ್ಲಿ ನಡೆದಿದೆ.

ಸಹಾಯದ ನೆಪದಲ್ಲಿ ನಗರದ ಮಹಿಳೆ ಹಾಗೂ ಇವರ ಸಹೋದರನ ಬ್ಯಾಂಕ್ ಪಾಸ್‌ಬುಕ್, ಎಟಿಎಂ ಕಾರ್ಡ್ ಹಾಗೂ ಸಿಮ್ ಕಾರ್ಡ್‌ಗಳನ್ನು ಅಂಚೆ ಮೂಲಕ ತರಿಸಿಕೊಂಡು ವಂಚಿಸಲಾಗಿದೆ ಎಂದು ನ್ಯಾಯಾಲಯದ ಸೂಚನೆ ಮೇರೆಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಪ್ರಕರಣದ ವಿವರ: ಅಂಗವಿಕಲರಿಗೆ ಸಹಾಯ ಮಾಡಲಾಗುವುದು ಎಂಬ ಜಾಹೀರಾತನ್ನು ಫೇಸ್‌ಬುಕ್‌ನಲ್ಲಿ ನೋಡಿದ ಮಹಿಳೆ, ವಿಕಲಚೇತನರಾದ ತನ್ನ ತಾಯಿ ಹಾಗೂ ಸಹೋದರನಿಗೂ ಇದರಿಂದ ಸಹಾಯವಾಗಬಹುದು ಎಂದು ಭಾವಿಸಿದ್ದಾರೆ. ವಿಕಲಚೇತನರ ಔಷಧೋಪಚಾರಕ್ಕೆ ನಾವು ಹಣ ಕಳುಹಿಸುತ್ತೇವೆ ಎಂಬ ಸಂದೇಶವುಳ್ಳ ಲಿಂಕ್ ಮೇಲೆ ಕ್ಲಿಕ್ ಮಾಡಿದ್ದಾರೆ.

ಆ ವೇಳೆ ಪ್ರತೀ ತಿಂಗಳು ನಾವು ಹಣ ಕಳುಹಿಸುತ್ತೇವೆ, ಆದರೆ ಇದಕ್ಕೆ ನೋಂದಣಿ ಶುಲ್ಕ ಪಾವತಿಸಬೇಕು ಎಂದು ತಿಳಿಸಲಾಗಿದೆ. ಇದನ್ನು ನಂಬಿದ ಮಹಿಳೆ 50 ಸಾವಿರ ನಂತರ 28 ಸಾವಿರ ರೂ.ಗಳನ್ನು ಫೋನ್‌ಪೇ ಮೂಲಕ ವರ್ಗಾಯಿಸಿದ್ದಾರೆ. ಮತ್ತಷ್ಟು ಹಣ ಪಾವತಿಗೆ ಒತ್ತಾಯಿಸಿದ್ದರಿಂದ ಚಿನ್ನಾಭರಣಗಳನ್ನು ಅಡವಿಟ್ಟು, ಆ ಅಂಗಡಿ ಮಾಲೀಕನ ಮೂಲಕವೇ ಫೋನ್ ಪೇ ಮಾಡಿಸಿದ್ದಾರೆ. ಹೀಗೆ ಒಟ್ಟು 2.31 ಲಕ್ಷ ಹಣವನ್ನು ವಂಚಕರು ಕಳುಹಿಸಿದ್ದ ನಂಬರ್‌ಗಳಿಗೆ ವರ್ಗಾವಣೆ ಮಾಡಿದ್ದಾರೆ.

ಇಷ್ಟಕ್ಕೆ ಬಿಡದ ವಂಚಕರು, ಮಹಿಳೆಗೆ ವಾಟ್ಸಾಪ್ ಕರೆ ಮಾಡಿ ನಿಮ್ಮ ಹಾಗೂ ನಿಮ್ಮ ಸಹೋದರನ ಐದು ಪಾಸ್‌ಬುಕ್‌ಗಳು, ಐದು ಎಟಿಎಂ ಕಾರ್ಡ್‌ಗಳು ಹಾಗೂ 2 ಸಿಮ್ ಕಾರ್ಡ್‌ಗಳನ್ನು ಸ್ಪೀಡ್‌ಪೋಸ್ಟ್ ಮೂಲಕ ಕಳುಹಿಸಿದರೆ ತಿಂಗಳ ನಂತರ ಪ್ರತೀ ತಿಂಗಳು ಇಬ್ಬರ ಖಾತೆಗಳಿಗೆ ಒಟ್ಟು 50 ಸಾವಿರ ರೂ. ಹಣ ಸಂದಾಯವಾಗುತ್ತದೆ ಎಂದು ತಿಳಿಸಿದ್ದಾರೆ. ಇದನ್ನೂ ನಂಬಿದ ಮಹಿಳೆ, ಅವರು ತಿಳಿಸಿದ್ದ ನವದೆಹಲಿ ವಿಳಾಸಕ್ಕೆ ಎಲ್ಲಾ ದಾಖಲೆಗಳನ್ನೂ ಅಂಚೆ ಮೂಲಕ ಕಳುಹಿಸಿದ್ದಾರೆ. ಆದರೆ



ತಿಂಗಳ ಬಳಿಕ ಹಣ ಬರುತ್ತದೆ ಎಂದು ಕಾದು ಕುಳಿತಿದ್ದ ಮಹಿಳೆಗೆ ಶಾಕ್ ಕಾದಿತ್ತು. ಬೆಂಗಳೂರು ಯಲಹಂಕದ ಈಶಾನ್ಯ ವಿಭಾಗದ ಸೆನ್ ಪೊಲೀಸ್ ಠಾಣೆ ಅಧಿಕಾರಿಗಳು ಭೇಟಿಯಾಗಿ ವಿಚಾರಣೆ ನಡೆಸಿದಾಗ ತಾವು ಮೋಸ ಹೋಗಿರುವುದು ತಿಳಿದಿದೆ.

ಸಹಾಯದ ನೆಪದಲ್ಲಿ ಪಡೆದಿದ್ದ ಬ್ಯಾಂಕ್ ದಾಖಲೆಗಳನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ನನ್ನ ಹಾಗೂ ನನ್ನ ಸಹೋದರನ ಐದು ಬ್ಯಾಂಕ್ ಖಾತೆಗಳಿಗೆ ಅಮಾಯಕರಿಂದ 38 ಲಕ್ಷ ಹಣ ಹಾಕಿಸಿಕೊಂಡು, ನಾವು ಕಳುಹಿಸಿದ್ದ ಎಟಿಎಂ ಕಾರ್ಡ್ ಬಳಸಿ ಆ ಹಣವನ್ನು ವಿತ್‌ಡ್ರಾ ಮಾಡಿಕೊಂಡಿದ್ದಾರೆ ಎಂದು ಮಹಿಳೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಮುಂದುವರೆದ ಆನ್‌ಲೈನ್ ದೋಖಾ!

ಲಾಭದ ಆಸೆ ತೋರಿಸಿ ವ್ಯಕ್ತಿಯೊಬ್ಬರಿಗೆ 26 ಲಕ್ಷ ವಂಚನೆ

ಮೈಸೂರು, ಜೂ.22(ಎಸ್‌ಬಿಡಿ)– ಪ್ರತಿಷ್ಠಿತ ಖಾಸಗಿ ಬ್ಯಾಂಕ್‌ವೊಂದರ ಹೆಸರಿನಲ್ಲಿ ನಕಲಿ ಟ್ರೇಡಿಂಗ್ ಜಾಲ ರೂಪಿಸಿ, ಮೈಸೂರಿನ ವ್ಯಕ್ತಿಯೊಬ್ಬರಿಗೆ ಸುಮಾರು 26 ಲಕ್ಷ ರೂ. ವಂಚಿಸಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಶ್ವೇಶ್ವರನಗರದ 42 ವರ್ಷದ ವ್ಯಕ್ತಿ, ತಿಂಗಳ ಹಿಂದೆ ಇನ್ಸ್ಟಾಗ್ರಾಂನಲ್ಲಿ ಟ್ರೇಡಿಂಗ್ ಸಂಬಂಧಿತ ಜಾಹಿರಾತು ನೋಡಿದ್ದಾರೆ. ಆಕ್ಸಿಸ್ ಸೆಕ್ಯೂರಿಟೀಸ್(AXIS SECURITIES)ನಲ್ಲಿ ಹಣ ಹೂಡಿಕೆ ಮಾಡುವಂತೆ ಕಾಣಿಸಿದ ಲಿಂಕ್ ಕ್ಲಿಕ್ ಮಾಡಿದ್ದಾರೆ. ಕೂಡಲೇ ಅವರ ಮೊಬೈಲ್ ನಂಬರ್ ವಾಟ್ಸಾಪ್ ಗ್ರೂಪ್‌ಗೆ ಸೇರ್ಪಡೆಯಾಗಿದೆ. ಆ ಗ್ರೂಪ್‌ನಲ್ಲಿ ಬ್ಲಾಕ್ ಇನ್ವೆಸ್ಟ್‌ಮೆಂಟ್ ಐಪಿಓ ಮಾಡುವ ಬಗ್ಗೆ ಮಾಹಿತಿ ನೀಡಿ, ವೆಬ್‌ಸೈಟ್‌ನಲ್ಲಿ ಅಕೌಂಟ್ ಸೃಜಿಸುವಂತೆ ಸೂಚಿಸಲಾಗಿದೆ.

ಹೂಡಿಕೆಗೆ ಹೆಚ್ಚು ಲಾಭ ಬರುತ್ತದೆ ಎಂದು ನಂಬಿದ ಈ ವ್ಯಕ್ತಿ, ತಮ್ಮ ವೈಯಕ್ತಿಕ ಮಾಹಿತಿಯನ್ನು ನಮೂದಿಸಿ ವೆಬ್‌ಸೈಟ್‌ನಲ್ಲಿ ಖಾತೆ ತೆರೆದಿದ್ದಾರೆ. ನಂತರ ಹಂತ ಹಂತವಾಗಿ 25.95 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಈ ವ್ಯವಹಾರದ ಬಗ್ಗೆ ಅನುಮಾನ ಬಂದಿದ್ದರಿಂದ ಆಕ್ಸಿಸ್ ಬ್ಯಾಂಕ್‌ಗೆ ಕರೆ ಮಾಡಿದಾಗ ತಾವು ಮೋಸಹೋಗಿರುವುದು ತಿಳಿದಿದೆ.

ರಂಗಭೂಮಿ ಸೇರಿದಂತೆ ಯಾವುದೇ ಕಲೆಯಿಂದ ಮನುಷ್ಯನ ನೋವು ನಿವಾರಣೆ


● 'ನಿರ್ದಿಗಂತವಾಗಿ ಏರಿ' ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಕವಿ ಜಯಂತ್ ಕಾಯ್ಕಿಣಿ ಅಭಿಮತ ● ನಿರ್ದಿಗಂತದ 2ನೇ ವಾರ್ಷಿಕೋತ್ಸವ

ಮೈಸೂರು,ಜೂ.22(ಪಿಎಂ)– ರಂಗಭೂಮಿ ಸೇರಿದಂತೆ ಯಾವುದೇ ಕಲೆ ಮನುಷ್ಯನ ನೋವು ನಿವಾರಿಸುತ್ತವೆ. ರಂಗಭೂಮಿಯಲ್ಲಿ ಅನಾವರಣಗೊಳ್ಳುವುದು ಯಾರದ್ದೂ ಕಥೆಯಲ್ಲ, ಬದಲಿಗೆ ಅದು ನಮ್ಮದ್ದೇ ಬೇರೆ ಸಾಧ್ಯತೆ ಪ್ರತಿನಿಧಿಸುತ್ತದೆ ಎಂದು ಖ್ಯಾತ ಕವಿ ಜಯಂತ್ ಕಾಯ್ಕಿಣಿ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ 'ನಿರ್ದಿಗಂತದ ಹರ್ಷ ಎರಡನೇ ವರ್ಷ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ನಿರ್ದಿಗಂತ ರಂಗಭೂಮಿ ಸಂಸ್ಥೆಯ 2ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ 'ನಿರ್ದಿಗಂತವಾಗಿ ಏರಿ' ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ರಂಗಭೂಮಿ ಸೇರಿದಂತೆ ಯಾವುದೇ ಕಲೆಗಳಾಗಲಿ, ವೈದ್ಯಕೀಯ ವಿಜ್ಞಾನವೇ ಆಗಲಿ ಎರಡೂ ಸಹ ಮನುಷ್ಯನ ನೋವು ಕಡಿಮೆಗೊಳಿಸುವ ಪ್ರಯತ್ನವನ್ನೇ ಮಾಡುತ್ತವೆ. ಹೋಮಿಯೋಪತಿ ವೈದ್ಯ ಪದ್ಧತಿ ಪ್ರತಿಯೊಬ್ಬ ವ್ಯಕ್ತಿಯೂ ಅನನ್ಯವೆಂದು ಪರಿಗಣಿಸುತ್ತದೆ. ಹಾಗಾಗಿ ಹೋಮಿಯೋಪತಿ ಡಾಕ್ಟರ್ ಬಳಿ ಹೋದರೆ ಅವರು 40 ಪ್ರಶ್ನೆಗಳನ್ನು ಕೇಳುತ್ತಾರೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಈ ವೈದ್ಯ ಪದ್ಧತಿಯಲ್ಲಿ ವಿಭಿನ್ನ ಎಂದರು.

ನಮ್ಮೂರಲ್ಲಿ ಎಲ್.ಆರ್.ಹೆಗಡೆ ಎಂಬ ಜಾನಪದ ವಿದ್ವಾಂಸರಿದ್ದರು. ಅವರು ಹಳ್ಳಿ ಹಳ್ಳಿಗೆ ಹೋಗಿ ಜಾನಪದ ಹಾಡುಗಳನ್ನು ಸಂಗ್ರಹ ಮಾಡುತ್ತಿದ್ದರು. ಆಗ ಅವರು



ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಭಾನುವಾರ 'ನಿರ್ದಿಗಂತವಾಗಿ ಏರಿ' ಸ್ಮರಣ ಸಂಚಿಕೆಯನ್ನು ಕವಿ ಜಯಂತ್ ಕಾಯ್ಕಿಣಿ ಬಿಡುಗಡೆಗೊಳಿಸಿದರು. ಲೇಖಕ ಕೆ.ವೈ.ನಾರಾಯಣಸ್ವಾಮಿ ಮತ್ತು ಬಹುಭಾಷಾ ನಟ ಪ್ರಕಾಶ್ ರಾಜ್ ಚಿತ್ರದಲ್ಲಿದ್ದಾರೆ.

'ನಾನು ಅವರಿಂದ ಹಾಡುಗಳನ್ನು ಸಂಗ್ರಹಿಸುತ್ತೇನೆ. ಆ ಮೂಲಕ ನನಗೆ ಪಿಹೆಚ್.ಡಿ ಹಾಗೂ ಹೆಸರು ದೊರೆಯುತ್ತದೆ. ಆದರೆ ಅವರಿಗೆ ನಾನಿಂದೇನು ಪ್ರಯೋಜನ' ಎಂದು ಬೇಸರಗೊಳ್ಳುತ್ತಾರೆ. ಹಾಗಾಗಿ ಹೆಗಡೆಯವರು ಹೋಮಿಯೋಪತಿ ವೈದ್ಯ ಪದ್ಧತಿ ಕಲಿತು, ಹಳ್ಳಿಗರ ಮನೆ ಮನೆಗೆ ಹೋಗಿ ಅನಾರೋಗ್ಯ ಪೀಡಿತರಿಗೆ ಔಷಧಿ ಕೊಡುತ್ತಿದ್ದರು. ಅಂದರೆ ಮನುಷ್ಯನ ಕಾಯಿಲೆ ಕಡಿಮೆ ಮಾಡುವುದು ಮಾನವೀಯತೆ ಮತ್ತು ಕಲೆ. ಅದರ ನಡುವೆ ಅವಿನಾಭಾವವಾದ ನಂಟಿದೆ ಎಂದು ವಿಶ್ಲೇಷಿಸಿದರು.

ಪರಿಸರವಾದಿಗಳಾದ ಕೃಪಾಕರ ಮತ್ತು ಸೇನಾನಿ ಅವರು ಕೊಟ್ಟಂತಹ ದೋಣಿಯೊಂದು ನಿರ್ದಿಗಂತದಲ್ಲಿದ್ದು, ಅದನ್ನು ನೋಡಿದಾಕ್ಷಣ ನನಗೆ ಅರಣ್ಯದೊಂದಿಗೆ ಮಾಧವ್ ಗಾಡ್ಗೀಲ್ ಹೇಳಿದ್ದು ನೆನಪಾಯಿತು. ಅದೆಂದರೆ, ಒಂದು ಹೆಣ್ಣಾನೆ ಗರ್ಭಧರಿಸಿ ಅದರ ಕೆಚ್ಚಲು ತುಂಬಿದರೆ, ಅದಿರುವ 5 ಕಿ.ಮೀ. ವ್ಯಾಪ್ತಿಯಲ್ಲಿ ಉಳಿದ ನಾಲ್ಕೈದು ಹೆಣ್ಣಾನೆಗಳಿಗೂ ಕೆಚ್ಚಲು ತುಂಬುತ್ತದೆ. ಏಕೆಂದರೆ ಗಜಪ್ರಸವದಲ್ಲಿ ಹೆಣ್ಣಾನೆ ಸಾಯುವ ಸಾಧ್ಯತೆ ಇರುತ್ತದೆ. ಹಾಗಾಗಿ ಅದರ ಮರಿಯಾನೆ ರಕ್ಷಿಸಲು ಪ್ರಕೃತಿ ಈ ರೀತಿ ವ್ಯವಸ್ಥೆ ಮಾಡುತ್ತದೆ. ಅಂತೆಯೇ ರಂಗಭೂಮಿ, ಸಾಹಿತ್ಯ, ಕಲೆಗಳು ಒಂದು ರೀತಿಯಲ್ಲಿ ನಮಗೆ ಪ್ರಾಕ್ಸಿ ಲೈಫ್ (ಬದಲಿ ವ್ಯವಸ್ಥೆ) ಇದ್ದಂತೆ ಎಂದು ಹೇಳಿದರು.

ಕಳೆದ 70 ವರ್ಷಗಳಲ್ಲಿ ಭಾರತೀಯ ರಂಗಭೂಮಿಯನ್ನು ಶ್ರೀಮಂತಗೊಳಿಸಿ, ನಮ್ಮ ಸಂವೇದನಾಶೀಲತೆ ಹಿಗ್ಗಿಸಿದ ನೂರಾರು ಜನರ ಗತವೈಭವ ಕಾಣಬಹುದು. ಅಂತೆಯೇ ಮುಂದೇನು ಎಂದರೆ ಹೊಸ ತಲೆಮಾರಿಗೆ ನಿರ್ದಿಗಂತ ಒಂದು ದೊಡ್ಡ ಸಾಧ್ಯತೆಯಾಗಿ ತೋರುತ್ತದೆ. ಅದರಲ್ಲಿ ಮಾತೃತ್ವವಿದ್ದು, ಅಪ್ಪಟ ಅಂಶ ಹೊಂದಿರುವ ನಿರ್ದಿಗಂತದಲ್ಲಿ ಯಾವುದೇ ಶೋಕಿ ಅಂಶ ಇಲ್ಲ. ಮುಂದಿನ ತಲೆಮಾರಿಗೆ ಭರವಸೆ ಮೂಡಿಸಿರುವ ಈ ಸಂಸ್ಥೆಗೆ ಕ್ರಿಯಾಶೀಲ ಸ್ಪಂದನೆ ದೊರೆಯಲಿ ಎಂದು ಹಾರೈಸಿದರು.

ಲೇಖಕ ಕೆ.ವೈ.ನಾರಾಯಣಸ್ವಾಮಿ ಮಾತನಾಡಿ, ನಿರ್ದಿಗಂತವು ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕದ ಸಾಂಸ್ಕೃತಿಕ ನಕಾಶೆಯಲ್ಲಿ ಹೊಸ ಭರವಸೆ ಹುಟ್ಟಿಸಿದೆ. ಭಾರತದಲ್ಲಿ ಮೌನವನ್ನು ಕಳೆದಕೊಂಡು ಕಾಲದಲ್ಲಿ ನಾವಿದ್ದೇವೆ. ಈ ಮೌನ ಕಳೆದುಕೊಂಡ ಕಾಲವನ್ನು ಏನು ಹೇಳಬಹುದು ಎಂಬುದಕ್ಕೆ ಪ್ರಕಾಶ್ ರಾಜ್ ಅವರು ಕಂಡುಕೊಂಡ ಪ್ರಣಾಳಿಕೆ ಹಾಗೂ ಇಟ್ಟ ಹೆಜ್ಜೆ ನಿರ್ದಿಗಂತ. ನಮಗೆ ಹೃದಯಕ್ಕೆ ನಿರ್ದಿಗಂತ ಪದ ತುಂಬ ಹತ್ತಿರ. ಏಕೆಂದರೆ ಅದು ಕುವೆಂಪು ಅವರ ಕಾಣಿಕೆ. ಅವರು 20ನೇ ಶತಮಾನದ ಒಂದು ಆರೋಗ್ಯಪೂರ್ಣವಾದ ಕನ್ನಡದ ಮನಸ್ಸು. ಎಷ್ಟು ನಿಷ್ಠುರವಾಗಿ, ಎಷ್ಟು ಸಾಂಸ್ಕೃತಿಕ ಬದ್ಧತೆ ಹಾಗೂ ಸೂಕ್ಷ್ಮತೆಯಿಂದ ಇರಬೇಕೆಂಬುದನ್ನು ನಮಗೆ ಅವರು ತೋರಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

ನಿರ್ದಿಗಂತದ ರೂವಾರಿ ಹಾಗೂ ಬಹುಭಾಷಾ ನಟ ಪ್ರಕಾಶ್ ರಾಜ್ ಮಾತನಾಡಿ, ರಂಗಭೂಮಿಗೆ ಮತ್ತೆ ಬರಬೇಕೆಂಬ ಆಲೋಚನೆ ಬಹಳ ವರ್ಷಗಳಿಂದ ನನಗೆ ಇತ್ತು. ಒಬ್ಬ ನಟನಾಗಿ ಬರಬೇಕಾ, ನಾಟಕ ತಂಡ ರೂಪಿಸಬೇಕಾ ಎಂದುಕೊಂಡು ಚಿಂತಿಸುವಾಗ ಕಟ್ಟುವ ಕೆಲಸವಾಗಬೇಕೆಂದು ನಿರ್ಧರಿಸಿದೆ. ಎರಡು ವರ್ಷಗಳಲ್ಲಿ ನಿರ್ದಿಗಂತಕ್ಕೆ ಸಾಕಷ್ಟು ಪ್ರತಿಭೆಗಳು ಬಂದು ಹೋಗಿದ್ದಾರೆ. ಭಾವಜಾಲ ಅಲ್ಲಿದೆ. ತೋಟ ಮಾಲೀಕನದ್ದೇ. ಆದರೆ ಹೂವು ಬಳ್ಳಿಯದು. ಸಮಾನತೆ, ಸಹೋದರತೆ, ಭ್ರಾತೃತ್ವವನ್ನು ಬೆಳೆಸುವ ಕೆಲಸವಾಗುತ್ತಿದ್ದು, ಅದನ್ನು ತುಂಬ ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು. ಪ್ರೀತಿ, ನಂಬಿಕೆ, ಅಭಿಮಾನ, ನಂಬಿಕೆ ಬೆಳೆಸುವುದು ಬಹಳ ಕಷ್ಟ. ಈ ಎಲ್ಲವೂ ನಿರ್ದಿಗಂತದಲ್ಲಿ ಬೆಳೆಯುತ್ತಿದ್ದು, ಅದನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಿದೆ ಎಂದು ಹೇಳಿದರು.

ಬಳಿಕ 'ಸಮತೆಯ ಹಾಡುಗಳು' ಸಂಗೀತ ಕಾರ್ಯಕ್ರಮ ನಡೆಯಿತು. ನಂತರ ನಿರ್ದಿಗಂತ ನಿರ್ಮಿಸಿ, ಅರುಣ್ ಲಾಲ್ ನಿರ್ದೇಶನವಿರುವ 'ಕೂ ಹೂ' ನಾಟಕ ಪ್ರದರ್ಶನ ಕಂಡಿತು. ಹಿರಿಯ ರಂಗಕರ್ಮಿಗಳಾದ ಪ್ರಸನ್ನ, ಬಿ.ಜಯಶ್ರೀ, ಹಿರಿಯ ಸಾಹಿತಿ ದೇವನೂರ ಮಹಾದೇವ ಸೇರಿದಂತೆ ಹಲವು ಗಣ್ಯರು, ರಂಗಭೂಮಿ ಕಲಾವಿದರು ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಮಗ : ಅಪ್ಪಾ, ನೀನು ಕತ್ತಲೆಗೆ ಹೆದರ್ತೀಯಾ?
ಅಪ್ಪ : ಛೇ, ಇಲ್ಲಪ್ಪಾ...
ಮಗ : ಮಿಂಚು, ಗುಡುಗು, ಹಾವು...
ಅಪ್ಪ : ಛೇ ಛೇ ಖಂಡಿತ ಇಲ್ಲಪ್ಪ.
ಮಗ : ಸರಿ ಬಿಡು, ನೀನು ಅಮ್ಮನನ್ನು ಬಿಟ್ಟು ಬೇರೆ ಯಾರಿಗೂ ಹೆದರಲ್ಲ ಅಂತಾಯ್ತು.

ಮೈಸೂರು ಮಿತ್ರ
ಸೋಮವಾರ, 23 ಜೂನ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ನಮ್ಮ ದಾನ ಪಡೆದವರು ಸ್ವತಂತ್ರರಾಗಲು ಸಹಾಯವಾಗಬೇಕು. ಇಲ್ಲವೆಂದರೆ ಅಂತಹ ದಾನ ಅಪಾಯಕಾರಿ.

– ಜಾನ್ ಡಿ ರಾಕ್ ಫೆಲ್ಲರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಗುವವರು ನಾಕಕ್ಕೆ, ನಗದವರು ನರಕಕ್ಕೆ.

ನಿಮ್ಮ ಪತ್ರಗಳು

ನಿಮ್ಮದು ಎಷ್ಟು ಪರ್ಸೆಂಟ್ ಸರ್ಕಾರ?

ಮಾನ್ಯರೆ,

ಹಣ ನೀಡಿದವರಿಗಷ್ಟೇ, ವಸತಿ ನಿಗಮದಲ್ಲಿ ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ಆಳಂದ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಆರ್.ಪಾಟೀಲ್ ತಮ್ಮ ಪಕ್ಷದ ಸರ್ಕಾರದ ವಿರುದ್ಧವೇ ಆರೋಪ ಮಾಡಿರುವ ಆಡಿಯೋ ವೈರಲ್ ಆಗಿದೆ. ಈ ವಿಚಾರ ಸತ್ಯ, ಅದರಲ್ಲಿರುವ ಧ್ವನಿಯೂ ನನ್ನದೆ ಎಂದು ಸ್ವತಃ ಶಾಸಕರೇ ಒಪ್ಪಿಕೊಂಡಿದ್ದಾರೆ. ಜೊತೆಗೆ ಈ ಆಡಿಯೋದಲ್ಲಿರುವುದು ನಿಜ ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರ ಆಪ್ತ ಕಾರ್ಯದರ್ಶಿ ಸರ್ಫರಾಜ್ ಹೇಳಿರುವುದು ಈ ಸರ್ಕಾರದಲ್ಲಿ ಎಲ್ಲವೂ ಲಂಚಮಯವಾಗಿದೆ ಎನಿಸುತ್ತದೆ, ಆಡಳಿತ ಪಕ್ಷದ ಶಾಸಕರೇ, ಸರ್ಕಾರದ ವಿರುದ್ಧವೇ ಆರೋಪ ಮಾಡುತ್ತಾರೆ ಎಂದರೆ ಸರ್ಕಾರದಲ್ಲಿ ಪ್ರಾಮಾಣಿಕತೆ ಎಲ್ಲಿದೇ?

ಒಂದು ವೇಳೆ ಇದೇ ಆರೋಪವನ್ನು ವಿರೋಧ ಪಕ್ಷದವರು ಮಾಡಿದ್ದರೆ ವಿರೋಧ ಪಕ್ಷದವರಿಗೆ ಮಾಡಲು ಕೆಲಸವಿಲ್ಲ. ಅವರಿಗೆ ವಿರೋಧ ಮಾಡುವುದೇ ಕೆಲಸ, ನಾವು ಬಡ ವರ್ಗದ ಜನರಿಗೆ ಮನೆ ಹಂಚಿಕೆ ಮಾಡಲು ಹೊರಟಿರುವುದನ್ನು, ಬಿಜೆಪಿಯವರು ಸಹಿಸುತ್ತಿಲ್ಲ, ಅವರು ಯಾವತ್ತೂ ಬಡವರ ವಿರೋಧಿಗಳು ಎಂದು ಮುಗಿಬೀಳುತ್ತಿದ್ದರು.

ಕಳೆದ ಎರಡು ವರ್ಷಗಳ ಹಿಂದೆ, ಬಿಜೆಪಿ ಸರ್ಕಾರ 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಜಗಜ್ಜಾಹೀರು ಮಾಡಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಿಮ್ಮದು ಎಷ್ಟು ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಜನ ಸಾಮಾನ್ಯರು ಪ್ರಶ್ನಿಸುವಂತಾಗಿದೆ. ಬಡವರಿಗೆ ಹಂಚಿಕೆ ಮಾಡುವ ವಸತಿ ಯೋಜನೆಯಲ್ಲೇ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದರೆ, ಈ ಸರ್ಕಾರಕ್ಕೆ ಸ್ವಲ್ಪವಾದರೂ, ಮಾನ ಮರ್ಯಾದೆ ಇದೆಯಾ? ಬಡವರ ವಸತಿ ಯೋಜನೆಯೇ ಹೀಗಾದರೆ, ಬೇರೆ ಯೋಜನೆಗಳಲ್ಲಿ ಗತಿಯೇನು?

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು

ಆತುರದ ನಿರ್ಧಾರವೇಕೆ?

ಮಾನ್ಯರೆ,

ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯದಿಂದ 7 ವರ್ಷ ಶಿಕ್ಷೆಗೆ ಒಳಗಾಗಿದ್ದ ಗಂಗಾವತಿ ಕ್ಷೇತ್ರದ ಶಾಸಕ ಜೆ. ಜನಾರ್ಧನ ರೆಡ್ಡಿ ಅವರ ವಿಧಾನಸಭಾ ಸದಸ್ಯತ್ವವನ್ನು ತಕ್ಷಣವೇ ರದ್ದುಗೊಳಿಸಿ ಅನರ್ಹಗೊಳಿಸಲಾಗಿತ್ತು. ಇದೀಗ ತೆಲಂಗಾಣ ಹೈಕೋರ್ಟ್ ಆದೇಶಕ್ಕೆ ತಡೆ ನೀಡಿದ ಕಾರಣ ವಿಧಾನಸಭೆ ಕಾರ್ಯದರ್ಶಿಯವರು ರೆಡ್ಡಿಯವರ ಶಾಸಕತ್ವವನ್ನು ಮರುಸ್ಥಾಪಿಸಿ ಆದೇಶ ಹೊರಡಿಸಿರುವುದು (22.6.25) ವರದಿಯಾಗಿದೆ.

ಆದರೆ ಸಿಬಿಐ ವಿಶೇಷ ಕೋರ್ಟ್ ತನ್ನ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು 15 ದಿನಗಳ ಕಾಲಾವಕಾಶ ನೀಡಿತ್ತು. ಹೀಗಿದ್ದರೂ ವಿಧಾನಸಭಾ ಕಾರ್ಯದರ್ಶಿಯವರು ಆತುರಾತುರವಾಗಿ ರೆಡ್ಡಿಯವರ ಸದಸ್ಯತ್ವವನ್ನು ತಕ್ಷಣವೇ ರದ್ದುಗೊಳಿಸಿದ್ದೇಕೆ? ಇದು ಸರ್ಕಾರಕ್ಕೆ ಮುಜುಗರವಲ್ಲವೇ?

– ಮುಳ್ಳೂರು ಪ್ರಕಾಶ್, ಮೈಸೂರು.

ಡ್ರಂಕನ್ ಡ್ರೈವ್ ತಪಾಸಣೆಗೆ ಒಂದೇ ಪೈಪ್ ಬಳಕೆ ಅಸುರಕ್ಷಿತ

ಮಾನ್ಯರೆ,

ಮೈಸೂರಿನಲ್ಲಿ ಪೊಲೀಸರು ನಿತ್ಯ ಡ್ರಂಕನ್ ಡ್ರೈವ್ ತಪಾಸಣೆ ಮಾಡುತ್ತಿದ್ದಾರೆ. ಆದರೆ, ಈ ತಪಾಸಣೆ ವೇಳೆ, ಒಂದೇ ಪೈಪನ್ನು ತುಂಬಾ ಜನರ ಶ್ವಾಸ ಪರೀಕ್ಷೆಗೆ ಮತ್ತೆ ಮತ್ತೆ ಉಪಯೋಗಿಸುತ್ತಿರುವುದನ್ನು ಜನರು ಗಮನಿಸಿದ್ದೇನೆ. ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು.

ಒಬ್ಬರಿಂದ ಮತ್ತೊಬ್ಬರಿಗೆ ಸೋಂಕು ಹರಡುವ ಸಾಧ್ಯತೆ ಇರುವುದರಿಂದ ಇದರತ್ತ ಗಮನಹರಿಸುವುದು ಸೂಕ್ತ. ಈ ತಪಾಸಣೆ ಟ್ರಾಫಿಕ್ ನಿಯಮ ಪಾಲನೆಗಾಗಿ ಅಗತ್ಯವೆಂದು ನಮಗೆ ತಿಳಿದಿದೆ. ಆದರೆ, ಸಾರ್ವಜನಿಕರ ಆರೋಗ್ಯವನ್ನೂ ಸಮಾನವಾಗಿ ಗಮನದಲ್ಲಿಟ್ಟುಕೊಳ್ಳಬೇಕಲ್ಲವೆ?

ಹೀಗಾಗಿ, ದಯವಿಟ್ಟು ಬಳಸಿ ಬಿಸಾಡಬಹುದಾದ ಪೈಪ್‌ಗಳನ್ನು (use-and-throw pipes) ಉಪಯೋಗಿಸುವಂತೆ ಸಂಬಂಧಿತ ಇಲಾಖೆಗಳಿಗೆ ವಿನಂತಿಸುತ್ತೇನೆ. ಈ ರೀತಿಯ ಪೈಪ್‌ಗಳು ಸುಲಭವಾಗಿ ಲಭ್ಯವಿದ್ದು, ಆರೋಗ್ಯದ ದೃಷ್ಟಿಯಿಂದ ಸುರಕ್ಷಿತವಾಗಿರುತ್ತವೆ.

– ಶಶಾಂಕ್ ಹೊಳ್ಳ, ಕಾನೂನು ವಿದ್ಯಾರ್ಥಿ, ಮೈಸೂರು

ಜೆ.ಪಿ.ನಗರದ ಗೊಬ್ಬಳಿಮರ ವೃತ್ತದಲ್ಲಿ ಸಂಚಾರ ಸಮಸ್ಯೆ ನಿವಾರಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಗೊಬ್ಬಳಿಮರ ವೃತ್ತವು ಯಾವಾಗಲೂ ಜನರಿಂದ ಮತ್ತು ವಾಹನಗಳ ಸಂಚಾರದಿಂದ ಗಿಜಿಗುಡುತ್ತಿರುತ್ತದೆ. ಸುತ್ತಮುತ್ತ ಅಂಚೆ ಕಚೇರಿ, ಬ್ಯಾಂಕುಗಳು ಮತ್ತು ಶಿಕ್ಷಣ ಸಂಸ್ಥೆಗಳಿದ್ದು, ವಾಹನ ಸಂಚಾರ ಬೆಳಗಿನಿಂದ ರಾತ್ರಿಯವರೆಗೂ ನಿರಂತರವಾಗಿರುತ್ತದೆ. ಹಿರಿಯ ನಾಗರಿಕರು ಈ ವೃತ್ತದ ಮೂಲಕವೇ ವಾಯುವಿಹಾರಕ್ಕೆ ತೆರಳಬೇಕಾಗಿದೆ. ಶಾಲಾ–ಕಾಲೇಜು ವಾಹನಗಳು ಮತ್ತು ನಗರ ಸಾರಿಗೆ ಬಸ್ಸುಗಳು ಈ ವೃತ್ತದ ಮೂಲಕವೇ ಓಡಾಡುತ್ತಿರುತ್ತವೆ. ಅಲ್ಲದೆ ಸಮೀಪದಲ್ಲಿರುವ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಮತ್ತು ಹೋಟೆಲೊಂದರ ಮುಂಭಾಗದಲ್ಲಿ ಕಾರು, ದ್ವಿಚಕ್ರ ವಾಹನಗಳನ್ನು ರಸ್ತೆಯ ಎರಡೂ ಬದಿಗಳಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗುತ್ತಿದೆ. ಇದರಿಂದಾಗಿ ಸಂಚಾರ ದಟ್ಟಣೆಯಾಗಿ, ಅಪಘಾತಗಳು ಸಂಭವಿಸುವ ಸಾಧ್ಯತೆಗಳಿವೆ. ಕೂಡಲೇ ಈ ರಸ್ತೆಯಲ್ಲಿ ವಾಹನಗಳ ಸಮರ್ಪಕ ಪಾರ್ಕಿಂಗ್ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು.

ಸಂಬಂಧಪಟ್ಟ ಶಾಸಕರು ಮತ್ತು ಪೊಲೀಸ್ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಸುಗಮ ಸಂಚಾರದ ದೃಷ್ಟಿಯಿಂದ ಈ ವೃತ್ತದಲ್ಲಿ ಸಿಗ್ನಲ್ ಲೈಟ್ ಅಳವಡಿಸಲು ಅಥವಾ ಸಂಚಾರ ಪೇದೆಯನ್ನು ನಿಯೋಜಿಸಲು ತುರ್ತಾಗಿ ಕ್ರಮ ವಹಿಸಬೇಕೆಂದು ಸಾರ್ವಜನಿಕ ಕಳಕಳಿಯಿಂದ ಕೋರುತ್ತೇನೆ.

– ಸರೋಜಮ್ಮ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಬುದ್ಧಿವಂತರಾದಂತೆ ಹೃದಯವಂತರೂ ಆಗಬೇಕಲ್ವಾ...!

'ಹೃದಯಕ್ಕೆ ಶಿಕ್ಷಣ ನೀಡದೆ ಕೇವಲ ಮಿದುಳಿಗೆ ಶಿಕ್ಷಣ ನೀಡಿದರೆ ಅದು ಶಿಕ್ಷಣವೇ ಅಲ್ಲ' ಎಂದು ಗ್ರೀಕ್ ತತ್ತ್ವಜ್ಞಾನಿ ಅರಿಸ್ಟಾಟಲ್ ಹೇಳಿದ್ದಾರೆ. ಈ ಮಾತು ಇಂದಿನ ಶಿಕ್ಷಣ ವ್ಯವಸ್ಥೆಗೆ ಅಗತ್ಯವಾಗಿದೆ. ಏಕೆಂದರೆ ಸಮಾಜ, ಶಿಕ್ಷಣ ಇಲಾಖೆ, ಹೆತ್ತವರು ಹಾಗೂ ಶಾಲಾ–ಕಾಲೇಜುಗಳ ಆಡಳಿತ ಮಂಡಳಿ.. ಹೀಗೆ ಎಲ್ಲರಿಗೂ ಇಂದು ಬೇಕಿರುವುದು ಬುದ್ಧಿವಂತ ಪೀಳಿಗೆ. ಆ ಕಾರಣಕ್ಕೆ ಬುದ್ಧಿವಂತರನ್ನು ಸೃಷ್ಟಿಸುವ ಪಠ್ಯಕ್ರಮ ರಚಿಸಲಾಗುತ್ತಿದೆ, ಅದನ್ನೇ ಬೋಧಿಸಲಾಗುತ್ತಿದೆ. ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ, ಒಳ್ಳೆಯ ಉದ್ಯೋಗವನ್ನು ಗಿಟ್ಟಿಸಿ, ತಾವು ಬುದ್ಧಿವಂತರು ಎಂಬುದನ್ನು ಸಾಬೀತುಪಡಿಸುತ್ತಿದ್ದಾರೆ ಈ ಪೀಳಿಗೆಯ ಬಹುಪಾಲು ಮಕ್ಕಳು. ಆದರೆ ಸ್ನೇಹ–ಸಂಬಂಧಗಳು ಸೊರಗುತ್ತಿವೆ, ಅವಿಭಕ್ತ ಕುಟುಂಬಗಳು ಕಡಿಮೆಯಾಗುತ್ತಿವೆ, ವೃದ್ಧಾಶ್ರಮಗಳು ಹೆಚ್ಚಾಗುತ್ತಿವೆ, ನಂಬಿಕೆ–ವಿಶ್ವಾಸಗಳು ಕಡಿಮೆಯಾಗುತ್ತಿವೆ, ಮೋಸ–ವಂಚನೆ ಹೆಚ್ಚಾಗುತ್ತಿವೆ, ದೇವಸ್ಥಾನಗಳಲ್ಲೂ ಜನ ತುಂಬಿ ತುಳುಕುತ್ತಿದ್ದಾರೆ, ಜೈಲುಗಳಲ್ಲಿಯೂ ಕೈದಿಗಳು ತುಂಬಿ ತುಳುಕುತ್ತಿದ್ದಾರೆ ಎಂದು ದೂರುತ್ತಾ, ಈ ಕಾಲವೇ ಸರಿಯಿಲ್ಲ ಎಂದು ಜನ ಗೊಣಗುತ್ತಾರೆ. ಆದರೆ ಮಾಡಿದ್ದುಣ್ಣೊ ಮಾರಾಯ ಎಂಬಂತಾಗಿದೆ ಈಗಿನ ಜನರ ಪರಿಸ್ಥಿತಿ.

ವಚನಕಾರರಾದ ಬಸವಣ್ಣನವರು ತಮ್ಮ ವಚನವೊಂದರಲ್ಲಿ 'ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನುತುಪ್ಪವನುಯ್ದರೆ ಸಿಹಿಯಾಗಬಲ್ಲುದೆ? ಕಹಿಯಾಗುಹುದಲ್ಲದೆ?' ಎಂದು ಮಾರ್ಮಿಕವಾಗಿ ಹೇಳಿದ್ದಾರೆ. ಎಂತಹ ವಿಪರ್ಯಾಸ ಅಲ್ಲವೇ? ಮನುಷ್ಯ ಬಿತ್ತಿದ್ದನ್ನು ಬೆಳೆಯುತ್ತಾನೆಯೇ ಹೊರತು, ಬಯಸಿದ್ದನ್ನಲ್ಲ. ತಮಗೆ ಬುದ್ಧಿವಂತರು ಬೇಕಾ? ಅಥವಾ ಹೃದಯವಂತರು ಬೇಕಾ? ಎಂಬುದನ್ನು ಮೊದಲು ತೀರ್ಮಾನಿಸಬೇಕು. ತಮ್ಮ ಮಕ್ಕಳನ್ನು ಬೇರೆಲ್ಲಾ ಮಕ್ಕಳಿಗಿಂತ ಅತಿಹೆಚ್ಚು ಬುದ್ಧಿವಂತರನ್ನಾಗಿ ಮಾಡಲು ಹರಸಾಹಸ ಮಾಡುತ್ತಿರುವ ಹೆತ್ತವರು, ಅವರು ಬುದ್ಧಿವಂತರಾಗಿ ತಮ್ಮ ಕಾಲ ಮೇಲೆ ತಾವು ನಿಂತ ಮೇಲೆ, ತಮ್ಮ ಬದುಕನ್ನು ಕಟ್ಟಿಕೊಂಡ ಮೇಲೆ ಹೆತ್ತವರ ಕುರಿತು ಪ್ರೀತಿ ಇಲ್ಲ, ಕಾಳಜಿ ಇಲ್ಲ, ಇಳಿವಯಸ್ಸಿನಲ್ಲಿ ನಮ್ಮನ್ನು ನೋಡಿಕೊಳ್ಳುತ್ತಿಲ್ಲ ಎಂದು ಗೊಣಗಿದರೆ ಏನು ಫಲ? ಹೆತ್ತವರು ಮಕ್ಕಳಿಗೆ ಏನನ್ನು ತರಬೇತಿ ನೀಡುವಿರೋ, ಅವರು ಅದಾಗಿಯೇ ರೂಪುಗೊಳ್ಳುವರು.

ಇಂದಿನ ಕಾಲದ ಮಕ್ಕಳು ಹೆತ್ತವರು ಹೇಳಿದ್ದನ್ನು ಮಾಡುವುದಕ್ಕಿಂತ ಅವರು ಮಾಡಿದ್ದನ್ನು ಮಾಡುವುದೇ ಹೆಚ್ಚು. ಹೆತ್ತವರು ನಾವಿಬ್ಬರು, ನಮ್ಮ ಮಕ್ಕಳು ಮಾತ್ರ ಕುಟುಂಬ ಎಂದು ಭಾವಿಸಿ, ಅವರ ಕ್ಷೇಮ ಮಾತ್ರ ನೋಡಿಕೊಂಡು, ಅವರ ಹೆತ್ತವರನ್ನು ಕಡೆಗಣಿಸಿದ್ದರೆ, ಅದನ್ನೇ ತಮ್ಮ ಮಕ್ಕಳು ಅನುಸರಿಸುತ್ತಾರೆ ಎಂಬ ಕನಿಷ್ಠ ಜ್ಞಾನವೂ ಇರುವುದಿಲ್ಲ. ತಾವು ಹೇಳಿದ್ದನ್ನು ಮಾಡಬೇಕು, ತಾವು ಮಾಡಿದ್ದನ್ನು ಮಾಡಬಾರದು ಎಂದರೆ ಅದಾವ ನ್ಯಾಯ, ಅಲ್ಲವೇ? ನಿಮ್ಮ ನುಡಿ ಮಕ್ಕಳಿಗೆ ಪಾಠವಲ್ಲ, ನಿಮ್ಮ ನಡೆ ಮಕ್ಕಳಿಗೆ ಜೀವನ ಪಾಠ. ಮಕ್ಕಳು ಹೆತ್ತವರ ಯಾವುದಾದರು ಒಂದು ಗುಣಲಕ್ಷಣವನ್ನು ಹೊಂದಿದ್ದರೆ, ತನ್ನ ಮಗ ತನ್ನಂತೆ ಎಂದು ಬೀಗುವ ಹೆತ್ತವರು, ತಮ್ಮ ನಡೆಯನ್ನೇ ಅವರು ಬದುಕಿನಲ್ಲಿ ಅನುಸರಿಸಿದರೆ ಕೆಂಡದಂತಹ ಕೋಪ ಮಾಡಿಕೊಳ್ಳುತ್ತಾರೆ. ಇದು ಎಷ್ಟು ಸರಿ?.

ಹೆತ್ತವರು ಮಕ್ಕಳ ಮುಂದೆ ತುಂಬಾ ಚಾಣಾಕ್ಷತನ ತೋರಬಾರದು. ಮಕ್ಕಳಿಗೆ ಎಲ್ಲವೂ ಅರ್ಥವಾಗುತ್ತದೆ. ಸ್ವಾರ್ಥದ ಪರಾಕಾಷ್ಠೆಯನ್ನು ಮಕ್ಕಳ ಮುಂದೆ ಪ್ರದರ್ಶಿಸಿ, ಅವರು ಮಾತ್ರ ದಾನಶೂರ ಕರ್ಣನಂತೆ ಆಗಬೇಕೆಂದರೆ ಅದು ಸಾಧ್ಯವೇ? ಮಕ್ಕಳಿಗೆ ಶಾಲಾ–ಕಾಲೇಜಿನ ಪರೀಕ್ಷೆಗಳಿಗೆ ಸಿದ್ಧತೆ ಮಾಡಿದರೆ ಸಾಲದು, ಜೀವನ ಎಂಬ ಪರೀಕ್ಷೆಗೂ ಸಿದ್ಧತೆ ಮಾಡುವ ಪಾಠ ಮಾಡಬೇಕು. ಇಂದಿನ ಪಠ್ಯಕ್ರಮ ಮಕ್ಕಳು ವರ್ಷಪೂರ್ತಿ ಬ್ಯುಸಿ ಇರುವಂತೆ ಮಾಡುತ್ತಿದೆ. ಸ್ಕೂಲ್ ಮಿಸ್ ಆಗುತ್ತದೆ, ಪರೀಕ್ಷೆ ಹತ್ತಿರ ಬಂದಿದೆ, ಟ್ಯೂಷನ್ ಕ್ಲಾಸ್ ಮಿಸ್ ಆಗುತ್ತದೆ ಅನ್ನುವ ಕಾರಣಕ್ಕೆ ಮಕ್ಕಳನ್ನು ಹತ್ತಿರದ ಸಂಬಂಧಿಕರ ಶುಭಕಾರ್ಯಗಳಾದ ಮದುವೆಗೆ, ಆರತಕ್ಷತೆಗೆ, ನಾಮಕರಣಕ್ಕೆ ಕರೆದುಕೊಂಡು ಹೋಗುವುದಿಲ್ಲ. 'ಅಲ್ಲಿ ನಿಮಗೇನು ಕೆಲಸ, ನೀನು ಬರದಿದ್ದರೂ ನಡೆಯುತ್ತದೆ' ಎಂಬ ಕುಹಕವಾಡಿ ಅವರನ್ನು ಮನೆಯಲ್ಲಿಯೇ ಕೂಡಿ ಹಾಕಿ ಪುಸ್ತಕದ ಹುಳು ಮಾಡುತ್ತಾರೆ. ಅಷ್ಟೇ ಏಕೆ ಹತ್ತಿರದ ಸಾವಿಗೂ ಮಕ್ಕಳನ್ನು ಕರೆದುಕೊಂಡು ಹೋಗುವುದಿಲ್ಲ. ಕಷ್ಟಸುಖದಲ್ಲಿ ಪಾಲ್ಗೊಳ್ಳುವ



ಎಷ್ಟೋ ಮಕ್ಕಳಿಗೆ ತಮ್ಮ ಪಕ್ಕದ ಮನೆಯ ಅಂಕಲ್ ಹೆಸರು ಗೊತ್ತಿರುವುದಿಲ್ಲ, ಎದುರು ಮನೆಯ ಆಂಟಿಯ ಹೆಸರು ಗೊತ್ತಿರುವುದಿಲ್ಲ. ಎರಡು ಮನೆ ಆಚೆ ಇರುವ ತನ್ನ ವಾರಿಗೆಯ ಹುಡುಗ/ಹುಡುಗಿ ಯಾವ ಕಾಲೇಜಿನಲ್ಲಿ ಓದುತ್ತಿದ್ದಾರೆ ತಿಳಿದಿಲ್ಲ. ಒಂದು ದ್ವೀಪದಲ್ಲಿ ಬದುಕುವ ರೀತಿಯಲ್ಲಿ ಬದುಕಿದರೆ ಬದುಕಿಗೆ ಅರ್ಥವಿದೆಯೇ? ಎಷ್ಟೋ ಮಕ್ಕಳಿಗೆ ತಮಗಾಗುವ ನೋವನ್ನು ಹೇಳಿಕೊಳ್ಳಲು ಆಗದೆ ಮಾನಸಿಕ ವೇದನೆ ಅನುಭವಿಸುತ್ತಾರೆ. ಜೀವನದ ಸಣ್ಣ ಸೋಲುಗಳನ್ನು ಅವರಿಗೆ ಜೀರ್ಣಿಸಿಕೊಳ್ಳಲಾಗದೆ ಆತ್ಮಹತ್ಯೆಯಂತಹ ದೊಡ್ಡ ತೀರ್ಮಾನ ಮಾಡಿಬಿಡುತ್ತಾರೆ. ಇವೆಲ್ಲಾ ಹೃದಯಕ್ಕೆ ಪಾಠ ಆಗದೇ ಇರುವ ಪರಿಣಾಮವಾಗಿರುತ್ತದೆ. ಜೀವನದಲ್ಲಿ ಏನೇ ಆಗಲಿ ಅದನ್ನು ಎದುರಿಸುತ್ತೇನೆ ಎಂಬ ಮನೋಭಾವ ಕೇವಲ ತರಗತಿ ಶಿಕ್ಷಣದಲ್ಲಿ ಸಿಗಲು ಸಾಧ್ಯವಿಲ್ಲ.

ಪಾಠವನ್ನೇ ಮಕ್ಕಳಿಗೆ ಕಲಿಸದೆ, ನಾಳೆ ತಮ್ಮ ಮನೆಯ ಕಾರ್ಯಗಳಿಗೆ ಯಾರೂ ಬರಲಿಲ್ಲ ಎಂದರೆ, ಹೇಗೆ ಬರಲು ಸಾಧ್ಯ, ಅಲ್ಲವೇ?

ಮಕ್ಕಳಿಗೆ ಪರಿಪೂರ್ಣವಾದ ವ್ಯಕ್ತಿತ್ವ ವಿಕಸನವಾಗಬೇಕು. ಕೇವಲ ಮಿದುಳು ವಿಕಸನವಾದರೆ ಸಾಲದು. ಅವರ ಹೃದಯಕ್ಕೂ ಪಾಠದ ಅವಶ್ಯವಿದೆ. ತನ್ನ ಮಗ/ಮಗಳು ಓದಿನಲ್ಲಿ ಮುಂದು, ಚೆಸ್‌ನಲ್ಲಿ ಫಸ್ಟ್, ಸಿಂಗಿಂಗ್‌ನಲ್ಲಿ ಬೆಸ್ಟ್, ಸ್ಪೋರ್ಟ್ಸ್‌ನಲ್ಲಿ ಮೆಡಲ್ ತಂದ, ಡಾನ್ಸ್‌ನಲ್ಲಿ ಪ್ರೈಜ್ ತಂದ/ತಂದಳು ಹೀಗೆ ಮಕ್ಕಳ ಪ್ರತಿಭೆಯನ್ನು ಊರಿಗೆಲ್ಲಾ ತಿಳಿಸುತ್ತಾರೆ. ಆದರೆ ಅವರ ಹುಟ್ಟುಹಬ್ಬವನ್ನು ಮನೆಯ ನಾಲ್ಕು ಮಂದಿಯೇ ಸೇರಿ, ನಾಲ್ಕು ಕೇಕ್ ಕತ್ತರಿಸಿ ಗ್ರ್ಯಾಂಡ್ ಆಗಿ ಆಚರಿಸುತ್ತಾರೆ. ತಂದಿರುವ ಕೇಕ್ ತಿನ್ನುವಷ್ಟಾದರೂ ಮಂದಿಯನ್ನು ಕರೆಯದೇ ಇರುವುದು ವಿಪರ್ಯಾಸ. ಮಕ್ಕಳ ಹುಟ್ಟುಹಬ್ಬ ಬಂದಾಗ ಒಂದು ವೃದ್ಧಾಶ್ರಮಕ್ಕೆ ಭೇಟಿ ನೀಡಿ, ಅವರಿಗೆ ಊಟ ಹಾಕಿಸುವ, ಅವರೊಂದಿಗೆ ಸಂಭ್ರಮಿಸುವ ಕೆಲಸ ಮಾಡಿದರೆ ಮಕ್ಕಳಿಗೂ ಪ್ರಪಂಚದ ಅರಿವಾಗುತ್ತದೆ. ಅವರ ಹೃದಯಕ್ಕೂ ಪಾಠಗಳು ನಾಟುತ್ತವೆ. ಅದರಿಂದ ಅವರು ಮುಂದೆ ಉತ್ತಮ ನಡೆಯನ್ನು ಅನುಸರಿಸಬಹುದು.

ಎಷ್ಟೋ ಮಕ್ಕಳಿಗೆ ತಮ್ಮ ಪಕ್ಕದ ಮನೆಯ ಅಂಕಲ್ ಹೆಸರು ಗೊತ್ತಿರುವುದಿಲ್ಲ, ಎದುರು ಮನೆಯ ಆಂಟಿಯ ಹೆಸರು ಗೊತ್ತಿರುವುದಿಲ್ಲ. ಎರಡು ಮನೆ ಆಚೆ ಇರುವ ತನ್ನ ವಾರಿಗೆಯ ಹುಡುಗ/ಹುಡುಗಿ ಯಾವ ಕಾಲೇಜಿನಲ್ಲಿ ಓದುತ್ತಿದ್ದಾರೆ ತಿಳಿದಿಲ್ಲ. ಒಂದು ದ್ವೀಪದಲ್ಲಿ ಬದುಕುವ ರೀತಿಯಲ್ಲಿ ಬದುಕಿದರೆ ಬದುಕಿಗೆ ಅರ್ಥವಿದೆಯೇ? ಎಷ್ಟೋ ಮಕ್ಕಳಿಗೆ ತಮಗಾಗುವ ನೋವನ್ನು ಹೇಳಿಕೊಳ್ಳಲು ಆಗದೆ ಮಾನಸಿಕ ವೇದನೆ ಅನುಭವಿಸುತ್ತಾರೆ. ಜೀವನದ ಸಣ್ಣ ಸೋಲುಗಳನ್ನು ಅವರಿಗೆ ಜೀರ್ಣಿಸಿಕೊಳ್ಳಲಾಗದೆ ಆತ್ಮಹತ್ಯೆಯಂತಹ ದೊಡ್ಡ ತೀರ್ಮಾನ ಮಾಡಿಬಿಡುತ್ತಾರೆ. ಇವೆಲ್ಲಾ ಹೃದಯಕ್ಕೆ ಪಾಠ ಆಗದೇ ಇರುವುದರ ಪರಿಣಾಮವಾಗಿರುತ್ತದೆ. ಜೀವನದಲ್ಲಿ ಏನೇ ಆಗಲಿ ಅದನ್ನು ಎದುರಿಸುತ್ತೇನೆ ಎಂಬ ಮನೋಭಾವ ಕೇವಲ ತರಗತಿ ಶಿಕ್ಷಣದಲ್ಲಿ ಸಿಗಲು ಸಾಧ್ಯವಿಲ್ಲ.

ಹೀಗೆ ಬ್ಯಾಂಕ್ ಉದ್ಯೋಗಿ ಕುಟುಂಬವೊಂದು ನಗರ ಪ್ರದೇಶದಲ್ಲಿರುತ್ತದೆ. ಇಬ್ಬರೂ ಉದ್ಯೋಗಿಗಳಾದ ಕಾರಣ, ತಮ್ಮ ಅವಳಿ ಗಂಡು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕೆಂಬ ಕಾರಣಕ್ಕೆ ಪ್ರತಿಷ್ಠಿತ ಶಾಲೆಗೆ ಸೇರಿಸಿರುತ್ತಾರೆ. ಅವರ ಅಪ್ಪ–ಅಮ್ಮ ಜೊತೆಗಿದ್ದರೆ ಮಕ್ಕಳು ಓದುವುದಿಲ್ಲ ಎಂಬ ಕಾರಣಕ್ಕೆ ಅವರನ್ನು ಊರಿನಲ್ಲಿಯೇ ಬಿಟ್ಟಿರುತ್ತಾರೆ. ಆ ಹಿರಿಯ ಜೀವಗಳನ್ನು ನೋಡಲು ಹೋಗುತ್ತಿದ್ದುದು ಅಪರೂಪವೇ ಆಗಿರುತ್ತದೆ. ಆ ಉದ್ಯೋಗಿಗಳು ಎಲ್ಲಿಗೆ ವರ್ಗಾವಣೆಯಾದರೂ ಉತ್ತಮ ಸಂಸ್ಥೆಗಳನ್ನು ಹುಡುಕಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುತ್ತಾರೆ. ಆದರೆ ಮಕ್ಕಳಿಗೆ ಆಟ ಆಡಲು, ಸ್ನೇಹಿತರೊಂದಿಗೆ ಬೆರೆಯಲು ಅವಕಾಶ ಕೊಡುತ್ತಿರುವುದಿಲ್ಲ. ಹಬ್ಬಹರಿದಿನಗಳಲ್ಲಿಯೂ ಅವರು ಕುಳಿತು ಓದಲೇ ಬೇಕಾಗಿರುತ್ತದೆ. ಯಾವುದೇ ಸಂಗೀತ ತರಗತಿಗೆ ಸೇರಿಸಿರುವುದಿಲ್ಲ. ಗಾಳಿಪಟ ಹಾರಿಸುವ ಅವಕಾಶ ನೀಡಿರುವುದಿಲ್ಲ, ಅಷ್ಟೇ ಏಕೆ ದೀಪಾವಳಿಗೆ ಪಟಾಕಿ ಹಚ್ಚಿ ಸಂಭ್ರಮಿಸಲು ಸಹ ಬಿಟ್ಟಿರುವುದಿಲ್ಲ.

ಹೆತ್ತವರ ಆಸೆ ಹಾಗೂ ಎಣಿಕೆಯಂತೆ ಅವರಿಗೆ ಪ್ರತಿಷ್ಠಿತ ಕಂಪನಿಯಲ್ಲಿ ಉತ್ತಮ ಸಂಬಳದ ಕೆಲಸ ಲಭಿಸುತ್ತದೆ. ಕೆಲವು ವರ್ಷಗಳ ನಂತರ ಅವರಿಗೆ ಜರ್ಮನ್ ದೇಶದ ಶಾಖೆಗೆ ವರ್ಗಾವಣೆಯಾಗುತ್ತದೆ. ಈ ನಡುವೆ ಮಕ್ಕಳಿಗೆ ಮದುವೆ ಮಾಡುತ್ತಾರೆ. ತಮ್ಮ ಮಡದಿಯರೊಂದಿಗೆ ಆ ಇಬ್ಬರು ಮಕ್ಕಳು ಜರ್ಮನ್ ದೇಶದಲ್ಲಿಯೇ ನೆಲೆಸುತ್ತಾರೆ. ವರ್ಷಕ್ಕೆ ಒಮ್ಮೆಯಾದರೂ ಅವರು ಹೆತ್ತವರನ್ನು ನೋಡಲು ತವರು ದೇಶಕ್ಕೆ ಬರುವುದಿಲ್ಲ. ಮಕ್ಕಳಿಗೆ ಫೋನ್ ಮಾಡಿ ನಿಮ್ಮನ್ನು ನೋಡಬೇಕು ಎಂದು ಹೆತ್ತವರು ಹೇಳಿದರೆ 'ನಮಗೆ ಅಲ್ಲಿಗೆ ಬರಲು ಇಷ್ಟವಿಲ್ಲ, ಬೇಕಿದ್ದರೆ ನೀವೆ ನಮ್ಮೊಟ್ಟಿಗೆ ಬಂದು ನೆಲೆಸಿ' ಎಂಬ ಉತ್ತರ ಬರುತ್ತದೆ.

ಈ ಸಮಸ್ಯೆಯನ್ನು ತಮ್ಮ ಕುಟುಂಬದ ವೈದ್ಯರಿಗೆ ತಿಳಿಸಿದಾಗ, ಅವರು ಭಾನುವಾರ ಕ್ಲಿನಿಕ್‌ನಲ್ಲಿ ಖುದ್ದು ಬಂದು ನೋಡುವಂತೆ ತಿಳಿಸುತ್ತಾರೆ. ಭಾನುವಾರ ವೈದ್ಯರು ಇವರನ್ನು ಭೇಟಿ ಮಾಡಿದಾಗ, ಇವರಿಗೆ ನೆರವು ನೀಡುವ ಭರವಸೆ ನೀಡಿ, ಅವರ ಮಕ್ಕಳಿಗೆ ದೂರವಾಣಿ ಕರೆ ಮಾಡಿ, ಬುದ್ಧಿವಾದ ಹೇಳಲು ಶುರು ಮಾಡುತ್ತಾರೆ. ಈ ಸಮಯದಲ್ಲಿ ಫೋನ್‌ನ ಸ್ಪೀಕರ್ ಆನ್ ಮಾಡಿ ಆ ಹೆತ್ತವರು ಕೇಳುವಂತೆ ವ್ಯವಸ್ಥೆ ಮಾಡಿರುತ್ತಾರೆ. ವೈದ್ಯರ ಬುದ್ಧಿಮಾತು ಆಲಿಸಿದ ಮೇಲೆ ಮಕ್ಕಳು ಹೇಳಿದ್ದು ಇಷ್ಟು, 'ನಮಗೆ ನಮ್ಮ ದೇಶ, ಊರು ಎಂದರೆ ಶಾಲೆ–ಕಾಲೇಜು, ಪರೀಕ್ಷೆ, ಅಂಕಪಟ್ಟಿ ಇಷ್ಟೇ ನೆನಪಿಗೆ ಬರುತ್ತದೆ. ನಮ್ಮ ಹೆತ್ತವರು ಬಾಲ್ಯದಲ್ಲಿ ನಮ್ಮ ಜೊತೆ ಒಂದು ದಿನ ಆಟವಾಡಲಿಲ್ಲ, ಹೊರಗೆ ಪಿಕ್‌ನಿಕ್‌ಗೆ ಕರೆದುಕೊಂಡು ಹೋಗಲಿಲ್ಲ. ಯಾವುದೇ ಹಬ್ಬವನ್ನು ಸಂಭ್ರಮಿಸಲು ಬಿಡಲಿಲ್ಲ. ಹಾಗಾಗಿ ನಮಗೆ ನಮ್ಮ ಊರನ್ನು, ಹೆತ್ತವರನ್ನು ನೋಡಲು ಇಷ್ಟವಿಲ್ಲ. ಇಲ್ಲಿ (ಜರ್ಮನಿಯಲ್ಲಿ) ನಮ್ಮ ಹೆಂಡತಿ ಮಕ್ಕಳೊಂದಿಗೆ ಆನಂದವಾಗಿ ಜೀವನ ಸಾಗಿಸುತ್ತಿದ್ದೇವೆ. ನಾವು ಬಾಲ್ಯದಲ್ಲಿ ಕಳೆದುಕೊಂಡದ್ದನ್ನೆಲ್ಲಾ ನಮ್ಮ ಮಕ್ಕಳಿಗೆ ನೀಡಲು ಪ್ರಯತ್ನಿಸುತ್ತಿದ್ದೇವೆ. ಈ ವಿಷಯವಾಗಿ ತಾವು ಮತ್ತೊಮ್ಮೆ ಸಂಪರ್ಕಿಸುವ ಅಗತ್ಯವಿಲ್ಲ' ಎಂದು ಹೇಳಿ ಕರೆಕಟ್ ಮಾಡಿ ಬಿಡುತ್ತಾರೆ. ಇದನ್ನು ಕೇಳಿದ ಆ ಹಿರಿಯ ಜೀವಿಗಳು ಮಾನಸಿಕವಾಗಿ ಜರ್ಜರಿತರಾಗುತ್ತಾರೆ. ವೈದ್ಯರು ಸಹ ಆಳವಾಗಿ ಆಲೋಚಿಸಲು ಪ್ರಾರಂಭಿಸುತ್ತಾರೆ. ಕೊನೆಗೆ ಏನೋ ಹೊಳೆದಂತಾಗಿ, ಕ್ಷಮಿಸಿ, ನಾನು ಭಾನುವಾರ ನನ್ನ ಮಗುವಿಗೆ ಸಮಯ ನೀಡಬೇಕಿತ್ತು, ನಿಮಗೆ ಬರಲು ತಿಳಿಸಿದೆ. ಇನ್ನು ಮುಂದೆ ನಾನು ಭಾನುವಾರ ಕ್ಲಿನಿಕ್‌ಗೆ ಬರುವುದಿಲ್ಲ. ನಿಮ್ಮ ಪರಿಸ್ಥಿತಿ ನನಗೆ ಬರಬಾರದು ಅಲ್ಲವೇ ? ಎಂದು ತಿಳಿಸಿದವರೆ, ಮನೆಯಲ್ಲಿರುವ ತಮ್ಮ ಮಗುವಿಗೆ ಕರೆ ಮಾಡಿ 'ನಾನು ನಿನ್ನನ್ನು ಇಂದು ಅಜ್ಜಿ ಮನೆಗೆ ಕರೆದೊಯ್ಯುತ್ತಿದ್ದೇನೆ, ಕ್ಲಿನಿಕ್‌ನಿಂದ ಬರುವವರೆವಿಗೆ ಸಿದ್ಧವಾಗಿರು' ಎಂದು ಹೇಳಿ ಖುಷಿಯಾಗಿ ಅಲ್ಲಿಂದ ಹೊರಡುತ್ತಾರೆ.

ಈ ಕಥೆ ಓದಿದ ಮೇಲೆ ಹೃದಯಕ್ಕೆ ಶಿಕ್ಷಣ ನೀಡುವುದು ಎಷ್ಟು ಅವಶ್ಯ ಎಂದು ತಿಳಿಯುತ್ತದೆ, ಅಲ್ಲವೇ ?

ಹೂರಣ : ಮಿದುಳಿಗೆ ಪಾಠ ಮಾಡಿದರೆ ಬುದ್ಧಿವಂತರಾಗುತ್ತಾರೆ, ಹೃದಯಕ್ಕೆ ಪಾಠ ಮಾಡಿದರೆ ಹೃದಯವಂತರಾಗುತ್ತಾರೆ.

ಶಂಕರಾಚಾರ್ಯ ಸೇವಾರತ್ನ ಪ್ರಶಸ್ತಿ ಪ್ರದಾನ

ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ 40 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಶಂಕರಾಚಾರ್ಯರ ಜಯಂತಿ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಶಂಕರಾಚಾರ್ಯ ಸೇವಾ ರತ್ನ ಪ್ರಶಸ್ತಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಲಾಯಿತು.

ಮೈಸೂರು, ಜೂ.22(ಎಂಟಿವೈ)– ಶ್ರೀ ಶಂಕರಾಚಾರ್ಯರ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಶಂಕರಾಚಾರ್ಯ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರಿನ ಗನ್‌ಹೌಸ್ ಸಮೀಪದ ಶಂಕರ ಮಠದಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಆಯೋಜಿಸಿದ್ದ ಶಂಕರಾಚಾರ್ಯರ ಜಯಂತಿ ಹಾಗೂ ತತ್ವಜ್ಞಾನಿಗಳ ದಿನಾಚರಣೆ ಕಾರ್ಯಕ್ರಮಕ್ಕೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಶಂಕರಾಚಾರ್ಯರು ದೇಶ ಕಂಡ ಮಹಾನ್ ಆಚಾರ್ಯವರ್ಯರಲ್ಲಿ ಒಬ್ಬರಾಗಿದ್ದು, ಬರಿ ಕಾಲಿನಲ್ಲಿಯೇ ದೇಶವನ್ನು ಎರಡು ಬಾರಿ ಸುತ್ತಿ ಹಿಂದೂ ಧರ್ಮದ ಪ್ರಚಾರ ಮಾಡಿದರು. ಅವರು ಪಟ್ಟ ಶ್ರಮದಿಂದ ಭಾರತದಲ್ಲಿ ಇಂದು ಹಿಂದೂ ಧರ್ಮ ಗಟ್ಟಿಯಾಗಿ ರೂಪುಗೊಳ್ಳಲು ಸಾಧ್ಯವಾಗಿದೆ. ಧರ್ಮದ ರಕ್ಷಣೆಗೆ ಅವರು ನೀಡಿದ ಕೊಡುಗೆ ಅಪಾರ. ಸರ್ವಕಾಲದಲ್ಲೂ ಶಂಕರಾಚಾರ್ಯರನ್ನು ಎಲ್ಲರೂ ಸ್ಮರಿಸಬೇಕು ಎಂದು ಹೇಳಿದರು.

ಸೇವಾ ರತ್ನ ಪ್ರಶಸ್ತಿ ಪ್ರದಾನ: ಇದೇ ವೇಳೆ ಶಂಕರಾಚಾರ್ಯರ ಜಯಂತಿ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಸಿ.ವೆಂಕಟೇಶ್, ಬಿ.ಎಸ್.ರವಿಶಂಕರ್, ಜಿ.ಜಿ.ರಾಘವನ್, ಕೆ.ಶೇಷಾದ್ರಿ, ಪಿ.ಬಾಲಸುಬ್ರಮಣ್ಯ, ಡಾ.ಹೆಚ್.ಎಸ್.ವಿಶ್ವನಾಥ್, ಡಾ.ಶ್ರೀಷಾ ಭಟ್, ಎಂ.ಎಸ್.ಮಹೇಶ್, ಸಿ.ಎಸ್. ನಿಧಿ ಕುದರ್, ಎಸ್.ಶ್ರೀರಾಮ ಶೆಟ್ಟಿ ಅವರಿಗೆ ಶಂಕರಾಚಾರ್ಯ ಸೇವಾ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 40 ವಿದ್ಯಾರ್ಥಿಗಳಿಗೆ ಅಖಿಲ ಭಾರತ ಕಾಂಗ್ರೆಸ್ ಸಮಾಜ ಸೇವಾ ಸಮಿತಿಯ ರಾಜ್ಯಾಧ್ಯಕ್ಷ ಪಿ.ಲಕ್ಷ್ಮಣ ಪ್ರಭು ಪ್ರತಿಭಾ ಪುರಸ್ಕಾರ ವಿತರಿಸಿದರು. ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ರಾಜ್ಯಾಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಗೋಲ್ಡ್ ಸುರೇಶ್, ನೇಹಾ, ಮೊಗಣ್ಣಾಚಾರ್, ಕೇದಾರ್ ವಂದಿತ್, ಹನುಮಂತಯ್ಯ ಸಿಂದುವಳ್ಳಿ ಶಿವಕುಮಾರ್, ಶಾಂತರಾಜೇ ಅರಸ್, ಪ್ರಭುಶಂಕರ, ಭಾಗ್ಯಮ್ಮ, ಪದ್ಮ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹೈಕಮಾಂಡ್ ಮಟ್ಟದಲ್ಲಿ ಪ್ರಭಾವ ಹೆಚ್ಚಿಸಿಕೊಳ್ಳಲು ಕಪ್ಪ ಕಾಣಿಕೆ ಸಲ್ಲಿಸಲು ಸಚಿವರ ಪೈಪೋಟಿ

ವಿಪಕ್ಷ ನಾಯಕ ಆರ್.ಅಶೋಕ್ ಆರೋಪ

ಮೈಸೂರು, ಜೂ.22(ಬಿಎಲ್‌ಯು)– ಕಪ್ಪ ಕಾಣಿಕೆ ಸಲ್ಲಿಸುವ ಮೂಲಕ ಹೈಕಮಾಂಡ್ ಮಟ್ಟದಲ್ಲಿ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ಸಚಿವರು ನಾ ಮುಂದು ತಾ ಮುಂದು ಎಂದು ಪೈಪೋಟಿ ಗಿಳಿದಿದ್ದಾರೆ ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.



ನಗರದ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಹೈಕಮಾಂಡ್‌ಗೆ ಹೆಚ್ಚು ಕಪ್ಪ ಕಾಣಿಕೆ ನೀಡುವ ಸಚಿವರಿಗೆ ಬೆಲೆ ಇದೆ. ಆದ ಕಾರಣ ಸಚಿವರು ಲೂಟಿ ನಡೆಸುತ್ತಿದ್ದಾರೆ ಎಂದು ಆಪಾದಿಸಿದರು.

ಲಂಚ ನೀಡಿದವರಿಗೆ ವಸತಿ ನೀಡುವ ಶಾಸಕ ಬಿ.ಆರ್.ಪಾಟೀಲ್ ಆಡಿಯೋ ವೈರಲ್ ಬಗ್ಗೆ ಪ್ರತಿಕ್ರಿಯೆ ನೀಡಿದ ಅಶೋಕ್ ಅವರು, ಹೈಕಮಾಂಡ್‌ಗೆ ಕಪ್ಪ ಕಾಣಿಕೆ ಸಲ್ಲಿಸಲು ಸರ್ಕಾರವೇ ಲೂಟಿಗಿಳಿದಿದೆ ಎಂದು ದೂರಿದರು.

ಶೇಕಡ 60 ಪರ್ಸೆಂಟ್ ಸರ್ಕಾರದಲ್ಲಿ ಪ್ರತಿ ಇಲಾಖೆಯಲ್ಲೂ ಲಂಚ ತಾಂಡವವಾಡುತ್ತಿದೆ. ಬಡವರ ಮನೆ ಹಂಚಿಕೆಯಲ್ಲೂ ಹಣ ವಸೂಲಿ ಮಾಡುತ್ತಿದ್ದಾರೆ. ವಸತಿ, ಅಬಕಾರಿ ಇಲಾಖೆಯಲ್ಲಿ ವಸೂಲಿ ಮಿತಿ ಮೀರಿದೆ ಎಂದು ಹೇಳಿದರು.

ವಾಲ್ಮೀಕಿ ಹಗರಣ, ಮುಡಾ ಹಗರಣದ ಲೂಟಿ ಆಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಹಿಡಿದು ಎಲ್ಲಾ ಸಚಿವರು ಲೂಟಿ ಮಾಡುತ್ತಿದ್ದಾರೆ. ಬಿಹಾರ ಸೇರಿದಂತೆ ಇತರೆ ರಾಜ್ಯಗಳ ಚುನಾವಣಾ ವೆಚ್ಚಕ್ಕೆ ಕರ್ನಾಟಕದಿಂದ ಲೂಟಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ಕಪ್ಪ ಕಾಣಿಕೆ ತೆಗೆದುಕೊಳ್ಳಲು ಕರ್ನಾಟಕ ಒಂದೇ ರಾಜ್ಯವಿರುವ ಕಾರಣ ಲೂಟಿ ಮಾಡಿ ಹಣ ತರಲು ಹೇಳಿದೆ ಎಂದು ತಿಳಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ರಾಜ್ಯಾದ್ಯಂತ ಹೋರಾಟ ಮಾಡುತ್ತೇವೆ ಎಂದು ಅಶೋಕ್ ಎಚ್ಚರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visvesvaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಯೋಗ ದಿನಾಚರಣೆ



ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಶಾಲೆಯಲ್ಲಿ ಯೋಗ ದಿನ ಆಚರಿಸಲಾಯಿತು.

ಮೈಸೂರು, ಜೂ.22– ಶ್ರೀನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಶಾಲೆಯಲ್ಲಿ ಒಂದು ಭೂಮಿ ಒಂದೇ ಆರೋಗ್ಯಕ್ಕಾಗಿ ಯೋಗ ಧ್ಯೇಯದಡಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು.

ಮಕ್ಕಳು ಯೋಗ ಗೀತೆ, ಯೋಗ ನೃತ್ಯ ಮಾಡಿ ಸಂತಸಪಟ್ಟರು. ಶಾಲಾ ಪ್ರಧಾನಾಚಾರ್ಯರಾದ ಶ್ರೀಮತಿ ಅನಿತಾ ಮಕ್ಕಳಿಗೆ ಈ ದಿನದ ಸಂಕಲ್ಪವನ್ನು ಬೋಧಿಸಿದರೆ, ಶ್ರೀಹರ್ಷರವರು ಯೋಗ ದಿನದ ಮಹತ್ವವನ್ನು ಸಾರಿದರು. ಮೈತ್ರಿ, ಬಸವರಾಜ್, ನಂದಿನಿಯವರು ಶ್ಲೋಕಗಳನ್ನು ಹೇಳಿಸಿ ಯೋಗಾಭ್ಯಾಸ ಮಾಡಿಸಿದರು. ಅಂತಿಮವಾಗಿ ಮಾತನಾಡಿದ ಅತಿಥಿಗಳಾದ ಡಾ.ಮೂರ್ತಿ, ದೇಹ–ಮನಸ್ಸಿಗೆ ಐದು ರೀತಿಯ ಆರೋಗ್ಯ ಬೇಕು. ಪ್ರತಿ ಹಂತದಲ್ಲೂ ಧನಾತ್ಮಕ ಚಿಂತನೆ ಇರಬೇಕು ಎಂದು ತಿಳಿಸಿಕೊಟ್ಟರು. ಕೊನೆಯಲ್ಲಿ ಮಕ್ಕಳಿಗೆ ಕಲ್ಲುಸಕ್ಕರೆ, ಬೆಲ್ಲದ ಅಚ್ಚುಗಳನ್ನು ನೀಡಿ ಶಾಂತಿ ಮಂತ್ರದೊಂದಿಗೆ ಕಾರ್ಯಕ್ರಮ ಯೋಗ ದಿನ ಅಂತ್ಯಗೊಂಡಿತು.



ಮೈಸೂರಿನ ವಾರ್ಡ್ ನಂ.4ರ ಲೋಕನಾಯಕ ನಗರ, ಹೆಬ್ಬಾಳು, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಉದ್ಯಾನವನದಲ್ಲಿ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ ನೇತೃತ್ವದಲ್ಲಿ ಯೋಗ ಕಾರ್ಯಕ್ರಮ ನಡೆಯಿತು.

ಇಂದು ಮೈಸೂರು ಜಿಲ್ಲಾ ಬಿಜೆಪಿ ನೂತನ ಅಧ್ಯಕ್ಷ ಸುಬ್ಬಣ್ಣ ಪದಗ್ರಹಣ



ಮೈಸೂರು: ನೂತನ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಎನ್.ಸುಬ್ಬಣ್ಣನವರ ಪದಗ್ರಹಣ ಸಮಾರಂಭ ಸೋಮವಾರ ನಡೆಯಲಿದೆ. ಪಕ್ಷದ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅಧ್ಯಕ್ಷತೆಯಲ್ಲಿ ನಗರದ ಪಕ್ಷದ ಕಚೇರಿಯಲ್ಲಿ ಬೆಳಗ್ಗೆ 11.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ನಿಯೋಜಿತ ಜಿಲ್ಲಾಧ್ಯಕ್ಷ ಸುಬ್ಬಣ್ಣ ಜವಾಬ್ದಾರಿ ಸ್ವೀಕರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಮಾಜಿ ಸಚಿವ ಎನ್.ಮಹೇಶ್, ಎಂ.ರಾಜೇಂದ್ರ, ಸಂಸದ ಯದುವೀರ್, ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ, ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಅನಿಲ್ ಥಾಮಸ್, ಪಕ್ಷದ ಪದಾಧಿಕಾರಿಗಳು, ಮುಖಂಡರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪರಿಸರ ಮಾಲಿನ್ಯಕ್ಕೆ ಏಕೈಕ ಪರಿಹಾರ ಹೆಚ್ಚು ಹೆಚ್ಚು ಮರ ಬೆಳೆಸುವುದೇ ಆಗಿದೆ

ಓಯಸ್ಕಾ ಇಂಟರ್‌ನ್ಯಾಷನಲ್ ಸೌತ್ ಇಂಡಿಯಾ ಅಧ್ಯಕ್ಷ ಡಾ.ಥಾಮಸ್ ಥೆವರಾ ಸಲಹೆ



ಓಯಸ್ಕಾ ಇಂಟರ್‌ನ್ಯಾಷನಲ್ ಮೈಸೂರು ಚಾಪ್ಟರ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಓಯಸ್ಕಾ ಇಂಟರ್‌ನ್ಯಾಷನಲ್ ನಿರ್ದೇಶಕ ಎಂ.ಅರವಿಂದಬಾಬು ಅವರನ್ನು ಸನ್ಮಾನಿಸಲಾಯಿತು. ಓಯಸ್ಕಾ ಇಂಟರ್‌ನ್ಯಾಷನಲ್ ಸೌತ್ ಇಂಡಿಯಾ ಅಧ್ಯಕ್ಷ ಡಾ.ಥಾಮಸ್ ಥೆವರಾ, ಮೈಸೂರು ಚಾಪ್ಟರ್ ಅಧ್ಯಕ್ಷ ಎಂ.ಪಿ.ವರ್ಷ ಮತ್ತಿತರರಿದ್ದರು.

ಮೈಸೂರು, ಜೂ.22(ಎಂಕೆ)– ಪರಿಸರ ಮಾಲಿನ್ಯಕ್ಕೆ ಏಕೈಕ ಪರಿಹಾರ ಹೆಚ್ಚು ಹೆಚ್ಚು ಮರ ಬೆಳೆಸುವುದೇ ಆಗಿದೆ ಎಂದು ಓಯಸ್ಕಾ ಇಂಟರ್‌ನ್ಯಾಷನಲ್ ಸೌತ್ ಇಂಡಿಯಾ ಅಧ್ಯಕ್ಷ ಡಾ.ಥಾಮಸ್ ಥೆವರಾ ಸಲಹೆ ನೀಡಿದರು.

ಮೈಸೂರಿನ ಗೌರಿಶಂಕರನಗರದಲ್ಲಿರುವ ಕ್ರೆಡಿಟ್–ಐ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಪರಿಸರ, ಕೃಷಿ, ಶಿಕ್ಷಣ, ತರಬೇತಿ, ಭ್ರಾತೃತ್ವ, ಧಾರ್ಮಿಕ ಸೌಹಾರ್ದತೆ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವ ಜಪಾನ್ ಮೂಲದ ಓಯಸ್ಕಾ ಇಂಟರ್‌ನ್ಯಾಷನಲ್ ಮೈಸೂರು ಚಾಪ್ಟರ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದಲ್ಲಿ 41 ವರ್ಷಗಳ ಇತಿಹಾಸ ಹೊಂದಿರುವ ಓಯಸ್ಕ ಇಂಟರ್‌ನ್ಯಾಷನಲ್, ಪರಿಸರ ಸಂರಕ್ಷಣೆ, ಹವಾಮಾನ ಬದಲಾವಣೆ ಕುರಿತು ಜಾಗೃತಿ ಮೂಡಿಸುತ್ತಿದೆ. ದಿನೇ ದಿನೆ ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಹೆಚ್ಚಾದಂತೆ ಓಝೋನ್ ಪದರಕ್ಕೆ ಹಾನಿಯಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಒಂದು ಲೀಟರ್ ಪೆಟ್ರೋಲ್ ಸುಟ್ಟರೆ 200 ಗ್ರಾಂ ಕಾರ್ಬನ್ ಡೈ ಆಕ್ಸೈಡ್ ವಾತಾವರಣಕ್ಕೆ ಸೇರಲಿದೆ. ಹಾಗೆಯೇ ಒಂದು ಲೀಟರ್ ಡೀಸೆಲ್ ಸುಟ್ಟರೆ 230 ಗ್ರಾಂ ಕಾರ್ಬನ್ ಡೈ ಆಕ್ಸೈಡ್ ವಾತಾವರಣ ಸೇರಲಿದ್ದು, ಇದಕ್ಕಿರುವ ಪರಿಹಾರವೆಂದರೆ ಮರಗಳನ್ನು ಹೆಚ್ಚಾಗಿ ಬೆಳೆಸುವುದಾಗಿದೆ. ಆದ್ದರಿಂದ ಪ್ರತೀ ಶಾಲೆಗಳಲ್ಲಿ ಸ್ಕೂಲ್ ಫಾರೆಸ್ಟ್ ಯೋಜನೆ ಆರಂಭಿಸಬೇಕು. ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚೆಚ್ಚು ಆಯೋಜಿಸುವ ನಿಟ್ಟಿನಲ್ಲಿ ನೂತನವಾಗಿ ಉದ್ಘಾಟನೆಯಾಗಿರುವ ಓಯಸ್ಕ ಇಂಟರ್‌ನ್ಯಾಷನಲ್ ಮೈಸೂರು ಚಾಪ್ಟರ್ ಕಾರ್ಯೋನ್ಮುಖವಾಗಿ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಓಯಸ್ಕಾ ಇಂಟರ್‌ನ್ಯಾಷನಲ್ ಮೈಸೂರು ಚಾಪ್ಟರ್ ಉದ್ಘಾಟಿಸಿದ ಓಯಸ್ಕಾ ಇಂಟರ್‌ನ್ಯಾಷನಲ್ ನಿರ್ದೇಶಕ ಹಾಗೂ ನ್ಯಾಷನಲ್ ಸೌತ್ ಇಂಡಿಯಾ ಕಾರ್ಯದರ್ಶಿ ಎಂ.ಅರವಿಂದಬಾಬು ಮಾತನಾಡಿ, ಸುರಕ್ಷಿತವಾದ ಪರಿಸರವನ್ನು ಮುಂದಿನ ಪೀಳಿಗೆಗೆ ಕೊಡಬೇಕಾಗಿದೆ. ಈ ನಿಟ್ಟಿನಲ್ಲಿ ಮಕ್ಕಳಲ್ಲಿ ಪರಿಸರದ ಮೇಲಿನ ಒಲವು ಹೆಚ್ಚಿಸಬೇಕು. ಸಹಕಾರ ಮತ್ತು ಪ್ರೋತ್ಸಾಹ ನೀಡುವ ಮೂಲಕ ಮಕ್ಕಳ ಪರಸರ ಸಂರಕ್ಷಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಮಾಡುವ ಮೂಲಕ ಅವರನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಸರ ರಾಯಭಾರಿಗಳನ್ನಾಗಿ ರೂಪಿಸಬೇಕಿದೆ ಎಂದು ತಿಳಿಸಿದರು.


ಮೈಸೂರು ಚಾಪ್ಟರ್ ಅಧ್ಯಕ್ಷ ಎಂ.ಪಿ.ವರ್ಷ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಓಯಸ್ಕ ಇಂಟರ್‌ನ್ಯಾಷನಲ್ ರಾಜ್ಯ ಸಂಯೋಜಕ ಡಾ.ಸಿ.ಎನ್.ಎನ್. ರಾಜು, ಪಿ.ಕೆ.ನಳಿನಾಕ್ಷನ್, ವಿ.ಪಿ.ಶಶಿಧರನ್, ಎ.ವಿನಯ್‌ಕುಮಾರ್ ಮತ್ತಿತರರಿದ್ದರು.



ಮೈಸೂರು ನಗರ ಬಿಜೆಪಿ ಕಾರ್ಯಾಲಯ ಮುಂಭಾಗ ಯೋಗ ದಿನ ಆಚರಿಸಲಾಯಿತು. ಈ ವೇಳೆ ಮೈಸೂರು ನಗರ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಶಾಸಕ ನಿರಂಜನ್‌ಕುಮಾರ್, ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಅನಿಲ್ ಥಾಮಸ್, ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ. ರಘು, ಯೋಗ ಶಿಕ್ಷಕ ಮುತ್ತಣ್ಣ, ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಎಸ್‌.ಸಿ. ಮೋರ್ಚಾ ಅಧ್ಯಕ್ಷ ಶೈಲೇಂದ್ರ ಕುಮಾರ್, ಹೇಮಾ ನಂದೀಶ್, ಜೋಗಿ ಮಂಜು, ಮೈ.ಪು.ರಾಜೇಶ್, ಸತೀಶ್, ಬಿ.ವಿ.ಮಂಜುನಾಥ್, ರವೀಂದ್ರ, ನಾಗೇಂದ್ರ ಕುಮಾರ್, ಶಿವಕುಮಾರ್, ಸಚಿನ್, ಲೋಹಿತ್, ಕಾರ್ತಿಕ್ ಮರಿಯಪ್ಪ, ಸ್ವಾಮಿ, ಪ್ರತಾಪ್ ಇನ್ನಿತರರು ಉಪಸ್ಥಿತರಿದ್ದರು.

ಹಾಲ್ನೊರೆಯಂತೆ ಭೋರ್ಗರೆಯುತ್ತಿರುವ ಗಗನಚುಕ್ಕಿ ಜಲಪಾತ

• ಮುಂಗಾರಿನ ಅಬ್ಬರದಿಂದ ಜಲಪಾತಕ್ಕೆ ಜೀವಕಳೆ
• ಶೀಘ್ರ ಗಗನಚುಕ್ಕಿ ಜಲಪಾತೋತ್ಸವ



ಎಂ.ಕೆ.ಮೋಹನ್‌ರಾಜ್

ಮಳವಳ್ಳಿ, ಜೂ.22– ಕಾವೇರಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆ ಅಬ್ಬರದಿಂದ ತಾಲೂಕಿನ ಶಿವನಸಮುದ್ರದ (ಬ್ಲಫ್) ಗಗನಚುಕ್ಕಿ ಜಲಪಾತ ಹಾಲ್ನೊರೆಯಂತೆ ಭೋರ್ಗರೆಯುತ್ತಿದ್ದು, ಧುಮ್ಮುಕ್ಕುತ್ತಿರುವ ಜಲಸಿರಿಯ ಪ್ರಕೃತಿ ವೈಭವ ಕಣ್ತುಂಬಿಕೊಳ್ಳಲು ಪ್ರವಾಸಿಗರ ದಂಡೇ ಹರಿದು ಬರುತ್ತಿದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಹಲವು ದಿನಗಳಿಂದ ವ್ಯಾಪಕ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ಕೆಆರ್‌ಎಸ್ ಹಾಗೂ ಕಬಿನಿ ಅಣೆಕಟ್ಟೆಗಳು ಭರ್ತಿ ಸನಿಹಕ್ಕೆ ಬಂದಿದ್ದು, ಹೊರ ಅರಿವು ಹೆಚ್ಚಾಗಿರುವುದರಿಂದ ಕಾವೇರಿ ನದಿ ಮೈತುಂಬಿ ಹರಿಯುತ್ತಿದ್ದು, ಗಗನಚುಕ್ಕಿ ಜಲಪಾತ ನೋಡುಗರ ಕಣ್ಮನ ಸೆಳೆಯುತ್ತಿದೆ.

ಪ್ರತಿ ವರ್ಷ ಗಗನಚುಕ್ಕಿ ಜಲಪಾತಕ್ಕೆ ಕಾವೇರಿ ನೀರು ಹರಿದು ಬರಲಿದ್ದು, ಈ ವರ್ಷ ವಾಡಿಕೆಯ ಮುಂಚೆಯೇ ಜಲವೈಭವ ಆರಂಭವಾಗಿದೆ. ಈ ಬಾರಿ ಮುಂಗಾರು ವ್ಯಾಪಕವಾದ ಹಿನ್ನಲೆಯಲ್ಲಿ ಆಗಸ್ಟ್ ತಿಂಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದ್ದ ಗಗನಚುಕ್ಕಿ ಜಲಪಾತ ಜೂನ್ ಅಂತ್ಯದಿಂದಲೇ ಬೋರ್ಗರೆದು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ.

ಭರಚುಕ್ಕಿಯಲ್ಲೂ ನೀರಿನ ಭೋರ್ಗರೆತ: ಕಬಿನಿ ಜಲಾಶಯದಿಂದ ವ್ಯಾಪಕವಾಗಿ ನೀರು ಹರಿದು ಬರುತ್ತಿರುವ ಹಿನ್ನೆಲೆಯಲ್ಲಿ ಗಗನಚುಕ್ಕಿ ಮೈದುಂಬಿ ಹರಿಯುತ್ತಿದೆ. ಅತ್ತ ಕೂಗಳತೆ ದೂರದಲ್ಲಿರುವ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಭರಚುಕ್ಕಿಯೂ ಸಹ ಭೋರ್ಗರೆಯುತ್ತಿದ್ದು, ವಾರಾಂತ್ಯವಾದ ಶನಿವಾರ ಮತ್ತು ಭಾನುವಾರ ಎರಡು ಜಲಪಾತಗಳನ್ನು ವೀಕ್ಷಿಸಲು ಸಾವಿರಾರು ಪ್ರವಾಸಿಗರು ಆಗಮಿಸುತ್ತಿದ್ದಾರೆ.

ಜಲಪಾತಕ್ಕೆ ಸಂಪರ್ಕಿಸುವುದು ಹೇಗೆ?: ಗಗನಚುಕ್ಕಿ ಜಲಪಾತ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿಗೆ ಸೇರಿದರೆ, ಭರಚುಕ್ಕಿ ಜಲಪಾತ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿಗೆ ಒಳಪಡುತ್ತದೆ. ಎರಡು ತಾಲೂಕಿನ ಗಡಿಗಳಲ್ಲಿ ಈ ಎರಡೂ ಜಲಪಾತಗಳು ಬರಲಿದ್ದು, 2 ಕಿಲೋ ಮೀಟರ್ ವ್ಯಾಪ್ತಿಯ ಅಕ್ಕಪಕ್ಕದಲ್ಲಿ ಈ ನಯನಮನೋಹರ ಜಲಪಾತಗಳು ಪ್ರೇಕ್ಷಕರಿಗೆ ಸಿಗಲಿವೆ. ಮೈಸೂರಿನಿಂದ ಆಗಮಿಸುವ ಪ್ರವಾಸಿಗರು ಬನ್ನೂರು ರಸ್ತೆಯಿಂದ ಕಿರುಗಾವಲು ಮಾರ್ಗವಾಗಿ ಮಳವಳ್ಳಿ ಪಟ್ಟಣ ಪ್ರವೇಶಿಸಿ, ಕೊಳ್ಳೇಗಾಲ ರಸ್ತೆಯ ಮೂಲಕ ಈ ಎರಡು ಜಲಪಾತ ತಲುಪಬಹುದು. ಬೆಂಗಳೂರಿನಿಂದ ಆಗಮಿಸುವವರು ಕನಕಪುರ ಮಾರ್ಗವಾಗಿ, ಹಲಗೂರು, ಮಳವಳ್ಳಿ ಪಟ್ಟಣಕ್ಕೆ ಬಂದು ಕೊಳ್ಳೇಗಾಲ ರಸ್ತೆ ಮೂಲಕ ಜಲಪಾತಕ್ಕೆ ಹೋಗಬಹುದು. ಅಥವಾ ಬೆಂಗಳೂರು–ಮೈಸೂರು ರಸ್ತೆಯ ಮೂಲಕ ಮದ್ದೂರು, ಕೆ.ಎಂ.ದೊಡ್ಡಿ, ಮಳವಳ್ಳಿ ಮಾರ್ಗವಾಗಿಯೂ ಜಲಪಾತಕ್ಕೆ ತಲುಪಬಹುದು.

ಕೆಆರ್‌ಎಸ್ ಭರ್ತಿಗೆ ಕ್ಷಣಗಣನೆ: ಕೊಡಗಿನಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿಖ್ಯಾತ ಕೆಆರ್‌ಎಸ್ ಅಣೆಕಟ್ಟೆ ಭರ್ತಿಗೆ ಕ್ಷಣಗಣನೆ ಆರಂಭವಾಗಿದೆ. 124.80 ಅಡಿ ವಿಸ್ತೀರ್ಣದ ಅಣೆಕಟ್ಟೆಯಲ್ಲಿ ಈಗಾಗಲೇ 119.40 ಅಡಿ ಭರ್ತಿಯಾಗಿದ್ದು, ಸಂಪೂರ್ಣ ಭರ್ತಿಗೆ ಇನ್ನು ಕೇವಲ 5 ಅಡಿ ಮಾತ್ರ ಬಾಕಿ ಇದೆ.

ತಲಕಾವೇರಿಯಿಂದ ಮೆಟ್ಟೂರಿನವರೆಗೆ: ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಹುಟ್ಟುವ ಜೀವನದಿ ಕಾವೇರಿ ಕೊಡಗಿನಲ್ಲಿ ವ್ಯಾಪಕ ಮಳೆಯಾದಾಗ ಕೆಆರ್‌ಎಸ್ ಅಣೆಕಟ್ಟೆಗೆ ಸೇರುತ್ತದೆ. ಅಣೆಕಟ್ಟೆ ಸಂಪೂರ್ಣ ಭರ್ತಿಯಾದ ಬಳಿಕ ನೀರನ್ನು ನದಿಗೆ ಹರಿಯಬಿಡಲಾಗುತ್ತದೆ. ಕೆಆರ್‌ಎಸ್‌ನಿಂದ ನದಿಯ ಮೂಲಕ ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆ, ಬಲಮುರಿ, ಸಂಗಮ, ಮಹದೇವಪುರ ಮಾರ್ಗವಾಗಿ ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯ ಹಲವು ಭಾಗಗಳಲ್ಲಿ ಹರಿದು ಸತ್ತೇಗಾಲದ ಮೂಲಕ ಮಳವಳ್ಳಿಯ ಗಗನಚುಕ್ಕಿ ಜಲಪಾತದಲ್ಲಿ ಧುಮುಕಿ ಮುತ್ತತ್ತಿಯನ್ನು ಸುತ್ತಿಕೊಂಡು ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಮೇಕೆದಾಟು ತಲುಪಿ, ನಂತರ ಹೊಗೆನಕಲ್ ಮಾರ್ಗವಾಗಿ ತಮಿಳುನಾಡಿನ ಮೆಟ್ಟೂರು ಜಲಾಶಯ ತಲುಪಲಿದೆ. ಹೀಗೆ ಸುಮಾರು 416 ಕಿಲೋ ಮೀಟರ್ ಸಂಚರಿಸುವ ಕಾವೇರಿ ಮೆಟ್ಟೂರಿನ ಬಳಿಕ ಕೇರಳ ಮತ್ತು ಪುದುಚೇರಿ ರಾಜ್ಯಗಳನ್ನು ಸಹ ಸಂಪರ್ಕಿಸಲಿದೆ.

ಪ್ರತಿ ವರ್ಷ ಮೆಟ್ಟೂರು ಜಲಾಶಯಕ್ಕೆ ಕಾವೇರಿ ತಲುಪಿದಾಗ ತಮಿಳುನಾಡು ರೈತರು ಪೂಜೆ ಸಲ್ಲಿಸುವ ಮೂಲಕ ಕಾವೇರಿ ನೀರನ್ನು ಬರಮಾಡಿಕೊಳ್ಳುತ್ತಾರೆ. ಅದಾಗಿಯೂ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳು ಬಳಸಿಕೊಂಡು ಉಳಿದ ನೀರು ಅರಬ್ಬಿ ಸಮುದ್ರದ ಪಾಲಾಗಲಿದೆ.

ಜಲಾಶಯ ವೀಕ್ಷಣೆಗೆ ಮೆಟ್ಟಿಲುಗಳ ನಿರ್ಮಾಣ: ಗಗನಚುಕ್ಕಿ ಜಲಪಾತವನ್ನು ಹತ್ತಿರದಿಂದ ವೀಕ್ಷಿಸಲು ಜಲಾಶಯದ ಬಳಿ ಮೆಟ್ಟಿಲುಗಳನ್ನು ನಿರ್ಮಾಣ ಮಾಡುತ್ತಿದ್ದು, ಶೀಘ್ರ ಕಾಮಗಾರಿ ಮುಗಿದು ಮೆಟ್ಟಿಲುಗಳ ಮೇಲೆ ನಿಂತು ಬಹಳ ಹತ್ತಿರದಿಂದ ಜಲಾಶಯ ವೀಕ್ಷಿಸಬಹುದಾಗಿದೆ.


ಕಡೆ ಭಾಗಕ್ಕೆ ನೀರು ಸಿಗುವ ವಿಶ್ವಾಸ: ಅಣೆಕಟ್ಟೆ ಇನ್ನು ಕೆಲವೇ ದಿನಗಳಲ್ಲಿ ಭರ್ತಿಯಾಗುವುದಿಂದ ಮಳವಳ್ಳಿ ತಾಲೂಕಿನ ಕಡೆ ಭಾಗಕ್ಕೆ ನೀರು ಸಿಗಲಿದೆ ಎಂಬ ವಿಶ್ವಾಸದಲ್ಲಿ ಈ ಭಾಗದ ರೈತರಿದ್ದು, ಈ ಹಿಂದೆಯಾದ ಸಮಸ್ಯೆಯಾಗದಂತೆ ಕಡೆ ಭಾಗಕ್ಕೆ ನೀರು ಸಿಗಲಿ ಎಂದು ಹಪಹಪಿಸುತ್ತಿದ್ದಾರೆ.

ಶೀಘ್ರವೇ ಜಲಪಾತೋತ್ಸವ: ಗಗನಚುಕ್ಕಿ ಜಲಪಾತ ಭೋರ್ಗರೆಯುತ್ತಿರುವುದರಿಂದ ಶೀಘ್ರವೇ ಜಲಪಾತೋತ್ಸವ ನಡೆಸುವ ಸಾಧ್ಯತೆ ಇದೆ. ಇದಕ್ಕಾಗಿ ಮಂಡ್ಯ ಜಿಲ್ಲಾಡಳಿತ ಎಲ್ಲಾ ರೀತಿಯ ಸಿದ್ಧತೆಗೆ ಶೀಘ್ರದಲ್ಲೇ ಮುಂದಾಗಲಿದೆ.

ಮುತ್ತತ್ತಿ ಸಂಗಮ, ಬಲಮುರಿಯಲ್ಲೂ ಜಲವೈಭವ: ಗಗನಚುಕ್ಕಿ ಮಾತ್ರವಲ್ಲದೇ ಕಾವೇರಿ ನದಿ ಪ್ರವೇಶಿಸುವ ಶ್ರೀರಂಗಪಟ್ಟಣದ ಸಂಗಮ, ಬಲಮುರಿಯಲ್ಲೂ ನೀರು ಬೋರ್ಗರೆಯುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಜೊತೆಗೆ ಪಾಂಡವಪುರದ ಕೆರೆತೊಣ್ಣೂರಿನಲ್ಲೂ ಜಲವೈಭೋಗ ಕಣ್ಮನ ಸೆಳೆ ಯುತ್ತಿದೆ. ಇದಲ್ಲದೇ ಮಳವಳ್ಳಿಯ ಹಲಗೂರು ಬಳಿ ಇರುವ ಪ್ರಸಿದ್ಧ ಯಾತ್ರಾಸ್ಥಳ ಮುತ್ತತ್ತಿಯಲ್ಲೂ ಕಾವೇರಿಯ ವೈಭವ ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ.



ಕೆಆರ್‌ಎಸ್ ಅಣೆಕಟ್ಟೆ ಶೀಘ್ರ ತುಂಬುವ ನಿರೀಕ್ಷೆ ಇದ್ದು, ಗಗನಚುಕ್ಕಿ ಜಲಪಾತ ಧುಮ್ಮಿಕ್ಕಿ ಹರಿಯುತ್ತಿದೆ. ಸದ್ಯದಲ್ಲೇ ಜಲಪಾತದ ಬಳಿ ಅದ್ದೂರಿಯಾಗಿ ಜಲಪಾತೋತ್ಸವ ನಡೆಸಿ, ಮತ್ತಷ್ಟು ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಸರ್ಕಾರ ದೊಂದಿಗೆ ಮಾತುಕತೆ ಮಾಡುತ್ತೇನೆ. ಪ್ರವಾಸಿ ತಾಣಗಳ ಅಭಿವೃದ್ಧಿಗೆ ಇನ್ನಷ್ಟು ವೇಗ ಕೊಡಲಿದ್ದೇನೆ.
–ಪಿ.ಎಂ.ನರೇಂದ್ರಸ್ವಾಮಿ, ಶಾಸಕ.



ಗಗನಚುಕ್ಕಿ ಜಲಪಾತ ಮೈದುಂಬಿ ಹರಿಯುತ್ತಿರುವುದು ಸಂತಸ. ಕೆಆರ್‌ಎಸ್ ಅಣೆಕಟ್ಟೆ ಭರ್ತಿ ಸನಿಹದಲ್ಲಿದೆ. ಕಳೆದ 2 ವರ್ಷಗಳಿಂದ ಸಮರ್ಪಕವಾಗಿ ಮಳವಳ್ಳಿ ತಾಲೂಕಿನ ಕಡೆ ಭಾಗಕ್ಕೆ ನೀರು ತಲುಪುತ್ತಿಲ್ಲ. ಈ ವರ್ಷವಾದರೂ ಕಡೆ ಭಾಗದ ರೈತರಿಗೆ ನೀರು ಸಿಕ್ಕಿ ಉತ್ತಮವಾಗಿ ಬೆಳೆ ಬೆಳೆಯುವಂತಾಗಲಿ.
–ಡಾ.ಕೆ.ಅನ್ನದಾನಿ, ಮಾಜಿ ಶಾಸಕ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	119.40 ಅಡಿ
ಒಳಹರಿವು	13359 ಕ್ಯೂಸೆಕ್
ಹೊರಹರಿವು	1664 ಕ್ಯೂಸೆಕ್

ಕನಗನಮರಡಿ ಡೇರಿಗೆ ಸುರೇಶ್ ಅಧ್ಯಕ್ಷ



ಕನಗನಮರಡಿ ಡೈರಿ ಅಧ್ಯಕ್ಷ ಸುರೇಶ್ ಅವರನ್ನು ಅಭಿನಂದಿಸಲಾಯಿತು.

ಪಾಂಡವಪುರ, ಜೂ.22– ತಾಲೂಕಿನ ಕನಗನಮರಡಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷನಾಗಿ ಸುರೇಶ್ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಕುಮಾರ್ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸುರೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಘೋಷಿಸಿದರು.

ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಸುರೇಶ್ ಬೆಂಬಲಿಗರು ಡೇರಿ ಆವರಣದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಅಲ್ಲದೇ ಎಲ್ಲಾ ನಿರ್ದೇಶಕರು, ಮುಖಂಡರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಈ ವೇಳೆ ಉಪಾಧ್ಯಕ್ಷೆ ಅಂಬುಜ, ನಿರ್ದೇಶಕರಾದ ಕೋಸೇಗೌಡ, ಸ್ವಾಮಿ, ಹೊನ್ನೇಗೌಡ, ಕೆಜೆಕುಮಾರ್, ಸಾವಿತ್ರಮ್ಮ, ರಮೇಶ್, ಕೆ.ಎನ್.ಕುಮಾರ್, ಕೆಎಸ್.ಕೇಶವ, ನಂಜಯ್ಯ, ಕೆ.ಜೆ.ಸೋಮಣ್ಣ, ಮುಖಂಡರಾದ ಕೆ.ಪುಟ್ಟೇಗೌಡ, ಗ್ರಾಪಂ ಸದಸ್ಯ ಮಂಜುನಾಥ್, ಸೊಸೈಟಿ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್, ನಿರ್ದೇಶಕ ಬೊಮ್ಮೇಗೌಡ, ಯಜಮಾನರಾದ ಕುಮಾರ್, ರಾಮಣ್ಣ, ನಿಂಗೇಗೌಡ, ವಕೀಲ ಬಸವೇಗೌಡ, ಚಂದ್ರಶೇಖರ್, ಸುರೇಂದ್ರ ಕುಮಾರ್, ಮಿನಿಕುಮಾರ್, ವರುಣ್ ಕುಮಾರ್, ರಮೇಶ್ ಸೇರಿದಂತೆ ಹಲವರಿದ್ದರು.

ಶಾಸಕ ಹೆಚ್.ಟಿ.ಮಂಜು ಹುಟ್ಟುಹಬ್ಬ: ಹಣ್ಣು ಹಂಪಲು ವಿತರಣೆ



ಸಾರ್ವಜನಿಕ ಆಸ್ಪತ್ರೆ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಕೆ.ಆರ್.ಪೇಟೆ, ಜೂ.22– ಶಾಸಕ ಹೆಚ್.ಟಿ.ಮಂಜು ಅವರ 51ನೇ ಹುಟ್ಟುಹಬ್ಬದ ಅಂಗವಾಗಿ ತಾಲೂಕು ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳ ನೇತೃತ್ವದಲ್ಲಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಒಳ ರೋಗಿಗಳಿಗೆ ಹಣ್ಣು ಹಂಪಲು, ಪಟ್ಟಣದ ಪ್ರವಾಸಿ ಮಂದಿರದಲ್ಲಿ ರೈತರಿಗೆ ತೆಂಗು ಮತ್ತು ಹಣ್ಣಿನ ಗಿಡಗಳನ್ನು ವಿತರಿಸಲಾಯಿತು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ವಿ.ಎನ್.ಮಹದೇವೇಗೌಡ, ರಾಜ್ಯ ಯುವ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ, ವಕೀಲ ನಾಗೇಶ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಮಾಜಿ ನಿರ್ದೇಶಕ ತೋಟಪ್ಪಶೆಟ್ಟಿ, ತಾಲೂಕು ಟಿಎಪಿಸಿಎಂಎಸ್ ನಿರ್ದೇಶಕ ಹೆಚ್.ಟಿ.ಲೋಕೇಶ್, ಬಲದೇವ್, ತಾಪಂ ಮಾಜಿ ಸದಸ್ಯ ಮೋಹನ್, ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ವಕೀಲ ವಿ.ಎಸ್.ಧನಂಜ ಯಕುಮಾರ್, ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಜಯ್ ರಾಮೇಗೌಡ, ಹರಳಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಹರೀಶ್, ತಾಲೂಕು ಜೆಡಿಎಸ್ ಸಂಘಟನಾ ಕಾರ್ಯದರ್ಶಿ ನಾಗೇಶ್, ಜೆಡಿಎಸ್ ಹೋಬಳಿ ಘಟಕದ ಅಧ್ಯಕ್ಷರಾದ ಬಸವಲಿಂಗಪ್ಪ, ರವಿ, ವಸಂತ್ ಕುಮಾರ್, ನಂಜಪ್ಪ ಮನ್‌ಮುಲ್ ಮಹೇಶ್, ಪುರಸಭಾ ಸದಸ್ಯ ಗಿರೀಶ್, ಕಾಯಿ ಮಂಜೇಗೌಡ, ಮುಖಂಡರಾದ ಮಹಾದೇವೇಗೌಡ, ರಮೇಶ್, ರಘು, ಗ್ರಾಪಂ ಸದಸ್ಯರಾದ ಬಿ.ಆರ್.ರಮೇಶ್, ಯೋಗೇಂದ್ರ, ಈಶ್ವರ್, ಮಧು, ಎಸ್.ಐ.ಗಿರೀಶ್, ಅಲೋಕ್, ಮರೀಗೌಡ, ಕೃಷ್ಣೇಗೌಡ, ಗಣೇಶ್, ಈರೇಗೌಡ, ಪ್ರಶಾಂತ್, ಕುಮಾರ್, ಜಿಲ್ಲಾ ಜೆಡಿಎಸ್ ಕಾರ್ಯದರ್ಶಿ ಲೋಕೇಶ್, ಶಾಸಕರ ಆಪ್ತ ಸಹಾಯಕ ಪ್ರತಾಪ್, ಕುಮಾರಸ್ವಾಮಿ ಸೇರಿದಂತೆ ನೂರಾರು ಜೆಡಿಎಸ್ ಕಾರ್ಯಕರ್ತರಿದ್ದರು.

ಒಂದನೇ ಪುಟದಿಂದ

ಶ್ರೀ ಗಂಗ ಸಾಮ್ರಾಟ ಶ್ರೀ ಪುರುಷ ಪ್ರಶಸ್ತಿ ಪ್ರದಾನ

ಅನ್ನೋ ಹೆಸರು ತೆಗೆಸು ಎಂದು ಹೇಳಿದರು. ಗೌಡ ಎನ್ನುವ ಹೆಸರು ಇದ್ದರೆ ಡಿಗ್ರಿ ಮಾತ್ರ ಸಿಗುತ್ತೆ. ರ‍್ಯಾಂಕ್ ಸಿಗಲ್ಲ ಅಂದರು. ಬಾಲಗಂಗಾಧರನಾಥ ಸ್ವಾಮೀಜಿ ನಮ್ಮ ಸಮಾಜ ಗುರುತಿಸಲು ದುಡಿದರು. ಈಗ ನಮ್ಮ ಮುಂದೆ ಅವರು ಇಲ್ಲ. ನಿರ್ಮಲಾನಂದ ಶ್ರೀಗಳನ್ನ ಸ್ಥಾನದಲ್ಲಿ ಕೂರಿಸಿದ್ದಾರೆ ಎಂದರು.

ಚಿಕ್ಕಬಳ್ಳಾಪುರ, ಕೋಲಾರದ ಜನತೆಗೆ ನೀರು ಸಿಗದೆ ಬವಣೆ ಪಡುತ್ತಿರುವುದನ್ನ ನೋಡಿದರೆ ನನ್ನ ಆತ್ಮಕ್ಕೆ ಶಾಂತಿ ಸಿಗಲ್ಲ. ನರ್ಮದಾ, ಬ್ರಹ್ಮ ಪುತ್ರ ಸೇರಿ ಹಲವು ನದಿ ಸೇರಿಸಿ ಒಂದು ಡ್ಯಾಮ್ ಮಾಡಿದೆ. ಗೋದಾವರಿ ನೀರು ತಮಿಳುನಾಡಿಗೆ ಕೊಡುತ್ತೇವೆ ಅಂತಾರೆ. ಪ್ರಧಾನಿಗಳಿಗೆ ಪತ್ರ ಬರೆದಿದ್ದೇನೆ. ತಮಿಳುನಾಡು ಸರ್ ಪ್ಲಸ್ ಸ್ಟೇಟ್. ಇದನ್ನು ಟ್ರಿಬ್ಯೂನಲ್ ಹೇಳಿದೆ. ನಾನು ಯಾರ ಬಗ್ಗೆಯೂ ಟೀಕೆ ಮಾಡಲ್ಲ. ಈಗ ಆಡಳಿತ ಮಾಡೋರ ಬಗ್ಗೆಯೂ ಟೀಕೆ ಮಾಡಲ್ಲ. ಕರ್ನಾಟಕದಲ್ಲಿ ಕುಡಿಯೋಕೆ ನೀರಿಲ್ಲ ಎಂದು ಹೇಳುತ್ತಾರೆ. ಆಂಧ್ರ ಸಿಎಂ ಬಂದು ಕೂತ್ಕೋ ಅಂತ ನನ್ನನ್ನ ಕೂರಿಸಿದ್ರು. ನಾನು ಯಾವುದೂ ಮರೆಯಲ್ಲ. ತುಂಗಭದ್ರಾದಿಂದ ಮಡಕಶಿರದ ಮೇಲೆ ತೆಗೆದುಕೊಂಡು ಹೋಗುತ್ತಾರಂತೆ. ಹೈಕೋರ್ಟ್‌ನಲ್ಲಿ ರಿಟ್ ಹಾಕಿಸ್ತಾರೆ. ಮಧುಗಿರಿ, ಶಿರಾಗೆ ನೀರು ಕೊಡಿ ಅಂತ ಈಗ ಸುಪ್ರೀಂಕೋರ್ಟ್‌ಗೆ ಹೋಗಿದ್ದಾರೆ. ಅಲ್ಲಿ ರದ್ದು ಮಾಡುತ್ತಾರೆ. ಗೋದಾವರಿ ನೀರಿನ ಬಗ್ಗೆ ಶನಿವಾರ ಡಿಟೇಲ್ ಆಗಿ ಪತ್ರ ಬರೆದಿದ್ದೇನೆ. ನಾನು ಈಗಿನ ಪ್ರಧಾನಿಗಳನ್ನ ಹೊಗೊಳೋಕೆ ಬರಲ್ಲ. ವಾಜಪೇಯಿ ನನಗೆ ಸಹಕಾರ ಕೊಡ್ತೀನಿ ಅಂದರು ನಾನು ಬೇಡ ಅಂದೆ. ನನ್ನ ಜನ ನಾನು ಹೋದ ಮೇಲೆ ಈ ಬವಣೆಯಿಂದ ಪಟ್ಟ ನೋವನ್ನ ಈ ಆತ್ಮ ನೋಡುತ್ತದೆ. ನಾನು ನರಕ, ಸ್ವರ್ಗದಲ್ಲಿ ಇರುತ್ತೇನೋ ಗೊತ್ತಿಲ್ಲ. ಆದರೆ ನನ್ನ ಆತ್ಮಕ್ಕೆ ಶಾಂತಿ ಸಿಗಲ್ಲ. ನರ್ಮದಾ ನೀರು ಬಗ್ಗೆ ಪ್ರಧಾನಿಗಳಿಗೆ ಪತ್ರ ಬರೆದಿದ್ದೇನೆ ಎಂದು ತಿಳಿಸಿದರು.

ಚಿಕ್ಕಬಳ್ಳಾಪುರ, ಕೋಲಾರದ ಜನ ನೀರಿಗಾಗಿ ಏನು ಮಾಡಬೇಕು? ಇರೋ ಅವಧಿಯಲ್ಲಿ ರಾಜ್ಯಸಭೆಯಲ್ಲಿ ನನ್ನ ಹೋರಾಟ ಮಾಡುತ್ತೇನೆ. ನನಗೆ ಕಾಲಿಗೆ ನೋವು ಇರಬಹುದು. ಬುದ್ದಿಗೆ ನೋವಿಲ್ಲ. ಸಂಸತ್‌ನಲ್ಲಿ ಹೋರಾಟ ಮಾಡೋ ಶಕ್ತಿ ನನಗೆ ಇದೆ. ಪ್ರಧಾನಿಗಳಿಗೆ ಮನವರಿಕೆ ಮಾಡುತ್ತೇನೆ. 17 ಜನರನ್ನು ಕೊಟ್ಟಿದ್ದೇವೆ, ಕೈ ಬಿಡಬೇಡಿ ಅಂತ ಹೇಳುತ್ತೇನೆ. ನೀರಿನ ಸಮಸ್ಯೆ ಪರಿಹಾರ ಮಾಡೋಕೆ ಮೋದಿಯಿಂದ ಮಾತ್ರ ಸಾಧ್ಯ. ನನ್ನ ಜನಕ್ಕೆ ಆಗೋ ಅನ್ಯಾಯವನ್ನ ಈ ದೇಶದ ಪ್ರಧಾನಿ, ವಿಶ್ವವೇ ಗುರುತಿಸೋ ಮೋದಿ ಅವರಿಂದ ಈ ಸಮಸ್ಯೆ ಪರಿಹಾರ ಸಾಧ್ಯ. ಪಕ್ಷರಹಿತವಾಗಿ ನಾವು ಒಗ್ಗಟ್ಟಾಗಿ ನಮಗೆ ಆಗಿರೋ ಅನ್ಯಾಯ ಸರಿ ಮಾಡೋಣ ಎಂದು ಹೇಳಿದರು.

ಡಿಂಬಾಸನದಲ್ಲಿ ಕೊಡಗಿನ ಬಾಲಕಿ ವಿಶ್ವ ದಾಖಲೆ

ಶಾಲೆಯ ನಿವೃತ್ತ ಪ್ರಾಂಶುಪಾಲ ಬಿ.ಆರ್.ಜೋಯಪ್ಪ ಮಾತನಾಡಿ, ತಂದೆ–ತಾಯಿಯ ಪ್ರೋತ್ಸಾಹ, ಬೆಂಬಲದಿಂದ ಸಿಂಚನ ಚಿಕ್ಕವಯಸ್ಸಿನಲ್ಲೇ ಲೋಕಖ್ಯಾತಿಗೆ ಪಾತ್ರಳಾಗಿದ್ದಾಳೆ ಎಂದು ಪ್ರಶಂಸಿಸುವುದರ ಜೊತೆಗೆ ಈಕೆಯೇ ಯೋಗ ಸಾಧನೆ ಕುರಿತ ಕವನವೊಂದನ್ನು ವಾಚಿಸಿದರು. ಈ ವೇಳೆ ಆಕಾಶವಾಣಿ ನಿವೃತ್ತ ಉದ್ಘೋಷಕ ಸುಬ್ರಾಯ ಸಂಪಾಜೆ ಅವರು ಜೋಯಪ್ಪನವರ ಕವನಕ್ಕೆ ಸ್ಥಳದಲ್ಲೇ ರಾಗ ಸಂಯೋಜಿಸಿ, ಹಾಡುವ ಮೂಲಕ ಗಮನ ಸೆಳೆದರು.

ಸಿಂಚನಳ ತಾಯಿ ರೇಣುಕಾ ಮಾತನಾಡಿ, ಯೋಗ ಕೇವಲ ಪ್ರದರ್ಶನಕ್ಕಷ್ಟೆ ಸೀಮಿತವಾಗಬಾರದು. ಆರೋಗ್ಯಕ್ಕಾಗಿ ನಿತ್ಯ ಯೋಗಾಭ್ಯಾಸ ಮಾಡಬೇಕೆಂದು ಎಲ್ಲರಿಗೂ ತಿಳಿದ ಸಂಗತಿ. ಇದನ್ನು ಎಲ್ಲರೂ ಪಾಲಿಸ ಬೇಕಿದೆ. ನಮ್ಮ ಮಗಳ ಯೋಗ ದಾಖಲೆಗೆ ಸಹಕರಿಸಿದ ಕೊಡಗು ಪತ್ರಕರ್ತರ ಸಂಘ ಮತ್ತು ರೋಟರಿ ಮಿಸ್ಟಿ ಹಿಲ್ಸ್ ಸಂಘಟನೆಗಳಿಗೆ ಅನಂತ ಧನ್ಯವಾದ ಎಂದರು.

ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ.ಮಾತನಾಡಿ, ಛಲ ಮತ್ತು ಪ್ರತಿಭೆಯಿದ್ದಲ್ಲಿ ಮಾತ್ರ ಇಂಥಹ ಅಪರೂಪದ ಸಾಧನೆ ಸಾಧ್ಯ. ಮಗಳಿಗಿರುವ ಯೋಗದ ಮೇಲಿನ ಆಸಕ್ತಿಯನ್ನು ಗುರುತಿಸಿ, ಪ್ರೋತ್ಸಾಹ ನೀಡುವ ಮೂಲಕ ಆಕೆಯನ್ನು ವಿಶ್ವದಾಖಲೆ ಹಂತಕ್ಕೆ ತಲುಪಿಸಿರುವ ಸಿಂಚನಳ ತಾಯಿ ರೇಣುಕಾ ಹಾಗೂ ತಂದೆ ಕೀರ್ತಿಕುಮಾರ್ ಅಭಿನಂದನಾರ್ಹರು ಎಂದು ಶ್ಲಾಘಿಸಿದರು.

ಈ ವೇಳೆ ಪತ್ರಕರ್ತರ ಸಂಘದ ನಿರ್ದೇಶಕ ಕುಡೆಕಲ್ ಸಂತೋಷ್, ಯೋಗಪಟು ಸಿಂಚನಳ ಪರಿಚಯ ಮಾಡಿದರು. ಯೋಗಪಟು ರಾಜೇಶ್ ಗುಪ್ತ, ವಾಂಡರಸ್ ಕ್ಲಬ್‌ನ ಬಾಬು ಸೋಮಯ್ಯ, ರೋಟರಿ ಮಿಸ್ಟಿ ಹಿಲ್ಸ್ ನಿರ್ದೇಶಕ ಎಂ.ಧನಂಜಯ್, ಜಿ.ಆರ್.ರವಿಶಂಕರ್, ವಿಜಯಲಕ್ಷ್ಮಿ ಚೇತನ್, ಪತ್ರಕರ್ತರ ಸಂಘದ ಕ್ಷೇಮನಿಧಿಯ ಅಧ್ಯಕ್ಷ ಜಿ.ವಿ.ರವಿಕುಮಾರ್, ಕಾರ್ಯ ದರ್ಶಿ ಅರುಣ್ ಕೂರ್ಗ್, ಸಂಘದ ಖಜಾಂಚಿ ಟಿ.ಕೆ.ಸಂತೋಷ್, ನಿರ್ದೇ ಶಕರಾದ ಹನೀಫ್, ಲಕ್ಷ್ಮೀಶ್, ಟ್ರಸ್ಟ್ ಪ್ರಧಾನ ಕಾಯದರ್ಶಿ ಎಸ್.ಜಿ. ಉಮೇಶ್, ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿಘ್ನೇಷ್ ಭೂತನಕಾಡು ಮತ್ತಿತರರು ಉಪಸ್ಥಿತರಿದ್ದರು.

2028ಕ್ಕೆ ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರ ಖಚಿತ

ಕಾವೇರಿ ಆರತಿಗೆ ವಿರೋಧ: ಕೆಆರ್‌ಎಸ್ ಬಳಿ ಕಾವೇರಿ ಆರತಿ ಮಾಡಲು ಸಮಸ್ಯೆ ಇಲ್ಲ. ಕೇವಲ ಒಂದು ಲಕ್ಷಕ್ಕೆ ಆಗುವ ಆರತಿಗೆ ಬರೋಬ್ಬರಿ 92 ಕೋಟಿ ರೂ. ಖರ್ಚು ಮಾಡುತ್ತಿರುವುದು ಏಕೆ? 30 ಕೋಟಿಯಲ್ಲಿ ಆರತಿ ಮಾಡಿ ಉಳಿದ ಹಣವನ್ನು ಜೇಬಿಗಿಳಿಸುವ ಹುನ್ನಾರವಾಗಿದೆ. ಕೆಆರ್‌ಎಸ್ ಬಳಿ ಮಾಡಲು ಹೊರಟಿರುವ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ನಮ್ಮ ವಿರೋಧವಿದೆ. ಸೂಕ್ಷ್ಮ ಪ್ರದೇಶವಾದ ಅಣೆಕಟ್ಟೆ ಬಳಿ ಯೋಜನೆ ಕೈಬಿಟ್ಟು ಮಳವಳ್ಳಿ ತಾಲೂಕಿನ ಗಗನಚುಕ್ಕಿ, ಭರಚುಕ್ಕಿ ಬಳಿ ನಿರ್ಮಿಸಲಿ ಎಂದು ಹೇಳಿದರು.

ಸರ್ಕಾರದಿಂದ ಮುಸ್ಲಿಂಮರ ಓಲೈಕೆ: ಬಿಜೆಪಿ ಸರ್ಕಾರವಿದ್ದಾಗ ಮಿಮ್ಸ್‌ಗೆ ಸೇರಿದ ಜಾಗದಲ್ಲಿದ್ದ ತಮಿಳು ನಿವಾಸಿಗಳಿಗಾಗಿ ನಗರದ ಕೆರೆ ಅಂಗಳದಲ್ಲಿ ಜಿ+ ಕ್ಯಾಟಗರಿ ಮನೆಗಳ ನಿರ್ಮಾಣ ಮಾಡಲಾಗಿತ್ತು. ಆದರೆ ಇದೀಗ ಆ ಮನೆಗಳಿಗೆ ಮುಸ್ಲಿಮರು ಏಕಾಏಕಿ ಹೋಗಿ ಸೇರಿಕೊಂಡಿದ್ದಾರೆ. ಇದರ ಹಿಂದೆ ಯಾರಿದ್ದಾರೆ ಎಂದು ಪ್ರಶ್ನಿಸಿದರು.

ಬಿ.ಆರ್.ಪಾಟೀಲ್ ವಿರುದ್ಧ ಕ್ರಮ ಕೈಗೊಳ್ಳಲಿ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಾಕತ್ತು ಮತ್ತು ಧಮ್ ಇದ್ದರೆ ಬಿ.ಆರ್.ಪಾಟೀಲ್ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಲಿ. ಇಲ್ಲವೇ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ರಾಜೀನಾಮೆ ನೀಡಿ ತೊಲಗಲಿ. ಸದ್ಯದಲ್ಲೇ ನಡೆಯುವ ಬಿಹಾರ ಚುನಾವಣೆಗೆ ಕರ್ನಾಟಕದಲ್ಲಿ ಭ್ರಷ್ಟಾಚಾರದ ಮೂಲಕ ಸಂಪಾದಿಸಿದ ಹಣವನ್ನು ಬಿಹಾರಕ್ಕೆ ಕಳುಹಿಸಲು ಹುನ್ನಾರ ನಡೆಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಬಿಹಾರ ಚುನಾವಣೆಗಾಗಿ ಸಚಿವರಿಗೆ ಟಾರ್ಗೆಟ್ ಕೊಟ್ಟಿದ್ದು, ಹೆಚ್ಚು ಹಣ ಕೊಡುವ ಸಚಿವರನ್ನು ಸಂಪುಟದಲ್ಲಿ ಮುಂದುವರೆಸುವ ಟಾಸ್ಕ್ ನೀಡಿದ್ದಾರೆ ಎಂದು ಆರೋಪಿಸಿದರು. ಈ ಸರ್ಕಾರ ಹಾಲಿನ ಸಬ್ಸಿಡಿ ಹಣ ವನ್ನು ಬಿಡುವುದಿಲ್ಲ. ವಸತಿ ಯೋಜನೆಯ ಕಮೀಷನ್ ಹಗರಣವನ್ನು ಬಿಜೆಪಿ ಇಲ್ಲಿಗೆ ಬಿಡದೆ ಜೆಡಿಎಸ್ ನೊಂದಿಗೆ ಸೇರಿ ಬೃಹತ್ ಹೋರಾಟ ನಡೆಸಲಾಗುವುದು. ವಿಧಾನಸಭೆಯಲ್ಲಿ ನಿಲುವಳಿ ಮಂಡಿಸಿ ಚರ್ಚೆ ನಡೆಸುವ ಮೂಲಕ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಅಶೋಕ್ ಜಯರಾಂ, ಸಿ.ಟಿ.ಮಂಜುನಾಥ್, ನಾಗಾನಂದ್, ಆನಂದ ಇದ್ದರು.

ಇರಾನ್‌ನ 3 ಅಣು ಸ್ಥಾವರಗಳು ಧ್ವಂಸ

ನೇರ ಪ್ರವೇಶವಾಗಿದೆ. ಇದು ಮೂರನೇ ಮಹಾಯುದ್ಧಕ್ಕೆ ನಾಂದಿ ಹಾಡುವ ಆತಂಕವನ್ನೂ ಸೃಷ್ಟಿಸಿದೆ.

ಕೊಂಡಾಡಿದ ಇಸ್ರೇಲ್: ಇರಾನ್ ಜೊತೆಗಿನ ಯುದ್ಧಕ್ಕೆ ಅಮೆರಿಕಾ ಅಧಿಕೃತ ಎಂಟ್ರಿ ಕೊಟ್ಟಿರುವುದಕ್ಕೆ ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಕೊಂಡಾಡಿದ್ದಾರೆ. ಟ್ರಂಪ್ ಅವರ ದಿಟ್ಟ ನಿರ್ಧಾರಕ್ಕೆ ಅಭಿನಂದನೆಗಳು ಎಂದು ವೀಡಿಯೋ ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಬಿಡುಗಡೆ ಮಾಡಿದ್ದಾರೆ.

ಅಮೆರಿಕದ ಅದ್ಭುತ ಮತ್ತು ನೀತಿ ವಂತ ಶಕ್ತಿಯಿಂದ ಇರಾನ್‌ನ ಪರ ಮಾಣು ಸೌಲಭ್ಯಗಳನ್ನು ಗುರಿಯಾಗಿ ಸುವ ನಿಮ್ಮ ದಿಟ್ಟ ನಿರ್ಧಾರ ಇತಿಹಾಸ ವನ್ನು ಬದಲಾಯಿಸುತ್ತದೆ. 'ಆಪರೇಷನ್ ರೈಸಿಂಗ್ ಲಯನ್'ನಲ್ಲಿ, ಇಸ್ರೇಲ್ ನಿಜವಾಗಿಯೂ ಅದ್ಭುತ ಕೆಲಸಗಳನ್ನು ಮಾಡಿದೆ. ಆದರೆ ಇಂದು ರಾತ್ರಿ ಇರಾನ್‌ನ ಪರ ಮಾಣು ಸೌಲಭ್ಯಗಳ ವಿರುದ್ಧದ ಕ್ರಮದಲ್ಲಿ, ಅಮೆರಿಕ ನಿಜವಾಗಿಯೂ ದಿಟ್ಟ ನಿರ್ಧಾರ ಕೈಗೊಂಡಿದೆ. ಭೂಮಿಯ ಮೇಲಿನ ಯಾವುದೇ ದೇಶವು ಮಾಡಲು ಸಾಧ್ಯವಾಗದ ಕೆಲಸವನ್ನು ಅಮೆರಿಕಾ ಮಾಡಿದೆ ಎಂದು ಬಣ್ಣಿಸಿದ್ದಾರೆ. ಈ ಮಧ್ಯೆ ಅಮೆರಿಕಾದ ಈ ದಾಳಿಯನ್ನು ರಷ್ಯಾ, ಚೀನಾ, ಉತ್ತರ ಕೊರಿಯಾ, ಪಾಕಿಸ್ತಾನ ಖಂಡಿಸಿವೆ.

ಯೆಮನ್ ಕೆಂಡಾಮಂಡಲ: ಈ ನಡುವೆ ಇರಾನ್ ಮಿತ್ರ ರಾಷ್ಟ್ರ ಯೆಮೆನ್ ದೊಡ್ಡ ಸಂದೇಶವೊಂದನ್ನು ರವಾನೆ ಮಾಡಿದ್ದು, ತಾನು ಇರಾನ್ ಪರ ಅಮೆರಿಕ ವಿರುದ್ಧ ಯುದ್ಧ ಮಾಡುವು ದಾಗಿ ಘೋಷಣೆ ಮಾಡಿದೆ. ಭಾನುವಾರ ಇರಾನ್‌ನಲ್ಲಿನ ಪರಮಾಣು ನೆಲೆಗಳ ಮೇಲೆ ಅಮೆರಿಕ ವಾಯುದಾಳಿ ನಡೆಸಿದ ನಂತರ, ಯೆಮೆನ್‌ನ ಹೌತಿ ಬಂಡುಕೋರರು, ಅಮೆರಿಕ ವಿರುದ್ಧ ಯುದ್ಧ ಘೋಷಣೆ ಮಾಡಿದ್ದು, ಕೆಂಪು ಸಮುದ್ರದಲ್ಲಿ ಅಮೆರಿಕದ ಹಡಗುಗಳ ಮೇಲೆ ದಾಳಿ ನಡೆಸುವ ತಮ್ಮ ಹಿಂದಿನ ಬದ್ಧತೆಯಂತೆ ಕಾರ್ಯನಿರ್ವಹಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಇದು ಉದ್ವಿಗ್ನತೆಯ ಪ್ರಮುಖ ಘಟನೆಯಾಗಿದ್ದು, ಕೆಂಪು ಸಮುದ್ರದಲ್ಲಿ ಅಮೆರಿಕದ ಹಡಗುಗಳು ಮತ್ತು ಯುದ್ಧನೌಕೆಗಳನ್ನು ಗುರಿಯಾಗಿಸಿ ದಾಳಿ ಮಾಡಲು ನಾವು ಸಿದ್ಧರಿದ್ದೇವೆ. ಸಶಸ್ತ್ರ ಪಡೆಗಳ ಘೋಷಣೆಗೆ ಯೆಮೆನ್ ಗಣರಾಜ್ಯದ ಬದ್ಧತೆಯನ್ನು ನಾವು ದೃಢಪಡಿಸುತ್ತೇವೆ. ಟ್ರಂಪ್ ಆಡಳಿತದ ಅಜಾಗರೂಕ ಆಕ್ರಮಣವು, ಸಹೋದರ ಇರಾನ್ ಜನರ ವಿರುದ್ಧದ ಯುದ್ಧದ ಸ್ಪಷ್ಟ ಘೋಷಣೆಯಾಗಿದೆ ಯೆಮನ್ ರಾಷ್ಟ್ರ ಹೇಳಿದೆ.

ಅಮೆರಿಕ ಮತ್ತು ಹೌತಿಗಳು ಮೇ ತಿಂಗಳಲ್ಲಿ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದರು. ಅದರಂತೆ ಯಾವುದೇ ಪಕ್ಷವು ಇನ್ನೊಂದನ್ನು ಗುರಿಯಾಗಿಸಿಕೊಂಡು ದಾಳಿ ಮಾಡುವಂತಿರಲ್ಲಿಲ್ಲ. ಆದರೆ ಇದೀಗ ಇರಾನ್ ಮೇಲೆ ಅಮೆರಿಕ ದಾಳಿ ಮಾಡಿರುವುದರಿಂದ ಹೌತಿ ಬಂಡುಕೋರರು ಅಮೆರಿಕ ಮೇಲೆ ದಾಳಿ ಮಾಡುವುದಾಗಿ ಘೋಷಣೆ ಮಾಡಿದ್ದಾರೆ.

ನೆರೆ ರಾಷ್ಟ್ರಗಳಿಗೆ ಭೀತಿ: ಇರಾನ್‌ನ ಮೂರು ಪರಮಾಣು ತಾಣಗಳ ಮೇಲೆ ಅಮೆರಿಕವು ಅತ್ಯಂತ ಯಶಸ್ವಿ ದಾಳಿಯನ್ನು ಪೂರ್ಣಗೊಳಿಸಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ ನಂತರ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆಗಳು ಸಾರ್ವಕಾಲಿಕ ಉತ್ತುಂಗಕ್ಕೇರಿವೆ.

ಮಧ್ಯಪ್ರಾಚ್ಯದ ಅತಿದೊಡ್ಡ ಅಮೆರಿಕ ಮಿಲಿಟರಿ ನೆಲೆಯ ಆತಿಥೇಯ ಕತಾರ್, ಇರಾನ್‌ನಲ್ಲಿನ ಪರಮಾಣು ಸೌಲಭ್ಯಗಳ ಮೇಲೆ ಅಮೆರಿಕಾ ವೈಮಾನಿಕ ದಾಳಿಯ ನಂತರ ಗಂಭೀರ ಪರಿಣಾಮಗಳ ಭಯವಿದೆ ಎಂದು ಹೇಳಿದೆ.

ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವಿನ ಪರಮಾಣು ಮಾತುಕತೆಗಳಿಗೆ ಮಧ್ಯಸ್ಥಿಕೆ ವಹಿಸಿದ್ದ ಓಮನ್ ಕೂಡ ಈ ದಾಳಿಗಳನ್ನು ಖಂಡಿಸಿದೆ.

ಬಂದ್ ನಿರ್ಧಾರ

ಇಸ್ರೇಲ್ ಪಡೆಗಳು ಇರಾನ್‌ನ ಸೇನಾ ನೆಲೆಗಳು, ಪರಮಾಣು ಘಟಕಗಳ ಮೇಲೆ ಜೂ.13ರಂದು ದಾಳಿ ನಡೆಸಿದ್ದರಿಂದ, ಸಂಘರ್ಷ ಆರಂಭವಾಗಿತ್ತು. ಆಗಲೇ, ಹೋರ್ಮುಜ್ ಮುಚ್ಚುವ ನಿರ್ಧಾರ ವನ್ನು ಇರಾನ್ ಕೈಗೊಳ್ಳಬಹುದು ಎನ್ನಲಾಗಿತ್ತು. ಇದೀಗ (ಶನಿವಾರ ತಡರಾತ್ರಿ), ಅಮೆರಿಕ ಪಡೆಗಳು 3 ಪ್ರಮುಖ ಪರಮಾಣು ಮೂಲ ಸೌಕರ್ಯಗಳ ಮೇಲೆ ದಾಳಿ ನಡೆಸಿರುವುದು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುವಂತೆ ಮಾಡಿದೆ. ಹೀಗಾಗಿ, ಇರಾನ್ ಈ ನಿರ್ಧಾರ ಕೈಗೊಂಡಿದೆ ಎನ್ನಲಾಗಿದೆ. ಹೋರ್ಮುಜ್ ಜಲಸಂಧಿ ಮುಚ್ಚುವಿಕೆ ನಿರ್ಧಾರದಿಂದ ತೈಲ ಸರಬರಾಜಿನ ಮೇಲೆ ಪರಿಣಾಮ ಉಂಟಾಗಲಿದ್ದು, ಇಂಧನ ದರ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ.

ಪ್ರತಿಜ್ಞೆ ಮಾಡಿದ ಇರಾನ್

ದಾಳಿಯನ್ನು ಖಂಡಿಸಿರುವ ರಷ್ಯಾ, ಅಂತರರಾಷ್ಟ್ರೀಯ ಕಾನೂನು, ವಿಶ್ವಸಂಸ್ಥೆ ಮತ್ತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ನಿರ್ಣಯಗಳ ಉಲ್ಲಂಘನೆ ಎಂದು ಕಿಡಿಕಾರಿದೆ. ಅಮೆರಿಕದ ದಾಳಿಯು ದೇಶದ ರಕ್ಷಣೆಗಾಗಿ ಯಾವುದೇ ಹಂತಕ್ಕೆ ಹೋಗಲು ಇರಾನ್‌ಗೆ ಕಾನೂನುಬದ್ಧ ಹಕ್ಕನ್ನು ನೀಡಿದೆ ಎಂದು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ಹೇಳಿದೆ. ಎಲ್ಲ ದೇಶಗಳು ಯುದ್ಧದಿಂದ ಹಿಂದೆ ಸರಿದು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳುವಂತೆ 27 ರಾಷ್ಟ್ರಗಳ ಯುರೋಪಿಯನ್ ಒಕ್ಕೂಟವು ಹೇಳಿದೆ.

ಇರಾನ್‌ನಿಂದ ಭಾರತಕ್ಕೆ ಬಂದ 311 ಮಂದಿ

ನವದೆಹಲಿ: ಇರಾನ್‌ನಿಂದ 311 ಭಾರತೀಯರನ್ನು ಹೊತ್ತ ಮೊತ್ತೊಂದು ವಿಮಾನ ದೆಹಲಿಗೆ ಬಂದಿಳಿದಿದೆ. ಇರಾನ್‌ನ ಮಶಾದ್ ನಗರದಿಂದ ವಿಶೇಷ ವಿಮಾನದ ಮೂಲಕ ಭಾರತೀಯರನ್ನು ಸ್ಥಳಾಂತರಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಈ ಮೂಲಕ ಇರಾನ್‌ನಿಂದ ಭಾರತಕ್ಕೆ ಸ್ಥಳಾಂತರಗೊಂಡ ಭಾರತೀಯರ ಸಂಖ್ಯೆ 1,428 ಆಗಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಸಂಘರ್ಷ ತೀವ್ರಗೊಂಡ ಹಿನ್ನೆಲೆ ನಾಗರಿಕರನ್ನು ಸುರಕ್ಷಿತವಾಗಿ ಕರೆತರಲು ಕಳೆದ ಬುಧವಾರ ಭಾರತ 'ಆಪರೇಷನ್ ಸಿಂಧು' ಕಾರ್ಯಾಚರಣೆ ಆರಂಭಿಸಿತ್ತು. ಮಶಾದ್, ಅರ್ಮೇನಿಯಾ, ತುರ್ಕಮೇನಿಸ್ತಾನ್ ನಗರ ಗಳಿಂದ ಭಾರತೀಯರನ್ನ ಸ್ವದೇಶಕ್ಕೆ ಕರೆತರಲಾಗಿದೆ. ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಲ್ಲಿ ಅಮೆರಿಕ ಮಧ್ಯಪ್ರವೇಶಿಸಿದೆ. ಇರಾನ್‌ನ ಪರಮಾಣು ನೆಲೆಗಳ ಮೇಲೆ ಅಮೆರಿಕ ದಾಳಿ ನಡೆಸಿದ ಕಾರಣ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲ ವತಿಯಿಂದ ಯೋಗ ದಿನವನ್ನು ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಆಯೋಜಿಸಲಾಗಿತ್ತು.

ಮೈಸೂರು, ಜೂ. 22–ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದ ವತಿಯಿಂದ ಅಂತಾರಾಷ್ಟ್ರೀಯ ಯೋಗ ದಿನವನ್ನು ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ವಿವಿಧ ಆಸನಗಳು ಹಾಗೂ ಪ್ರಾಣಾಯಾಮವನ್ನು ಯೋಗ ಗುರು ಪುರುಷೋತ್ತಮ್ ಅಗ್ನಿ ಪ್ರಾತ್ಯಕ್ಷಿಕೆಯೊಂದಿಗೆ ಅಭ್ಯಾಸ ಮಾಡಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್ ಮಾತನಾಡಿ, ಯೋಗ ಮತ್ತು ಪ್ರಾಣಾಯಾಮ ಜಗತ್ತಿಗೆ ಭಾರತದ ಕೊಡುಗೆ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅದರ ಪಾರಂಪರಿಕ ಜ್ಞಾನ ಹಾಗೂ ಆರೋಗ್ಯದತ್ತ ಜಾಗೃತಿ ಮೂಡಿಸುವ ಒಂದು ಪ್ರಯತ್ನವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಸದಸ್ಯೆ ಲಕ್ಷ್ಮಿ ಕಿರಣ್, ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಆರ್.ಸೋಮಶೇಖರ್, ಈರೇಗೌಡ, ಉಪಾಧ್ಯಕ್ಷರಾದ ಹೆಚ್.ಜಿ.ರಾಜಮಣಿ, ಶಿವು ಪಟೇಲ್, ಬಿ.ಸಿ. ಶಶಿಕಾಂತ್, ಹೆಚ್.ಎಸ್.ಹಿರಿಯಣ್ಣ, ಎಸ್.ಟಿ.ಮೋರ್ಚಾ ನಗರ ಉಪಾಧ್ಯಕ್ಷ ಎಸ್.ತ್ಯಾಗರಾಜ್ ನಾಯಕ್, ಮಹಿಳಾ ಮೋರ್ಚಾ ನಗರ ಕಾರ್ಯದರ್ಶಿ ವಿಜಯ ಮಂಜುನಾಥ್, ಮಂಡಲದ ಕಾರ್ಯದರ್ಶಿಗಳಾದ ಶ್ರೀನಿವಾಸ ಪ್ರಸಾದ್, ಸೋಮಣ್ಣ, ರಾಮಕೃಷ್ಣ ಕ್ರೀಡಾ–ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವಲಿಂಗಪ್ಪ ಮುಖಂಡರಾದ ರಂಗೇಶ್, ಮಧು ಸೋಮಶೇಖರ್, ಚಂದ್ರಶೇಖರ ಸ್ವಾಮಿ, ರಾಘವೇಂದ್ರ ಬಸವಣ್ಣ, ಪುಟ್ಟಮ್ಮಣ್ಣಿ, ಮಂಜುಳಾ, ರಮಾಭಾಯಿ, ಗೀತಾ ಮಹೇಶ್, ಹೇಮಲತಾ, ಸುಮಿತ್ರಾ, ರೇವಣ್ಣಸಿದ್ದಪ್ಪ, ಭೈರೇಗೌಡ, ಮಹೇಶ್, ತಿಮ್ಮೇಗೌಡ, ನಿಶಾಂತ್ ಪಟೇಲ್, ಪದ್ಮ, ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

ಇಂದು ಸಿಎನ್‌ಸಿಯಿಂದ ಮಾನವ ಸರಪಳಿ

ಮಡಿಕೇರಿ: ರಾಷ್ಟ್ರೀಯ ಜನಗಣತಿಯ ಸಂದರ್ಭ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್‌ನ್ನು ಸೇರಿಸಬೇಕು, ಸಂಸತ್ ಹಾಗೂ ವಿಧಾನ ಸಭೆಯಲ್ಲಿ ಕೊಡವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಜೂ.23ರಂದು ಪೊನ್ನಂಪೇಟೆಯಲ್ಲಿ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ಎನ್.ಯು.ನಾಚಪ್ಪ

ಪೊನ್ನಂಪೇಟೆಯಲ್ಲಿ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಮಾನವ ಸರಪಳಿ ನಿರ್ಮಿಸಿ ವಿವಿಧ ಬೇಡಿಕೆಗಳ ಕುರಿತು ಹಕ್ಕೊತ್ತಾಯ ಮಂಡಿಸಲಾಗುವುದು. ಜನಗಣತಿಯ ಸಂದರ್ಭ ಪ್ರತ್ಯೇಕ ಕಾಲಮ್ ಮತ್ತು ಕೋಡ್ ಸೇರಿಸುವುದರಿಂದ ಕೊಡವ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ವಿವರಿಸಲಾಗುವುದು ಎಂದು ಹೇಳಿದ್ದಾರೆ.

ಚಾಲಕನ ನಿಯಂತ್ರಣ ವಿಫಲ: ತೋಟಕ್ಕೆ ನುಗ್ಗಿದ ಕಂಟೇನರ್



ಮಡಿಕೇರಿ: ಚಾಲಕನ ನಿಯಂತ್ರಣ ಕಳೆದುಕೊಂಡು ಕಂಟೇನರ್ ಲಾರಿ ತೋಟಕ್ಕೆ ನುಗ್ಗಿದ ಘಟನೆ ಮಡಿಕೇರಿ ಹೊರ ವಲಯದ ಕೆದಕಲ್ ಬಳಿ ನಡೆದಿದೆ.

ಮಡಿಕೇರಿ ಮಾರ್ಗವಾಗಿ ಕುಶಾಲನಗರ ಕಡೆಗೆ ತೆರಳುತ್ತಿದ್ದ 12 ಚಕ್ರದ ಕಂಟೇನರ್ ಲಾರಿ ಕೆದಕಲ್ ಇಳಿಜಾರು ರಸ್ತೆಯ ತಿರುವಿನಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಯಿದ್ದ ಕಾಫಿ ತೋಟಕ್ಕೆ ನುಗ್ಗಿದೆ. ಬಳಿಕ ಕ್ರೇನ್ ಮೂಲಕ ಲಾರಿಯನ್ನು ರಸ್ತೆಗೆ ಎಳೆದು ತರಲಾಯಿತು. ಈ ಘಟನೆಯಿಂದ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ವಾಹನಗಳು ಕೆಲಕಾಲ ಸಾಲುಗಟ್ಟಿ ನಿಲ್ಲುವಂತಾಯಿತು.

ಅತ್ತೂರುಕೊಲ್ಲಿ ಹಾಡಿಗೆ ಶಾಸಕರ ಭೇಟಿ

ಮಡಿಕೇರಿ, ಜೂ.22– ಅತ್ತೂರುಕೊಲ್ಲಿ ಹಾಡಿಯಲ್ಲಿ ಹೆಚ್ಚುವರಿಯಾಗಿ ನಿರ್ಮಿಸಿಕೊಂಡಿದ್ದ ಆರು ಗುಡಿಸಲುಗಳನ್ನು ಪೊಲೀಸ್ ಇಲಾಖೆಯ ಸಹಕಾರದಲ್ಲಿ ಅರಣ್ಯ ಇಲಾಖೆ ತೆರವುಗೊಳಿಸಿರುವ ಸ್ಥಳಕ್ಕೆ ಶಾಸಕ ಎ.ಎಸ್.ಪೊನ್ನಣ್ಣ ಭೇಟಿ ನೀಡಿ ಆದಿವಾಸಿಗಳ ಜೊತೆ ಚರ್ಚಿಸಿದರು. ನಾಗರ ಹೊಳೆ ಅತ್ತೂರು ಕೊಲ್ಲಿ ಹಾಡಿ ನಿವಾಸಿಗಳ ಹಕ್ಕುಗಳನ್ನು ಕಾನೂನಾತ್ಮಕವಾಗಿ ಪ್ರತಿಪಾದನೆ ಮಾಡಲು ಪೂರ್ಣವಾದ ಸಹಕಾರವನ್ನು ನೀಡುವುದಾಗಿ ಭರವಸೆ ನೀಡಿದರು. ಯಾರಿಗೆ ಹಕ್ಕುಗಳು ಸಿಗಬೇಕೆಂದು ನ್ಯಾಯಾಲಯದಿಂದ ತೀರ್ಪು ಬರುವವರೆಗೂ ಯಥಾಸ್ಥಿತಿಯನ್ನು ಪಾಲಿಸಬೇಕು ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಹಾಡಿ ನಿವಾಸಿಗಳಿಗೆ ಹಕ್ಕುಗಳನ್ನು ನೀಡಲು ಸರಕಾರದ ಜೊತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.



ಅತ್ತೂರುಕೊಲ್ಲಿ ಹಾಡಿಗೆ ಶಾಸಕ ಎ.ಎಸ್.ಪೊನ್ನಣ್ಣ ಭೇಟಿ ನೀಡಿ ಆದಿವಾಸಿಗಳ ಜೊತೆ ಚರ್ಚಿಸಿದರು.

ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಿದೇರಿರ ನವೀನ್, ಪೊನ್ನಂ ಪೇಟೆ ತಹಶೀಲ್ದಾರ್ ಮೋಹನ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಾಳಿಮಾಡ ಪ್ರಶಾಂತ್, ವಲಯ ಕಾಂಗ್ರೆಸ್ ಅಧ್ಯಕ್ಷರಾದ ಚಿಮ್ಮಣ್ಣಮಾಡ ರವಿ, ಕಟ್ಟಿ ಕಾರ್ಯಪ್ಪ, ಪಲ್ವಿನ್ ಪೂಣಚ್ಚ, ಕೆ.ಬಾಡಗ ಗ್ರಾಪಂ ಅಧ್ಯಕ್ಷ ರಿತೀಶ್, ನಾಗರಹೊಳೆ ವನ್ಯಜೀವಿ ಉಪ ವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅನನ್ಯ ಕುಮಾರ್, ನಾಗರಹೊಳೆ ವನ್ಯಜೀವಿ ವಲಯ ಅರಣ್ಯಾಧಿಕಾರಿ ಹೆಚ್.ಎಂ.ಮಂಜುನಾಥ್, ಜಿಲ್ಲಾ ಐಟಿಡಿಪಿ ಅಧಿಕಾರಿ ಹೊನ್ನಪ್ಪ, ವಿರಾಜಪೇಟೆ ತಾಲೂಕು ಐಟಿಡಿಪಿ ಅಧಿಕಾರಿ ತೇಜ್‌ರಾಜ್, ನಾಗರಹೊಳೆ ಆದಿವಾಸಿ ಜಮ್ಮಾಪಾಳೆ ಹಕ್ಕುಸ್ಥಾಪನ ಸಮಿತಿಯ ಕಾರ್ಯದರ್ಶಿ ಶಿವು, ಜಮ್ಮಾಪಾಳೆ ಸ್ಥಾಪನಾ ಸಮಿತಿಯ ಅಧ್ಯಕ್ಷ ಜೆ.ಕೆ. ತಿಮ್ಮ, ನಾಣಚ್ಚಿ ಗದ್ದೆ ಹಾಡಿ ಅಧ್ಯಕ್ಷ ರಾಮಕೃಷ್ಣ ಹಾಗೂ ವಿವಿಧ ಹಾಡಿಗಳ ಮುಖಂಡರು ಉಪಸ್ಥಿತರಿದ್ದರು.

ಸಮಾಜ ನಿರ್ಮಾಣದಲ್ಲಿ ಪತ್ರಕರ್ತರ ಪಾತ್ರ ಮುಖ್ಯ



ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ದತ್ತಿನಿಧಿ ಪ್ರಶಸ್ತಿ ಹಾಗೂ ಪ್ರತಿಭಾ ಪುರಸ್ಕಾರ ನಡೆಸಲಾಯಿತು.

ವಿರಾಜಪೇಟೆ: ಪತ್ರಕರ್ತರು ಸಮಾಜದ ಎರಡು ಕಣ್ಣುಗಳಿದ್ದಂತೆ, ಸಮಾಜ ನಿರ್ಮಾಣದಲ್ಲಿ ಪತ್ರಕರ್ತರ ಪಾತ್ರ ಬಹುಮುಖ್ಯ ಎಂದು ಸಮಾಜ ಸೇವಕಿ ಕಾಣತಂಡ ಬೀನ ಜಗದೀಶ್ ಹೇಳಿದರು.

ನಗರದ ಎ–ಜೆಡ್ ಸಭಾಂಗಣದಲ್ಲಿ ನಡೆದ ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ದತ್ತಿನಿಧಿ ಪ್ರಶಸ್ತಿ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ತಮ್ಮ ವೈಯಕ್ತಿಕ ಬದುಕನ್ನು ಬದಿಗೊತ್ತಿ ಸಮಾಜ ನಿರ್ಮಾಣದಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರ ಕೆಲಸ ಶ್ಲಾಘನೀಯ. ಮುಂದಿನ ದಿನಗಳಲ್ಲಿ ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ದತ್ತಿನಿಧಿ ಪ್ರಶಸ್ತಿ ಸ್ಥಾಪಿಸುವುದಾಗಿ ಕಾಣತಂಡ ಬೀನ ಜಗದೀಶ್ ಇದೇ ಸಂದರ್ಭ ಭರವಸೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಮಾತನಾಡಿ, ಪತ್ರಕರ್ತರು ವಿಶೇಷ ವರದಿಯತ್ತ ಹೆಚ್ಚು ಆಸಕ್ತಿ ವಹಿಸಿಕೊಂಡು, ಧ್ವನಿಯಿಲ್ಲದವರಿಗೆ ತಮ್ಮ ವರದಿಯ ಮೂಲಕ ಧ್ವನಿಯಾಗಬೇಕಿದೆ ಎಂದರು. ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷೆ ಸವಿತಾ ರೈ ಮಾತನಾಡಿ, ಪತ್ರಕರ್ತರು ಇತ್ತೀಚಿನ ದಿನಗಳಲ್ಲಿ ಕೂತಲ್ಲೇ ಸುದ್ದಿ ಮಾಡುತ್ತಿದ್ದಾರೆ. ವರದಿಯ ಸತ್ಯಾಂಶವನ್ನು ತಿಳಿಯಲು ಆಸಕ್ತಿ ತೋರುತ್ತಿಲ್ಲ. ಪತ್ರಿಕೋದ್ಯಮದಿಂದ ತನಿಖಾ ವರದಿ ದೂರವಾಗುತ್ತಿದೆ ಎಂದು ವಿಷಾದಿಸಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಸಿ.ಎ ನಾಸಿರ್ ಅಮು ದತ್ತಿ ಪ್ರಶಸ್ತಿ ಸ್ಥಾಪನೆ ಮಾಡುವುದಾಗಿ ಹೇಳಿದರು. ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಜಿತ್ ಕುಮಾರ್ ಗುಹ್ಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ರಘು ಮಾಚಯ್ಯ ಇದ್ದರು.

ಮಹಾಸಭೆ: ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಮಹಾಸಭೆ ಅಧ್ಯಕ್ಷತೆಯನ್ನು ಅಧ್ಯಕ್ಷ ರೆಜಿತ್ ಕುಮಾರ್ ಗುಹ್ಯ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎ.ಎಸ್. ಮುಸ್ತಫಾ ವಾರ್ಷಿಕ ವರದಿ ಹಾಗೂ ಕಳೆದ ಮಹಾಸಭೆ ವರದಿ ಮಂಡಿಸಿದರು. ಖಜಾಂಜಿ ಡಾ.ಹೇಮಂತ್ ಲೆಕ್ಕಪತ್ರವನ್ನು ಮಂಡಿಸಿದರು.

ಮಹಾಸಭೆಯ ವೀಕ್ಷಕರಾಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಎಚ್.ಕೆ ಜಗದೀಶ್ ಆಗಮಿಸಿದ್ದರು. ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಅನು ಕಾರ್ಯಪ್ಪ, ಖಜಾಂಜಿ ಆನಂದ್ ಕೊಡಗು ವೇದಿಕೆಯಲ್ಲಿದ್ದರು. ಸಭೆಯಲ್ಲಿ ಕಾರ್ಯದರ್ಶಿ ರಜಿತಾ ಕಾರ್ಯಪ್ಪ, ನಿರ್ದೇಶಕರಾದ ರವಿಕುಮಾರ್ ಎಂ.ಕೆ, ಡಿ.ಮಂಜುನಾಥ್, ಕಿಶೋರ್ ಕುಮಾರ್ ಶೆಟ್ಟಿ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

ಕನ್ನಂಬಾಡಮ್ಮ ದೇವಸ್ಥಾನಕ್ಕೆ 20 ಲಕ್ಷ ಅನುದಾನಕ್ಕೆ ಯತ್ನ

ಕುಶಾಲನಗರ: ಬೈಚನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಲುದ್ದೇಶಿಸಿರುವ ಕನ್ನಂಬಾಡಮ್ಮ ದೇವಸ್ಥಾನಕ್ಕೆ 20 ಲಕ್ಷ ಅನುದಾನ ಒದಗಿಸಿ ಕೊಡಲು ಪ್ರಯತ್ನಿಸುತ್ತೇನೆ ಎಂದು ಶಾಸಕ ಡಾ.ಮಂತರ್‌ಗೌಡ ಭರವಸೆ ನೀಡಿದ್ದಾರೆ.

ಇಲ್ಲಿನ ಬೈಚನಹಳ್ಳಿ ಗ್ರಾಮದ ಗ್ರಾಮದೇವತೆ ಕನ್ನಂಬಾಡಮ್ಮ ದೇವಾಲಯದ ನೂತನ ಗರ್ಭಗುಡಿ ನಿರ್ಮಾಣಕ್ಕಾಗಿ ಶಾಸಕರು ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ದೇವಾಲಯಗಳು ಮನುಷ್ಯನಿಗೆ ಶಾಂತಿ ನೆಮ್ಮದಿ ನೀಡುವ ಸುಂದರ ತಾಣಗಳು. ಇದರ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಜಾತಿ ಧರ್ಮ ಮೀರಿದ ಸಹಾಯ ಸಹಕಾರ ನೀಡಬೇಕು ಸರ್ಕಾರದಿಂದ ಸಿಗುವ ಅನುದಾನದ ಜೊತೆಗೆ ವೈಯಕ್ತಿಕವಾಗಿಯೂ ಸಹಾಯ ಮಾಡುವುದಾಗಿ ಹೇಳಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿ, ದಶಕಗಳ ಹಿಂದೆ ಬೈಚನಹಳ್ಳಿಯಲ್ಲಷ್ಟೇ ಜನವಸತಿ ಇತ್ತು. ಕ್ರಮೇಣ ಊರು ಆಧುನಿಕತೆಯತ್ತ ತೆರೆದುಕೊಂಡಿತು. ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ದೇವಾಲಯಕ್ಕೆ ಹೊಸ ರೂಪ ಕೊಡುವ ಕಾರ್ಯ ನಿರ್ವಿಘ್ನವಾಗಿ ಸಾಗಲಿ ಎಂದರು.

ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಬಿ.ಎಸ್.ಶಿವಕುಮಾರ್, ಉಪಾಧ್ಯಕ್ಷ ಡಿ. ಶ್ರೀಕಾಂತ್, ಪುರಸಭೆ ಸದಸ್ಯ ಬಿ.ಎಲ್. ಜಗದೀಶ್, ಕೋಶಾಧಿಕಾರಿ ಕೆ.ಪಿ.ಉಮೇಶ್, ನಿರ್ದೇಶಕ ಶ್ರೀಮಂತ, ಬಿ.ಆರ್.ಮಣಿಕಂಠ, ಗಣೇಶ, ಆರ್.ಮಂಜುನಾಥ್, ಎಸ್.ಮಂಜು, ಪ್ರಮುಖರಾದ ಕೆ.ಎನ್.ಅಶೋಕ್, ಪುರಸಭೆ ಅಧ್ಯಕ್ಷೆ ಜಯಲಕ್ಷ್ಮಿ, ಕೂಡ ಅಧ್ಯಕ್ಷ ಪ್ರಮೋದ್, ಮಾಜಿ ಅಧ್ಯಕ್ಷ ಮಂಜುನಾಥ ಗುಂಡೂರಾವ್, ನಗರ ಕಾಂಗ್ರೆಸ್ ಅಧ್ಯಕ್ಷ ಜೋಸೆಫ್ ವಿಕ್ಟರ್ ಸೋನ್ಸ್, ಬಿ.ಬಿ.ಭಾರತೀಶ್, ಎನ್.ಎನ್.ಶಂಭುಲಿಂಗಪ್ಪ ಪಾಲ್ಗೊಂಡಿದ್ದರು. ಇದಕ್ಕೂ ಮೊದಲು ದೇವಾಲಯದ ಗರ್ಭಗುಡಿ ನಿರ್ಮಾಣದ ಸ್ಥಳದಲ್ಲಿ ಪಟ್ಟಣದ ಕನ್ನಿಕಾ ಪರಮೇಶ್ವರಿ ದೇವಾಲಯದ ಪ್ರಧಾನ ಅರ್ಚಕ ಗಿರೀಶ್ ಭಟ್, ಉಮೇಶ್ ಭಟ್, ಕೃಷ್ಣಮೂರ್ತಿ ಭಟ್ ನೇತೃತ್ವದಲ್ಲಿ ಭೂವರಾಹ ಶಾಂತಿ ಹೋಮ ನಡೆಯಿತು.

ಕಾಡಾನೆಗಳ ಹಿಂಡು ದಾಳಿಗೆ ಅಪಾರ ಪ್ರಮಾಣದ ಬೆಳೆ ನಷ್ಟ

ಸುಂಟಿಕೊಪ್ಪ, ಜೂ.22– ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಮ್ಮೆಗುಂಡಿ ತೋಟದಲ್ಲಿ ಕಾಡಾನೆಗಳ ಹಿಂಡು ದಾಳಿ ನಡೆಸಿ ಅಪಾರ ಪ್ರಮಾಣದ ಬೆಳೆ ನಷ್ಟಪಡಿಸಿರುವ ಬಗ್ಗೆ ವರದಿಯಾಗಿದೆ.

ಈ ಭಾಗದಲ್ಲಿ ಕಾಡಾನೆಗಳು ತೋಟಗಳಿಗೆ ದಾಳಿ ನಡೆಸಿದ್ದು ಕಾಫಿ, ಕರಿಮೆಣಸು, ಬಾಳೆ ಗಿಡಗಳನ್ನು ಧ್ವಂಸಗೊಳಿಸಿವೆ ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿಯ ಎಮ್ಮೆಗುಂಡಿ ಗ್ರಾಮದ ಲೈನ್ ಮನೆ ಸಮೀಪ ಬೆಳೆದಿದ್ದ ಬಾಳೆ ಗಿಡಗಳನ್ನು ಧ್ವಂಸಗೊಳಿಸಿದ್ದು ಈ ಭಾಗದ ನಿವಾಸಿಗಳಲ್ಲಿ ಆತಂಕವನ್ನು ಸೃಷ್ಟಿಸಿದೆ.

ಕಾಡಾನೆ ದಾಳಿಯಿಂದ 4 ವರ್ಷದ ರೋಬೆಸ್ಟಾ ಮತ್ತು ಅರೇಬಿಕಾ ಕಾಫಿ ಗಿಡಗಳು ನಾಶವಾಗಿದೆ. ಈ ಭಾಗದಲ್ಲಿ ನಿರಂತರವಾಗಿ ಸುತ್ತಮುತ್ತಲಿನ ತೋಟಗಳಲ್ಲಿ ಹಗಲು ವೇಳೆಯಲ್ಲಿಯೇ ಆನೆಗಳು ಕಂಡು ಬರುತ್ತಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ. ಕೂಲಿ ಕಾರ್ಮಿಕರು ತೋಟದ ಕೆಲಸಕ್ಕೆ ಬರಲು ಹೆದರುವಂತಾಗಿದೆ ರಾತ್ರಿ ವೇಳೆ ಸುಂಟಿಕೊಪ್ಪದಿಂದ ಎಮ್ಮೆ ಗುಂಡಿ, ನಾಕೂರು ಶಿರಂಗಾಲ, ಮಳೂರು, ಕಾನ್ ಬೈಲ್, ಅಂದಗೋವೆ ಗ್ರಾಮಗಳಿಗೆ ಖಾಸಗಿ ವಾಹನಗಳು, ಬಾಡಿಗೆ ವಾಹನಗಳು ಸಂಚರಿಸುತ್ತಿದ್ದು ಪ್ರಯಾಣಿಕರಿಗೆ ಅಪಾಯ ಕಟ್ಟಿಟ್ಟ ಬುತ್ತಿ ಎನ್ನುವಂತಾಗಿದೆ. ಪ್ರತೀ ವರ್ಷ ಮಳೆಗಾಲದಲ್ಲಿ ಆಹಾರ ಅರಸುತ್ತಾ ಆನೆಗಳು ಈ ಭಾಗಕ್ಕೆ ಆಗಮಿಸುತ್ತಿದ್ದು ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಜೀವ ಭಯದಿಂದ ಸುಂಟಿಕೊಪ್ಪ ಪಟ್ಟಣಕ್ಕೆ ತೆರಳುವಂತಾಗಿದೆ. ಕೂಡಲೇ ಅರಣ್ಯ ಅಧಿಕಾರಿಗಳು ಆನೆಗಳನ್ನು ಹಿಮ್ಮೆಟ್ಟಿಸುವಂತೆ ಒತ್ತಾಯಿಸಿದ್ದಾರೆ.



ಇದೊಂದು ಭಂಡ ಸರ್ಕಾರ : ನಾಪಂಡ ರವಿ ಕಾಳಪ್ಪ



ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ ಬಿಜೆಪಿ ಮಾಧ್ಯಮ ವಕ್ತಾರ ಸಜಿಲ್ ಕೃಷ್ಣ, ವಕ್ತಾರ ಬಿ.ಕೆ.ಅರುಣ್ ಕುಮಾರ್ ಸುದ್ದಿ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಡಿಕೇರಿ, ಜೂ.22– ರಾಜ್ಯ ಕಾಂಗ್ರೆಸ್ ಸರಕಾರದ ಆಡಳಿತ ಅವಧಿಯಲ್ಲಿ ಭ್ರಷ್ಟಾಚಾರ ಪ್ರಕರಣಗಳು ನಡೆಯುತ್ತಲೆ ಇದ್ದು, ಇದೊಂದು ಭಂಡ ಸರ್ಕಾರ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮೂದಲಿಸಿದ್ದಾರೆ

ಭ್ರಷ್ಟಾಚಾರದ ಕೂಪಕ್ಕೆ ಬಿದ್ದು ದಿನಕ್ಕೊಂದು ಹಗರಣ ಬಯಲಿಗೆ ಬರುತ್ತಿದ್ದು, ನೈತಿಕತೆಯೇನಾದರೂ ಇದ್ದಲ್ಲಿ ಕೂಡಲೇ ರಾಜೀನಾಮೆ ನೀಡಿ ಚುನಾವಣೆ ಎದುರಿಸಲಿ ಎಂದು ಸುದ್ದಿಗೋಷ್ಠಿಯಲ್ಲಿ ಸವಾಲು ಹಾಕಿದರು.

ಜಾಗ ನೀಡಿ ಲಾಭಪಡೆದರು: ಬೆಂಗಳೂರು ಕೊಡವ ಸಮಾಜಕ್ಕೆ 7 ಎಕರೆ ಜಾಗವನ್ನು ಕೊಡಿಸಿದ್ದಾಗಿ ಕಾಂಗ್ರೆಸ್ ಲಾಭಪಡೆಯುವ ಪ್ರಯತ್ನವನ್ನು ಮಾಡಿದೆ. ಬೆಂಗಳೂರು ಕೊಡವ ಸಮಾಜಕ್ಕೆ ಈ ಹಿಂದಿನ ಮುಖ್ಯಮಂತ್ರಿ ಸದಾನಂದಗೌಡ ಅವರ ಅವಧಿಯಲ್ಲೆ ಜಾಗ ಗುರುತಿಸುವ ಮತ್ತು ಅವರಿಗೆ ಮಂಜೂರು ಮಾಡುವ ನಿಟ್ಟಿನಲ್ಲಿ ಅಂದಿನ ಶಾಸಕರಾದ ಕೆ.ಜಿ.ಬೋಪಯ್ಯ ಮತ್ತು ಅಪ್ಪಚ್ಚು ರಂಜನ್ ಸಾಕಷ್ಟು ಕೆಲಸ ಮಾಡಿದ್ದಾರೆ. ಆದರೆ, ಇವೆಲ್ಲವನ್ನು ಬದಿಗೆ ಸರಿಸಿರುವ ಕಾಂಗ್ರೆಸ್, ಇದನ್ನು ತಾನೇ ಮಾಡಿದ್ದೆಂದು ಲಾಭಪಡೆಯುವ ಪ್ರಯತ್ನ ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಧರ್ಮಾಧಾರಿತ ರಾಜಕೀಯ : ರಾಜ್ಯದ ಕಾಂಗ್ರೆಸ್ ಸರ್ಕಾರ ಒಂದು ಸಮುದಾಯವನ್ನು ಓಲೈಸುವ ನಿಟ್ಟಿನಲ್ಲಿ ಧರ್ಮ ಆಧಾರಿತ ರಾಜಕೀಯ ನಡೆಸುತ್ತಿದೆ. ಇಂದು ಮುಸ್ಲಿಂ ಸಮುದಾಯಕ್ಕೆ ವಸತಿ ಯೋಜನೆಗಳಲ್ಲಿ ಶೇ.15ರಷ್ಟು ಮೀಸಲಾತಿಯನ್ನು ಒದಗಿಸಲು ಸರ್ಕಾರ ಮುಂದಾಗಿದೆ ಇವೆಲ್ಲವು ಒಂದು ಸಮುದಾಯವನ್ನು ಮೆಚ್ಚಿಸುವ ನಿಟ್ಟಿನ ಪ್ರಯತ್ನಗಳು ಎಂದು ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ ಲೇವಡಿ ಮಾಡಿದರು.

ಇಂದು ತೀವ್ರತರ ಅತಿಸಾರ ತಡೆಗಟ್ಟುವಿಕೆ ಅಭಿಯಾನಕ್ಕೆ ಚಾಲನೆ

ಮಡಿಕೇರಿ, ಜೂ.22– ಜಿಲ್ಲೆಯಲ್ಲಿ ತೀವ್ರತರ ಅತಿಸಾರ ತಡೆಗಟ್ಟುವಿಕೆ ಅಭಿಯಾನವನ್ನು ಜೂ.23ರ ಬೆಳಗ್ಗೆ 11 ಗಂಟೆಗೆ ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಬೋಧಕ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ವಿಭಾಗದಲ್ಲಿ ನಡೆಯಲಿದೆ ಎಂದು ಜಿಲ್ಲಾ ಆರ್‌ಸಿಎಚ್ ಅಧಿಕಾರಿ ತಿಳಿಸಿದ್ದಾರೆ.

ಬ್ರಹ್ಮಾಕುಮಾರಿಯರಿಂದ ವಿಶ್ವ ಯೋಗ ದಿನಾಚರಣೆ



ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹಾಗೂ ಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿಯಿಂದ ಯೋಗ ದಿನಾಚರಣೆ ಆಚರಿಸಲಾಯಿತು.

ಚಾಮರಾಜನಗರ: ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹಾಗೂ ಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಪತಂಜಲಿ ಯೋಗ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಯೋಗ ಪ್ರಕಾಶ್ ಮಾತನಾಡಿ, ದೇಹ ಮತ್ತು ಮನಸ್ಸನ್ನು ಒಂದುಗೂಡಿಸುವಂತಹ ಪ್ರಕ್ರಿಯೆ ಯೋಗವಾಗಿದೆ ಯೋಗ ಎಂಬುದು ಅದ್ಭುತ ಶಕ್ತಿಯಾಗಿದೆ ಹಲವಾರು ಕಾಯಿಲೆಗಳನ್ನು ಗುಣಪಡಿಸಿದರ ಮೂಲಕ ಸದಾ ಕಾಲದ ಆರೋಗ್ಯವಂತರಾಗಿರಬಹುದು ಎಂದು ಸಲಹೆ ನೀಡಿದರು.

ವಿವೇಕಾನಂದ ಸದ್ಭಾವನ ಪ್ರಶಸ್ತಿ ಪುರಸ್ಕೃತ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಮಾತನಾಡಿ ರಾಜಯೋಗವು ಒಂದು ಮನೋವೈಜ್ಞಾನಿಕ ಪ್ರಕ್ರಿಯೆಯಾಗಿದ್ದು ಮಾನಸಿಕ ಆರೋಗ್ಯ, ಶಾರೀರಿಕ ಆರೋಗ್ಯ, ಸಾಮಾಜಿಕ ಆರೋಗ್ಯ, ಆಧ್ಯಾತ್ಮಿಕ ಆರೋಗ್ಯವನ್ನು ಸುಧಾರಿಸುತ್ತದೆ. ವಾಸ್ತವಿಕವಾಗಿ ಸ್ವಯಂನ್ನು ಆತ್ಮ ಎಂದು ನಿಶ್ಚಯ ಮಾಡಿ ಪರಮಾತ್ಮನನ್ನು ಯಥಾರ್ಥವಾಗಿ ನೆನಪು ಮಾಡುವುದೇ ಸತ್ಯವಾದ ರಾಜಯೋಗವಾಗಿದೆ. ರಾಜಯೋಗ ಮನಸ್ಸನ್ನು ನಿರ್ಮಲ ಶರೀರವನ್ನು ಶೀತಲ ಮಾಡುತ್ತದೆ ಹಾಗೂ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ರಾಜಯೋಗ ಸರ್ವರೋಗಗಳನ್ನು ನಿರ್ಮೂಲನೆ ಮಾಡುವ ಸಿದ್ಧೌಷಧವಾಗಿದೆ. ರಾಜಯೋಗವು ಮುಕ್ತಿ ಜೀವನ್ ಮುಕ್ತಿಯನ್ನು ಕರುಣಿಸುತ್ತದೆ ಎಂದರು.

ರೋಟರಿ ಸಂಸ್ಥೆ ಕಾರ್ಯದರ್ಶಿ ಸಂತೋಷ್ ಇನ್ನರ್‌ವೀಲ್ ಸಂಸ್ಥೆ ಅಧ್ಯಕ್ಷೆ ಪೂಜಾ, ವರ್ತಕ ಶ್ರೀನಿವಾಸ್ ಮಾತನಾಡಿದರು. ಯೋಗ ಪ್ರಕಾಶ್ ಅವರು ಗಂಟೆಗಳ ಕಾಲ ಸರಳ ಆಸನದ ವಿಧಿ ವಿಧಾನಗಳನ್ನು ಮಾಡಿಸಿದರು. ದಾನೇಶ್ವರೀಜೀಯವರು ಸಾಮೂಹಿಕ ರಾಜಯೋಗ ಧ್ಯಾನವನ್ನು ಹೇಳಿಕೊಟ್ಟರು. ಕಾರ್ಯಕ್ರಮದಲ್ಲಿ ಓಂ ಶಾಂತಿ ನ್ಯೂ ಸರ್ವಿಸ್‌ನ ಬಿಕೆ ಆರಾಧ್ಯ ಎಸ್‌ಬಿಐನ ಶ್ರೀನಿವಾಸನ್, ರೇಷ್ಮೆ ನಿವೃತ್ತ ಜಿಲ್ಲಾಧಿಕಾರಿ ನಾರಾಯಣಶೆಟ್ಟಿ, ಅಕ್ಷತಾ ಜೈನ್, ಮಹಾಲಕ್ಷ್ಮಿ, ಪುಟ್ಟಶೇಖರಮೂರ್ತಿ ಇತರರು ಹಾಜರಿದ್ದರು

ಕೃಷಿ ಪತ್ತಿನ ಸಹಕಾರ ಸಂಘದಿಂದ ವಾಹನ ಸಾಲ ವಿತರಣೆ



ದ್ವಿಚಕ್ರ ವಾಹನ ಸಾಲವನ್ನು ಸಂಘದ ಅಧ್ಯಕ್ಷ ಆರ್. ಮಣಿನಾಯಕ ಫಲಾನುಭವಿಗಳಿಗೆ ವಿತರಿಸಿದರು.

ಚಾಮರಾಜನಗರ: ತಾಲೂಕಿನ ಪುಣಜನೂರು ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ದ್ವಿಚಕ್ರ ವಾಹನ ಸಾಲ ವಿತರಿಸಲಾಯಿತು.

ಸಂಘದ ಕಚೇರಿಯಲ್ಲಿ ಆರ್.ಮಣಿನಾಯಕ್ ಫಲಾನುಭವಿಗಳಾದ ಮೂಕನಪಾಳ್ಯ ಸಾಗರನಾಯಕ್, ಪುಣಜನೂರು ಮಲ್ಲಪ್ಪ ಅವರಿಗೆ ತಲಾ 1.50 ಲಕ್ಷ ರೂ.ವೆಚ್ಚದ ದ್ವಿಚಕ್ರ ವಾಹನಗಳನ್ನು ಸಾಲದ ರೂಪದಲ್ಲಿ ವಿತರಿಸಿ ಮಾತನಾಡಿದ ಅವರು, ಕೃಷಿ ಸಾಲದ ಜೊತೆಗೆ ವಾಹನ ಸಾಲವನ್ನು ಸಂಘದ ವತಿಯಿಂದ ವಿತರಿಸಲಾಗುತ್ತಿದೆ. ಫಲಾನುಭವಿಗಳು ಸಕಾಲದಲ್ಲಿ ಸಾಲ ಮರುಪಾವತಿಸುವ ಮೂಲಕ ಸಂಘದ ಅಭಿವೃದ್ಧಿ, ಸಂಘದ ಇತರ ಸದಸ್ಯರಿಗೂ ನಿಮ್ಮಂತೆಯೇ ಸಾಲಸೌಲಭ್ಯ ನೀಡಲು ಸಹಕರಿಸಬೇಕು ಎಂದರು.

ಸಂಘದ ಉಪಾಧ್ಯಕ್ಷ ಉಮಾಶಂಕರ್, ನಿರ್ದೇಶಕ ಮುತ್ತು ನಾಯಕ್ ಗುರುನಾಯಕ್, ಹೆಚ್.ಮೂರ್ತಿ, ಪಿ.ಗಣೇಶ್ ನಾಯಕ್, ನಾಗಭೂಷಣ್ ಜಯಭಾಯಿ, ಭಾಗ್ಯಮ್ಮ, ಮೋಹನ್ ನಾಯಕ್, ಬಂಗಾರಶೆಟ್ಟಿ, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಎಸ್.ಜಯಶಂಕರಸ್ವಾಮಿ, ಕ್ಯಾಷಿಯರ್ ಮಾದೇಶ್, ಕಿರಿಯ ಸಹಾಯಕ ಚಂದ್ರುನಾಯಕ್, ಪಿಗ್ಮಿ ಏಜೆಂಟ್ ಚಂದ್ರು, ಹಾಜರಿದ್ದರು.

ತಾಲೂಕಿನ ಪುಣಜನೂರು ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ದ್ವಿಚಕ್ರ ವಾಹನ ಸಾಲವನ್ನು ಸಂಘದ ಅಧ್ಯಕ್ಷ ಆರ್. ಮಣಿನಾಯಕ ಫಲಾನುಭವಿಗಳಿಗೆ ವಿತರಿಸಲಾಯಿತು.

ಮಹಿಳೆ ಕೊಂದಿದ್ದ ಹುಲಿ ಸೆರೆಗೆ ಕಾರ್ಯಾಚರಣೆ

ಗುಂಡ್ಲುಪೇಟೆ, ಜೂ.22 (ಸೋಮ್.ಜಿ)– ತಾಲೂಕಿನ ದೇಶೀಪುರ ಕಾಲೋನಿಯ ಆದಿವಾಸಿ ಮಹಿಳೆಯನ್ನು ಕೊಂದಿದ್ದ ಹುಲಿ ಪತ್ತೆಗೆ ಸಾಕಾನೆಗಳ ನೆರವಿನಿಂದ ಅರಣ್ಯ ಇಲಾಖೆ ಹುಲಿ ಹುಡುಕಾಟದ ಕಾರ್ಯಾಚರಣೆ ನಡೆಸಿದೆ.

ಈ ಘಟನೆ ನಡೆದ ಪ್ರದೇಶದಲ್ಲಿ ಅರಣ್ಯ ಇಲಾಖೆ ಅಳವಡಿಸಿರುವ ಕ್ಯಾಮೆರಾಗಳಲ್ಲಿ ಯಾವ ವನ್ಯಜೀವಿಗಳ ಚಿತ್ರವೂ ಸೆರೆಯಾಗಿಲ್ಲ. ಅಲ್ಲದೆ ಸ್ಥಳದಲ್ಲಿ ಬೋನಿನ ಬಳಿಗೆ ಯಾವುದೇ ಪ್ರಾಣಿಗಳು ಸುಳಿಯದ ಹಿನ್ನೆಲೆಯಲ್ಲಿ ಸಾಕಾನೆಗಳ ನೆರವಿನಿಂದ ಭಾನುವಾರ ಬೆಳ್ಳಂಬೆಳಗ್ಗೆಯೇ ಕೂಂಬಿಂಗ್ ನಡೆಸಲಾಯಿತು.

ಭಾನುವಾರವೂ ಸಹಾ ಪಶುವೈದ್ಯರು, ಸಾಕಾನೆಗಳಾದ ರೋಹಿತ ಮತ್ತು ಪಾರ್ಥಸಾರಥಿ ಜತೆಗೆ ಗೆಜ್ಜಿಗಶೆಟ್ಟಿ ಹಳ್ಳ ಹಾಗೂ ಆಲದಮರದ ಮುಂಟಿ ಅರಣ್ಯದ ಸಮೀಪ ಹುಲಿಸಂರಕ್ಷಣಾ ದಳದ 12 ಹಾಗೂ ಅರಣ್ಯ ಇಲಾಖೆಯ 23 ಸಿಬ್ಬಂದಿ ಕೂಂಬಿಂಗ್ ನಡೆಸಿದರು. ಈ ಪ್ರದೇಶದ ಸುತ್ತಲೂ 3 ಕಿಲೋಮೀಟರ್ ವ್ಯಾಪ್ತಿಯಲ್ಲಿ ಡ್ರೋಣ್ ಕ್ಯಾಮೆರಾ ಹಾರಿಸಿ ಹುಡುಕಾಟ ನಡೆಸಿದರೂ ಹುಲಿ ಪತ್ತೆಯಾಗಿಲ್ಲ.

ಆದ್ದರಿಂದ ಸೋಮವಾರವೂ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗುವುದು. ಅಕ್ಕಪಕ್ಕದ ಗ್ರಾಮಗಳ ಜನರು ಜಾನುವಾರುಗಳನ್ನು ಹೊರಗೆ ಕಟ್ಟಿಹಾಕಬಾರದು. ಸಂಜೆ ಕತ್ತಲಾದ ನಂತರ ಮನೆಗಳಿಂದ ಹೊರಬರದೆ ಎಚ್ಚರಿಕೆಯಿಂದ ಇರಬೇಕು ಎಂದು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿದೆ.



ಗುಂಡ್ಲುಪೇಟೆ ತಾಲೂಕಿನ ದೇಶೀಪುರ ಕಾಲೋನಿಯಲ್ಲಿ ಆದಿವಾಸಿ ಮಹಿಳೆಯನ್ನು ಕೊಂದು ಹಾಕಿದ ಹುಲಿ ಸೆರೆಗೆ ಅರಣ್ಯ ಇಲಾಖೆ ಸಾಕಾನೆಗಳ ನೆರವಿನಿಂದ ಕೂಂಬಿಂಗ್ ನಡೆಸುತ್ತಿದೆ.

ಕೆಂಪೇಗೌಡ ಜಯಂತಿ
ಇಂದು ಪೂರ್ವಭಾವಿ ಸಭೆ

ಚಾಮರಾಜನಗರ: ಜಿಲ್ಲಾ ಕೇಂದ್ರದಲ್ಲಿ ಜೂ.27ರಂದು ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಚರಿಸುವ ಸಲುವಾಗಿ ಪೂರ್ವಭಾವಿ ಸಭೆಯನ್ನು ಜೂ.23ರ ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.



ಸಮುದಾಯದ ಮುಖಂಡರು, ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಭೆಗೆ ಹಾಜರಾಗಿ ಆಚರಣೆ ಕುರಿತು ಅಭಿಪ್ರಾಯ, ಸಲಹೆ ನೀಡುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರಕರ್ತರ ಬೇಡಿಕೆ ಹಂತ ಹಂತವಾಗಿ ಈಡೇರಿಕೆ: ಕೆ.ವೆಂಕಟೇಶ್

ಚಾಮರಾಜನಗರ: ಪತ್ರಕರ್ತರ ಬೇಡಿಕೆಗಳನ್ನು ಹಂತ–ಹಂತವಾಗಿ ಈಡೇರಿಸಲು ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ತಿಳಿಸಿದರು.

ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ನಾಗುಮಲೆ ಭವನದಲ್ಲಿ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಹನೂರು ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ನಡೆದ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಅಧಿಕಾರ ಅವಧಿಯಲ್ಲಿ ಪತ್ರಕರ್ತರಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಪತ್ರಕರ್ತರ ಮನವಿಯನ್ನು ಈಡೇರಿಸಲಿದ್ದಾರೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮಾತನಾಡಿ, ಕಲಿಯುವ ವಯಸ್ಸಿನಲ್ಲಿ ವಿದ್ಯಾರ್ಥಿಗಳಲ್ಲಿ ಜ್ಞಾನದ ದಾಹ ಮತ್ತು ಕಲಿಕೆಯ ಹಂಬಲ ಜ್ವರದಂತೆ ಕಾಡಬೇಕು. ಪ್ರತಿಭೆ ಅಂದರೆ ಕೇವಲ ಪರೀಕ್ಷಾ ಫಲಿತಾಂಶ ಅಲ್ಲ. ಜ್ಞಾನ ಮತ್ತು ನಿರಂತರ ಸಾಧನೆ ಮತ್ತು ನೀವು ಪಟ್ಟ ಪರಿಶ್ರಮವಾಗಿದೆ. ಇಂದು ಪ್ರತಿಭಾ ಪುರಸ್ಕಾರ ಸ್ವೀಕರಿಸುತ್ತಿರುವ ಎಲ್ಲಾ ಮಕ್ಕಳಿಗೂ ಪೋಷಕರ ಪರವಾಗಿ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಉಚಿತ ಬಸ್‌ಪಾಸ್: ಪತ್ರಕರ್ತರ ವೃತ್ತಿ ಮತ್ತು ಬದುಕಿನ ಸಮಸ್ಯೆಗಳಿಗೆ ನಿರಂತರವಾಗಿ ಮುಖ್ಯಮಂತ್ರಿಗಳು ಸ್ಪಂದಿಸುತ್ತಿದ್ದಾರೆ. ಜುಲೈ 1ಕ್ಕೆ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ವ್ಯವಸ್ಥೆ, ಪತ್ರಕರ್ತರ ಆರೋಗ್ಯ ಕಾರ್ಡ್, ಆರೋಗ್ಯ ಸಂಜೀವಿನಿ ಕಾರ್ಡ್ ಕೂಡ ಜು.1ರಂದು ನೀಡಲಾಗುವುದು. ಜಿಲ್ಲಾ ಪತ್ರಕರ್ತರ ಭವನ ಮತ್ತು ತಾಲೂಕು ಪತ್ರಕರ್ತರ ಭವನದ ನಿರ್ಮಾಣಕ್ಕೂ ಸರ್ಕಾರದ ಜೊತೆ ಮಾತನಾಡಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಶಾಸಕರಾದ ಎಂ.ಆರ್.ಮಂಜುನಾಥ್, ಎ.ಆರ್. ಕೃಷ್ಣಮೂರ್ತಿ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪ್ರಧಾನ ಕಾರ್ಯದರ್ಶಿ ಲೋಕೇಶ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಮಲೆ ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜ್ ಕಪ್ಪಸೋಗೆ, ಹನೂರು ತಾಲೂಕು ಅಧ್ಯಕ್ಷ ಮಾದೇಶ್, ಮುಖಂಡರಾದ ನಿಶಾಂತ್, ನಾಯ್ಡು ಇತರರು ಇದ್ದರು.



ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳನ್ನು ಸನ್ಮಾನಿಸಲಾಯಿತು.

ಸಕ್ಷಮ ಪ್ರಾಧಿಕಾರದಲ್ಲಿ ಕೋಚಿಂಗ್ ಸೆಂಟರ್ ನೋಂದಣಿ ಕಡ್ಡಾಯ

ಚಾಮರಾಜನಗರ: ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಕೋಚಿಂಗ್ ಸೆಂಟರ್ ನಡೆಸಲು ಹಾಗೂ ಈಗಾಗಲೇ ನಡೆಸುತ್ತಿರುವ ಕೋಚಿಂಗ್ ಸೆಂಟರ್ ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಸಂಸ್ಥೆಯನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ತಿಳಿಸಿದೆ.

ನೋಂದಾಯಿಸಿಕೊಂಡಿರುವ ಬಗ್ಗೆ ಸಂಬಂಧಿಸಿದ ದಾಖಲೆಯೊಂದಿಗೆ ಮಾಹಿತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

ಸಂಸ್ಕೃತ ಪಾಠಶಾಲೆಯಿಂದ ಪ್ರತಿಭಾ ಪುರಸ್ಕಾರ



ಶ್ರೀರಾಮಶೇಷ ಪಾಠ ಶಾಲೆ ನಡೆಸಿದ ಸೇವಾ ಮಿಲನವನ್ನು ಶ್ರೀ ಚನ್ನಬಸವಸ್ವಾಮೀಜಿ ಉದ್ಘಾಟಿಸಿದರು.

ಚಾಮರಾಜನಗರ, ಜೂ.22– ನಗರದ ಶ್ರೀರಾಮ ಶೇಷ ಹಾಗೂ ಸಂಸ್ಕೃತ ಪಾಠಶಾಲೆ ವತಿಯಿಂದ ಸಮ್ಯಕ್ ಪ್ರತಿಷ್ಠಾನದ ಸಹಯೋಗದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ಸರಕಾರಿ ಶಾಲೆಯ ನೂರಾರು ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಕಲಿಕಾ ಸಾಮಗ್ರಿಗಳ ವಿತರಿಸಲಾಯಿತು.

ಡ್ರೀಮ್ಸ್ ಟ್ರಸ್ಟ್ ಆವರಣದಲ್ಲಿ ನಡೆದ ಸೇವಾ ಮಿಲನ ಕಾರ್ಯಕ್ರಮವನ್ನು ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಉದ್ಘಾಟಿಸಿ ಡ್ರೀಮ್ ಟ್ರಸ್ಟ್ ಮುಖ್ಯಸ್ಥ ಪ್ರದೀಪ್ ಕುಮಾರ್ ದೀಕ್ಷಿತ್ ಸೇವಾ ಮಿಲನ ಕಾರ್ಯಕ್ರಮವನ್ನು ಅರ್ಥಪೂರ್ಣ ರೀತಿಯಲ್ಲಿ ಆಚರಿಸುತ್ತಾ ಬರುತ್ತಿರುವುದು ಅವರ ಸಾಮಾಜಿಕ ಕಾಳಜಿಯನ್ನು ತೋರಿಸುತ್ತದೆ ಎಂದರು.

ಮೈಸೂರಿನ ಸುಧಾಕರ ಹೊಸಹಳ್ಳಿ ಮಾತನಾಡಿ, ಸೇವೆ, ಸಂಸ್ಕಾರ ನಮ್ಮ ನೆಲದ ಸಂಸ್ಕೃತಿಯೇ ಆಗಿದೆ. ಯಜುರ್ವೇದ ಕಾಲದಲ್ಲೇ ನಾವು ಜಗತ್ತಿಗೆ ಎಲ್ಲವನ್ನೂ ಕೊಟ್ಟಿದ್ದೇವೆ. ಆದರೆ, ಇಂದು ನಮ್ಮವರು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸುತ್ತಿರುವುದು ದುರದೃಷ್ಟಕರ ಎಂದು ಬಣ್ಣಿಸಿದರು.

ಸಾಧಕರಿಗೆ ಸನ್ಮಾನ : ಕೇಂದ್ರ ಸಾಹಿತ್ಯ ಅಕಾಡೆಮಿ ಯುವ ಪ್ರಶಸ್ತಿ ಪುರಸ್ಕೃತ ದಿಲೀಪ್ ಕುಮಾರ್, ಪೊಲೀಸ್ ಇಲಾಖೆಯ ಎನ್. ನಾಗೇಂದ್ರ, ಕರಾಟೆ ತರಬೇತುದಾರ ಸುನೀಲ್ ಕುಮಾರ್, ಪತ್ರಕರ್ತ ಆರ್.ಪುಟ್ಟರಾಜು, ಕೆ. ಶ್ರೀಹರಿ, ಸತೀಶ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು. ನಗರಸಭೆ ಮಾಜಿ ಸದಸ್ಯ ಗಣೇಶ ದೀಕ್ಷಿತ್, ಸಮ್ಯಕ್ ಪ್ರತಿಷ್ಠಾನದ ಸತೀಶ್, ಉದ್ಯಮಿ ವೆಂಕಟನಾಗಪ್ಪಶೆಟ್ಟಿ, ಅನೂಷ್, ಕದಂಬ ಸೇನೆಯ ಅಂಬರೀಶ್, ಡೀಮ್ ಟ್ರಸ್ಟ್‌ನ ಪ್ರದೀಪ್‌ಕುಮಾರ್ ದೀಕ್ಷಿತ್ ಇತರರು ಹಾಜರಿದ್ದರು.

ಮೈಸೂರು ಮಿತ್ರ

ಗ್ರಾಪಂ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ



ಗ್ರಾಪಂ ಕಟ್ಟಡ ಕಾಮಗಾರಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು, ಜೂ.22– ಐತಿಹಾಸಿಕ ಹಿನ್ನೆಲೆಯುಳ್ಳ ತಾಲೂಕಿನ ಕಳಲೆ ಗ್ರಾಮದಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ಮಾದರಿ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಿಸಲಾಗುವುದು ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಕಳಲೆ ಗ್ರಾಮದಲ್ಲಿ 75 ಲಕ್ಷ ರೂ. ವೆಚ್ಚದ ಗ್ರಾಪಂ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಅತ್ಯಂತ ದೊಡ್ಡ ಗ್ರಾಮವಾದ ಕಳಲೆ ಗ್ರಾಮದಲ್ಲಿ 5 ಕೋಟಿಗೂ ಹೆಚ್ಚು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಪ್ರಥಮ ಬಾರಿಗೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿದ್ದ ವೇಳೆ 3 ಕೋಟಿ ಅನುದಾನ ನೀಡಿ ವಿವಿಧ ಬೀದಿಗಳಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣ ಸೇರಿದಂತೆ ಅಭಿವೃದ್ಧಿ ಕಾಮಗಾರಿ ನಡೆದಿದೆ. ನನ್ನ ಶಾಸಕ ನಿಧಿಯಿಂದಲೂ 2 ಕೋಟಿಗೂ ಅಧಿಕ ಅನುದಾನವನ್ನು ಗ್ರಾಮಕ್ಕೆ ನಿಯೋಜಿಸಿ ಅಭಿವೃದ್ಧಿ ಕೆಲಸಗಳನ್ನು ನಡೆಸಿದ್ದೇನೆ. ಮುಂದಿನ ದಿನಗಳಲ್ಲಿ ಸಮುದಾಯ ಭವನ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಲು ಬದ್ಧನಾಗಿದ್ದೇನೆ. ಅಲ್ಲದೇ 75 ಲಕ್ಷ ರೂ. ವೆಚ್ಚದಲ್ಲಿ ಗ್ರಾಪಂ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ತಾಲೂಕಿನಲ್ಲಿ ಅತ್ಯಂತ ಮಾದರಿ ಗ್ರಾಮ ಪಂಚಾಯಿತಿ ಕಟ್ಟಡವಾಗಿ ರೂಪುಗೊಳ್ಳಲಿದೆ ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯ ಎನ್.ಮಹದೇವು, ಮುಖಂಡರಾದ ರಾಜೇಶ್, ಗ್ರಾಪಂ ಸದಸ್ಯರಾದ ಲತಾ, ರತ್ನಮ್ಮ, ಲಕ್ಷ್ಮಿ, ಶಿವಕುಮಾರಿ, ರಾಜಮ್ಮ, ಹರೀಶ್, ಶಿವಕುಮಾರ್, ರಾಜೇಶ್ವರಿ, ಮಹದೇವನಾಯಕ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗರಾಜು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್‌ಗೌಡ, ತಾಲೂಕು ಅಧ್ಯಕ್ಷ ವಿಜಯಕುಮಾರ್ ಸೇರಿದಂತೆ ಹಲವರಿದ್ದರು.

ತಿ.ನರಸೀಪುರದ ರೇಷ್ಮೆ ಕಾರ್ಖಾನೆ ಜಾಗದಲ್ಲಿ

ಕ್ರೀಡಾಂಗಣ ನಿರ್ಮಿಸದಂತೆ ಆಗ್ರಹಿಸಿ ಪ್ರತಿಭಟನೆ



ಕ್ರೀಡಾಂಗಣ ನಿರ್ಮಿಸದಂತೆ ಆಗ್ರಹಿಸಿ ಹೊರಗುತ್ತಿಗೆ ನೌಕರರು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಜೂ.22– ಪಟ್ಟಣದ ರೇಷ್ಮೆ ಕಾರ್ಖಾನೆಗೆ ಸೇರಿದ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವ ನಿರ್ಧಾರ ಕೈ ಬಿಡುವಂತೆ ಆಗ್ರಹಿಸಿ ಕಾರ್ಮಿಕರು ಕಾರ್ಖಾನೆ ಎದುರು ಪ್ರತಿಭಟನೆ ನಡೆಸಿದರು.

ಕಾರ್ಖಾನೆ ಎದುರು ಜಮಾಯಿಸಿದ ನೌಕರರು ಕಾರ್ಮಿಕರಿಗೆ ನ್ಯಾಯ ಕೊಡಿಸಿ, ರೇಷ್ಮೆ ಕಾರ್ಖಾನೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವ ನಿರ್ಧಾರ ಕೈ ಬಿಡಬೇಕು. ಬಡವರ ಹೊಟ್ಟೆ ಮೇಲೆ ಹೊಡೆಯ ಬೇಡಿ ಎಂದು ಸರ್ಕಾರವನ್ನು ಆಗ್ರಹಿಸಿ ಘೋಷಣೆ ಕೂಗಿದರು.

ಇತ್ತೀಚೆಗೆ ಮುಖ್ಯಮಂತ್ರಿಗಳ ಬೆಂಗಳೂರಿನ ಕಾವೇರಿ ನಿವಾಸದಲ್ಲಿ ನಡೆದ ಸಭೆಯಲ್ಲಿ ತಿ.ನರಸೀಪುರದಲ್ಲಿ ಕ್ರೀಡಾಂಗಣ ನಿರ್ಮಿಸುವ ಕುರಿತು ರೇಷ್ಮೆ ಇಲಾಖೆಯಿಂದ ಕಾರ್ಖಾನೆಗೆ ಸೇರಿದ ಜಾಗವನ್ನು ಹಸ್ತಾಂತರಿಸುವ ಬಗ್ಗೆ ಚರ್ಚೆ ನಡೆದಿರುವುದರಿಂದ ಹೊರಗುತ್ತಿಗೆ ಕಾರ್ಮಿರಾದ ನಮಗೆಲ್ಲ ಆತಂಕ ಶುರುವಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.

ರೇಷ್ಮೆ ನೂಲು ತೆಗೆಯುವ ಈ ಕಾರ್ಖಾನೆಯಲ್ಲಿ 200ಕ್ಕೂ ಹೆಚ್ಚು ಹೊರಗುತ್ತಿಗೆ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಎಲ್ಲರೂ ವರುಣ ಮತ್ತು ತಿ.ನರಸೀಪುರ ಕ್ಷೇತ್ರದ ಸುತ್ತಮುತ್ತಲಿನ ಹಳ್ಳಿಯವರಾಗಿದ್ದು, ಜೀವನೋಪಾಯಕ್ಕಾಗಿ ಈ ಕಾರ್ಖಾನೆಯನ್ನೇ ಅವಲಂಬಿಸಿರುವುದಾಗಿ ತಿಳಿಸಿದರು.

ಕಾರ್ಖಾನೆ ಅಭಿವೃದ್ಧಿ ಕಾರ್ಯಗಳಿಗಾಗಿ ಈಗಾಗಲೇ ಹಲವಾರು ಯೋಜನೆಗಳನ್ನು ರೂಪಿಸಲಾಗಿದ್ದು, ಇದರಿಂದ ಇನ್ನಷ್ಟು ಉದ್ಯೋಗಿಗಳಿಗೆ ಅವಕಾಶವಾಗುವುದಲ್ಲದೆ, ಸಂಸ್ಥೆಯ ಬೆಳವಣಿಗೆಯೂ ಆಗುತ್ತದೆ. ಆದ್ದರಿಂದ ಸಂಸ್ಥೆ ಅಭಿವೃದ್ಧಿ ಹಾಗೂ ಕಾರ್ಮಿಕರ ಭವಿಷ್ಯದ ಹಿತದೃಷ್ಟಿಯಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಘಟಕದ ಎಲ್ಲಾ ಹೊರಗುತ್ತಿಗೆ ಕಾರ್ಮಿಕರು ಸಂಸ್ಥೆಯ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾಪದಿಂದ ಆತಂಕದಲ್ಲಿದ್ದಾರೆ. ಹೀಗಾಗಿ ಸಂಸ್ಥೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾಪ ಕೈ ಬಿಡುವಂತೆ ಹೊರಗುತ್ತಿಗೆ ಕಾರ್ಮಿಕರು ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿದ್ದಾರೆ.

ನಿರಂತರ ಪ್ರಯತ್ನ, ಪರಿಶ್ರಮದಿಂದ ಯಶಸ್ಸು ಸಾಧ್ಯ

ವಿದ್ಯಾರ್ಥಿಗಳಿಗೆ ಡಾ.ಶರತ್ ಸಲಹೆ



ತುಂಬಸೋಗೆ ಎಂಎಂಕೆ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಜೂ.22– ವಿದ್ಯಾರ್ಥಿ ಜೀವನಕ್ಕೆ ಸಾಧನೆ ಎನ್ನುವುದು ಬಹಳ ಮುಖ್ಯ. ಆದ್ದರಿಂದ ವಿದ್ಯಾರ್ಥಿಗಳು ಜೀವನದಲ್ಲಿ ಏನಾದರೂ ಸಾಧಿಸಿ ದೇಶಕ್ಕೆ ಉತ್ತಮ ಪ್ರಜೆಯಾಗಬೇಕು ಎಂದು ಡಾ.ಶರತ್ ತಿಳಿಸಿದರು.

ತಾಲೂಕಿನ ತುಂಬಸೋಗೆ ಗ್ರಾಮದಲ್ಲಿರುವ ಎಂಎಂಕೆ ಕಾಲೇಜಿನಲ್ಲಿ 2025–26ನೇ ಸಾಲಿನ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನೆ, ಅಭಿನಂದನೆ ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನದಲ್ಲಿ ಸಾಧನೆ ಮುಖ್ಯ. ಮುಂದಿನ ಜೀವನ ರೂಪಿಸಿಕೊಳ್ಳಲು ವಿದ್ಯಾಭ್ಯಾಸದಲ್ಲಿ ಶ್ರಮವಹಿಸ ಬೇಕು. ಆಗಲೇ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಎಂಎಂಕೆ ಕಾಲೇಜಿನಲ್ಲಿ ಉತ್ತಮ ಪಾಠ ಪ್ರವಚನಗಳು ವಿದ್ಯಾರ್ಥಿಗಳಿಗೆ ದೊರಕುತ್ತಿದೆ. ಆದ್ದರಿಂದ ಅದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳು ಯಾವುದೇ ವಿಷಯವನ್ನಾದರೂ ಇಷ್ಟಪಟ್ಟು ಓದಬೇಕು. ಹೀಗೆ ನಿರಂತರ ಪ್ರಯತ್ನ ಮತ್ತು ಪರಿಶ್ರಮದಿಂದ ಮಾತ್ರ ಯಶಸ್ಸು ಲಭಿಸುವುದಕ್ಕೆ ಸಾಧ್ಯ. ಸತತ ಪ್ರಯತ್ನದ ಜೊತೆಗೆ ವಿದ್ಯಾರ್ಥಿಗಳಿಗೆ ಆರೋಗ್ಯವು ಬಹಳ ಮುಖ್ಯ. ಹಾಗಾಗಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದರು.

ಈ ವೇಳೆ ಕಳೆದ ಸಾಲಿನಲ್ಲಿ ತಾಲೂಕಿನಲ್ಲಿ 4 ಸ್ಥಾನಗಳನ್ನು ಪಡೆದ ವಿಜ್ಞಾನ ವಿಭಾಗದ ಖುಷಿತ, ಕೆ.ಎಸ್. ಪ್ರತಿಮ, ಅನನ್ಯ, ಯುಕ್ತಿ ಹಾಗೂ ಕಲಾ ವಿಭಾಗದಲ್ಲಿ ನಾಗಲಕ್ಷ್ಮಿ, ವಾಣಿಜ್ಯ ವಿಭಾಗದಲ್ಲಿ ಯದುನಂದನ್, ಇಂದುಶ್ರೀ ಮತ್ತು ಅತ್ಯುನ್ನತ ಶ್ರೇಣಿ ಪಡೆದ 30ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಅಲ್ಲದೇ ಬೀಚನಹಳ್ಳಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಕಾಳಿಂಗೇಗೌಡ, ಪೊಲೀಸ್ ಇಲಾಖೆಯಲ್ಲಿ 2 ಬಾರಿ ಮುಖ್ಯಮಂತ್ರಿ ಪದವಿ ಪಡೆದ ರಮೇಶ್ ರಾವ್, ಅಬಕಾರಿ ಅಧಿಕಾರಿ ಅಬ್ಜಲ್, ಸರಗೂರು ಸರ್ಕಾರ ಆಸ್ಪತ್ರೆ ಮರಣೋತ್ತರ ಪರೀಕ್ಷೆಯಲ್ಲಿ ಸಾಧನೆಗೈದ ರಾಜಮ್ಮ ಅವರನ್ನು ಅಭಿನಂದಿಸಲಾಯಿತು.

ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಗಿಡ ನೀಡುವ ಮೂಲಕ ಕಾಲೇಜಿಗೆ ಬರಮಾಡಿಕೊಂಡರು. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಚಂದ್ರೇಗೌಡ, ಎಂಎಂಕೆ ಕಾಲೇಜಿನ ಪ್ರಾಂಶುಪಾಲ ಎಸ್.ಪಿ.ಪ್ರಕಾಶ್, ಕಾಲೇಜಿನ ಸಿಡಿಸಿ ಅಧ್ಯಕ್ಷ ಮೋಹನ್ ಸುಧೀರ್, ಸಕಲೇಶ್, ವೈದ್ಯನಾಥ್, ಅಶೋಕ್, ಎಂಎಂಕೆ ಪಬ್ಲಿಕ್ ಶಾಲೆ ಮುಖ್ಯಶಿಕ್ಷಕ ಜಾನ್ ಬಾಸ್ಕೊ, ಉಪನ್ಯಾಸಕರಾದ ವಿರೂಪಾಕ್ಷ, ಸಿದ್ದರಾಜು, ಸಿದ್ದಾರ್ಥ, ಪ್ರಸನ್ನಕುಮಾರ್, ಮೋಹನ್, ಮನೋಜ್, ಮಾದೇವಿ, ಧನುಜ, ಸುಪ್ರಿಯ, ಮುಸ್ಕಾನ್ ಬಾನು, ಸೌಜನ್ಯ, ಸಿಂಧು, ಭಾಗ್ಯ, ದೈಹಿಕ ಶಿಕ್ಷಕ ಹರೀಶ್ ಇನ್ನಿತರರಿದ್ದರು.

ಸಾಲಿಗ್ರಾಮದಲ್ಲಿ ವಾಲ್ಮೀಕಿ ಸಂಘದ ಕಚೇರಿ ಉದ್ಘಾಟನೆ



ವಾಲ್ಮೀಕಿ ನಾಯಕರ ಸಂಘದ ಕಚೇರಿಯನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಉದ್ಘಾಟಿಸಿದರು.


ಸಾಲಿಗ್ರಾಮ, ಜೂ.22– ತಾಲೂಕು ವಾಲ್ಮೀಕಿ ನಾಯಕರ ಸಂಘದ ನೂತನ ಕಚೇರಿ ನಿರ್ಮಾಣಕ್ಕೆ ನನ್ನ ಸ್ವಂತ ಜಾಗ ನೀಡುವುದಾಗಿ ಮಾಜಿ ಸಚಿವ ಸಾ.ರಾ. ಮಹೇಶ್ ತಿಳಿಸಿದರು.

ಪಟ್ಟಣದಲ್ಲಿ ನೂತನ ತಾಲೂಕು ವಾಲ್ಮೀಕಿ ಸಂಘದ ಕಚೇರಿ ಉದ್ಘಾಟಿಸಿ, ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸಮಾಜದಲ್ಲಿ ಗುರು ಹಿರಿಯರನ್ನು ಗೌರವಿಸುವ ಮೂಲಕ ಎಲ್ಲರನ್ನು ಸಂಘಟಿತರನ್ನಾಗಿ ಮಾಡಿಕೊಂಡು ತಾಲೂಕು ಸಂಘ ಅಭಿವೃದ್ಧಿ ಆಗಬೇಕಿದೆ. ಸಮಾಜದಲ್ಲಿ ಸಾಕಷ್ಟು ಜನ ಬಡತನದಲ್ಲಿದ್ದರೂ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಎಲ್ಲೂ ಹಿಂದೆ ಉಳಿಯುತ್ತಿಲ್ಲ. ಇದೊಂದು ಶುಭ ಸಂಕೇತ ಎನ್ನಬಹುದು. ಆದರೆ ವಾಲ್ಮೀಕಿ ಸಮಾಜಕ್ಕೆ ಸೇರಿದ ಒಬ್ಬ ನಿಷ್ಠಾವಂತ ದಕ್ಷ ಅಧಿಕಾರಿಯನ್ನು ಅಮಾನತು ಮಾಡಿರುವುದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಯಾವುದೇ ತಪ್ಪು ಮಾಡದ ಕುಟುಂಬ ಸಂಕಷ್ಟಕ್ಕೆ ಸಿಲುಕಿದಾಗ ಸಂಘಟನೆಗಳು ಅವರ ಪರ ನಿಲ್ಲುವುದು, ನ್ಯಾಯ ಕೊಡಿಸುವುದು ನಿಜವಾದ ಸಂಘ ಸಂಸ್ಥೆಗಳ ಕರ್ತವ್ಯ ಎಂದರು.

ಇದೀಗ ಖಾಸಗಿ ಕಟ್ಟಡದಲ್ಲಿ ಕಚೇರಿ ತೆರೆದು ಸಂಘಟಿತರಾಗುತ್ತಿರುವ ವಾಲ್ಮೀಕಿ ಸಮಾಜಕ್ಕೆ ಶೀಘ್ರ ಪಟ್ಟಣದಲ್ಲಿ ಸ್ವಂತ ಕಚೇರಿ ನಿರ್ಮಾಣ ಮಾಡಿಕೊಳ್ಳಲು ನನ್ನ ಸ್ವಂತ ಜಾಗ ನೀಡಲಾಗುವುದು ಎಂದು ಭರವಸೆ ನೀಡಿದ ಅವರು, ಸಂಘ ಸಂಸ್ಥೆಗಳು ಯಾವುದೇ ಪಕ್ಷದ ಪರವಾಗಿ ಕೆಲಸ ಮಾಡಬಾರದು. ಸ್ವಂತ ಶಕ್ತಿಯಿಂದ ಸಮಾಜದಲ್ಲಿ ನೊಂದ ಜನರ ನೆರಳಾಗಿ ಅಸಂಘಟಿತರನ್ನು ಸಂಘಟಿತರನ್ನಾಗಿ ಮಾಡಿಕೊಳ್ಳಿ ಎಂದರು.

ಈ ವೇಳೆ ತಾಲೂಕು ವಾಲ್ಮೀಕಿ ಸಂಘದ ಅಧ್ಯಕ್ಷ ಚಿಕ್ಕಬೇರ್ಯ ಮಹದೇವ್, ರಾಜ್ಯ ಎನ್‌ಪಿಎಸ್ ನೌಕರರ ತಾಲೂಕು ಅಧ್ಯಕ್ಷ ಮಂಜುನಾಥ, ಸಂಘದ ವೆಂಕಟೇಶ ನಾಯಕ, ಖಜಾಂಚಿ ಸಂತೋಷ್, ಶಂಕರನಾಯಕ, ಬೈರೇಶ್, ದೇವರಾಜ್, ಕೃಷ್ಣಾಯಕ, ಎಸ್.ಬಿ. ಮಹದೇವ್, ಸ್ವಾಮಿನಾಯಕ, ವಾಹನ ಚಾಲಕರ ಸಂಘದ ಅಧ್ಯಕ್ಷ ಮಂಜುನಾಥ್, ಗ್ರಾಪಂ ಮಾಜಿ ಅಧ್ಯಕ್ಷರಾದ ಪ್ರಕಾಶ್, ಕಲಾವಿದ ಕುಮಾರ್, ಮಿರ್ಲೆ ವೆಂಕಟೇಶ ನಾಯಕ, ಮಂಜುನಾಥ್, ಮಲ್ಲಿಕಾರ್ಜುನ್, ತಿಮ್ಮನಾಯಕ, ಲೋಕೇಶ್ ನಾಯಕ, ರಾಮನಾಯಕ, ಚಂದ್ರನಾಯಕ, ಕುಬೇರ ನಾಯಕ ಸೇರಿದಂತೆ ಇತರರಿದ್ದರು.

ಲಾರಿಗೆ ಮಿನಿಬಸ್ ಡಿಕ್ಕಿ:22 ಮಂದಿಗೆ ಗಾಯ



ಹುಣಸೂರು,ಜೂ.22– ಮದುವೆ ನಿಶ್ಚಿತಾರ್ಥಕ್ಕೆ ತೆರಳುತ್ತಿದ್ದ ಮಿನಿ ಬಸ್ ಲಾರಿಗೆ ಡಿಕ್ಕಿ ಹೊಡೆದು ಉರುಳಿ ಬಿದ್ದು ಐವರಿಗೆ ತೀವ್ರ ಗಾಯಗಳಾಗಿದ್ದರೆ, 17 ಮಂದಿಗೆ ಸಣ್ಣಪುಟ್ಟ ಪೆಟ್ಟಾಗಿದೆ. ಹಿಂದಿನಿಂದ ಬರುತ್ತಿದ್ದ ಕಾರು, ಲಾರಿಗೆ ಡಿಕ್ಕಿ ಹೊಡೆದು ಜಖಂ ಗೊಂಡಿರುವ ಘಟನೆ ಹುಣಸೂರು–ಮಡಿಕೇರಿ ಹೆದ್ದಾರಿಯ ಕಲ್ ಬೆಟ್ಟ ಜಂಕ್ಷನ್‌ನಲ್ಲಿ ಭಾನುವಾರ ನಡೆದಿದೆ.

ಚಾಲಕ ಮಂಜು ಸೇರಿದಂತೆ ಮೈಸೂರಿನ ಉಮೇಶ್, ಗಾಯಿತ್ರಿ, ರಾಘವೇಂದ್ರ ಸ್ವಾಮಿ, ತೇಜಸ್ವಿನಿ ಉತ್ತಮ್, ಶಶಿಕುಮಾರ್, 6 ವರ್ಷದ ಭವನ್, ರಂಜಿತಾ, ರೂಪಾ, ಜ್ಯೋತಿ, ಹರ್ಷಿತ, ಸಿಂಚನ, ರಶ್ಮಿ, ಚಿರಾಗ್, ಪ್ರಶಾಂತ್, ನಿಶ್ಚಲ, ರಶ್ಮಿ, ಇಲವಾಲದ ಪ್ರಿಯಾ, ಯಶೋಧ, ಹುಣಸೂರಿನ ಭುವನೇಶ್ವರಿ, ಕಡಕೊಳದ ಚಂದನ್ ಗಾಯಗೊಂಡವರು.

ಮೈಸೂರು ಹಾಗೂ ಸುತ್ತಮುತ್ತಲ ಗ್ರಾಮ ಗಳ ಸಂಬಂಧಿಕರು ಗಾಯಗೊಂಡಿದ್ದು, ಹುಣಸೂರಿನ ಕಾವೇರಿ ಆಸ್ಪತ್ರೆಗೆ ದಾಖಲಾಗಿ ಐವರು ಚಿಕಿತ್ಸೆ ಪಡೆಯುತ್ತಿದ್ದರೆ, ಸಣ್ಣಪುಟ್ಟ ಗಾಯಗೊಂಡಿದ್ದವರು ಅಪೋಲೋ ಮತ್ತಿತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತೆರಳಿದ್ದಾರೆ. ಮೈಸೂರಿನಿಂದ ಮಡಿಕೇರಿಗೆ ಮದುವೆ ಮಾತುಕತೆಗಾಗಿ 25 ಮಂದಿ ಮಿನಿ ಬಸ್‌ನಲ್ಲಿ ತೆರಳುತ್ತಿದ್ದ ವೇಳೆ ಕಲ್‌ಬೆಟ್ಟ ಜಂಕ್ಷನ್ ಬಳಿ ವಿರಾಜಪೇಟೆ ರಸ್ತೆ ಕಡೆಯಿಂದ ಬಂದ ಹರ್ಯಾಣ ಮೂಲದ ಲಾರಿಗೆ ಹುಣಸೂರು ಕಡೆಯಿಂದ ತೆರಳುತ್ತಿದ್ದ ಮಿನಿ ಬಸ್ ಡಿಕ್ಕಿ ಹೊಡೆದು ಉರುಳಿ ಬಿದ್ದಿದೆ. ಈ ನಡುವೆ ಪಿರಿಯಾಪಟ್ಟಣ ಕಡೆಯಿಂದ ಬರುತ್ತಿದ್ದ ಸುಳ್ಯ ಮೂಲದ ಕಾರು ಸಹ ಲಾರಿಗೆ ಡಿಕ್ಕಿ ಹೊಡೆದು ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು, ಕಾರಿನ ಬಲೂನ್ ಓಪನ್ ಆಗಿದ್ದರಿಂದ ಪ್ರಾಣಾ ಪಾಯದಿಂದ ಪಾರಾಗಿದ್ದಾರೆ.

ಈ ಸಂಬಂಧ ಕಾರು ಚಾಲಕ ಮಂಗ ಳೂರು ಜಿಲ್ಲೆಯ ಸುಳ್ಯ ಮೂಲದ ಉದ ಯಶಂಕರ್ ಹುಣಸೂರು ಗ್ರಾಮಾಂತರ ಪೊಲೀಸರಿಗೆ ದೂರು ನೀಡಿದ್ದಾರೆ.

ವ್ಯಕ್ತಿ ಆತ್ಮಹತ್ಯೆ

ಹೆಚ್.ಡಿ.ಕೋಟೆ, ಜೂ.22– ಕೇರಳ ಮೂಲದ ವ್ಯಕ್ತಿಯೊಬ್ಬ ಕತ್ತು ಕುಯ್ದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಭೋಗೇಶ್ವರ ಕಾಲೋನಿ ಗ್ರಾಮದ ಶುಂಠಿ ಜಮೀನಿನಲ್ಲಿ ನಡೆದಿದೆ.

ಕೇರಳ ರಾಜ್ಯದ ಗೂಡ್ಲೂರು ತಾಲೂಕಿನ ಮಡುವನ್ ತೆರವಂಬ ಗ್ರಾಮದ ಮುಕುಂದನ್.ಆರ್ (38) ಆತ್ಮಹತ್ಯೆ ಮಾಡಿಕೊಂಡವರು. ಈತ ಕಳೆದ ಎಲೆಂಟು ವರ್ಷದಿಂದ ತಾಲೂಕಿನ ಭೋಗೇಶ್ವರ ಕಾಲೋನಿ ಗ್ರಾಮದಲ್ಲಿ ಜಮೀನು ಗುತ್ತಿಗೆ ಪಡೆದು ಶುಂಠಿ ಬೆಳೆ ಬೆಳೆಯುತ್ತಾ ವಾಸ ಮಾಡುತ್ತಿದ್ದ ಎನ್ನಲಾಗಿದೆ. ಶುಕ್ರವಾರ ರಾತ್ರಿ 8 ಗಂಟೆಗೆ ಕೇರಳದಲ್ಲಿರುವ ತನ್ನ ತಾಯಿಗೆ ಫೋನ್ ಮಾಡಿ ನಾನು ಇಲ್ಲಿ ಇರಲು ಸಾಧ್ಯ ಆಗುತ್ತಿಲ್ಲ. ಹಾಗಾಗಿ ಅಣ್ಣನನ್ನು ಕಳುಹಿಸಿ ನಾನು ವಾಪಸ್ ಊರಿಗೆ ಬರುತ್ತೇನೆ ಎಂದು ಹೇಳಿದ್ದಾನೆ. ಅದಕ್ಕೆ ಆತನ ತಾಯಿ ನಾಳೆ ಬೆಳಗ್ಗೆ ಅಣ್ಣನನ್ನು ಕಳುಹಿಸುವುದಾಗಿ ತಿಳಿಸಿದ್ದಾರೆ.

ಶನಿವಾರ ಕೇರಳ ಮೂಲದ ರವಿ ಮತ್ತು ಬಾಬು ಜೊತೆಗೆ ಶುಂಠಿ ಜಮೀನಿನಲ್ಲಿ ಕೆಲಸ ಮಾಡಿ ನಂತರ ಶೆಡ್‌ಗೆ ಒಬ್ಬನೇ ಬಂದಿದ್ದಾನೆ. ಆದರೆ ಮಧ್ಯಾಹ್ನ 12 ಗಂಟೆ ವೇಳೆಗೆ ಶೆಡ್‌ನಿಂದ ವ್ಯಕ್ತಿ ಕಿರುಚಿಕೊಂಡ ಶಬ್ದ ಕೇಳಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರವಿ ಮತ್ತು ಬಾಬು ಬಂದು ನೋಡಿದಾಗ ಹರಿತವಾದ ಚಾಕುವಿನಿಂದ ಮುಕುಂದನ್ ಕತ್ತು ಕುಯ್ದುಕೊಂಡು ನರಳಾಡುತ್ತಿದ್ದನ್ನು ನೋಡಿ ಭಯಗೊಂಡು ಮುಕುಂದನ್ ಅವರ ಅಣ್ಣನಿಗೆ ಫೋನ್ ಮಾಡಿ ವಿಚಾರ ತಿಳಿಸಿ ಗ್ರಾಮಸ್ಥರ ಸಹಾಯದಿಂದ ಜೀಪ್‌ನಲ್ಲಿ ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಆಸ್ಪತ್ರೆಗೆ ಆಗಮಿಸಿದ ಮುಕುಂದನ್ ಅವರ ಅಣ್ಣ ಮಣಿಕಂಠ ನನ್ನ ತಮ್ಮ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದ. ಹಾಗಾಗಿ ಆತನೆ ಕತ್ತು ಕುಯ್ದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರಿಗೆ ದೂರು ನೀಡಿದ್ದು, ಹೆಚ್.ಡಿ. ಕೋಟೆ ಎಸ್‌ಐ ಚಿಕ್ಕನಾಯಕ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಹಾರ, ವಿಹಾರದಷ್ಟೇ ಯೋಗ ಕೂಡಾ ಮುಖ್ಯ



ಜೆಎಸ್‌ಎಸ್ ಶಾಲೆಯಲ್ಲಿ ಯೋಗ ದಿನಾಚರಣೆ ನಡೆಯಿತು.

ಸರಗೂರು, ಜೂ.22– ಆಹಾರ, ವಿಹಾರ ಎಷ್ಟು ಮುಖ್ಯವೋ ಹಾಗೆ ಯೋಗ ಕೂಡ ಅಷ್ಟೆ ಮುಖ್ಯ ಎಂದು ಪಟ್ಟಣದ ಜೆಎಸ್‌ಎಸ್ ಶಾಲೆ ಮುಖ್ಯ ಶಿಕ್ಷಕಿ ನಾಗರತ್ನ ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಿತ್ಯ ಯೋಗ ಮಾಡುವುದರಿಂದ ಉತ್ತಮ ಆರೋಗ್ಯ ಪಡೆಯಬಹುದು. ಯೋಗ ಮಾಡಿದರೆ ನಮ್ಮ ಚಿಂತನೆಗಳೆಲ್ಲ ಸಕಾರಾತ್ಮಕವಾಗಿರುತ್ತವೆ. ಮಾನವೀಯ ಮೌಲ್ಯಗಳನ್ನು ಹೆಚ್ಚು ರೂಢಿಸಿಕೊಂಡು ಸತ್ಸಂಗ ಮಾಡಿ ಸಾಮಾಜಿಕವಾಗಿ ಆರೋಗ್ಯ ಕಾಪಾಡಿದಂತಾಗುತ್ತದೆ. ಹೀಗಾಗಿ ಯೋಗ ವರ್ಷಕೊಂದು ಬಾರಿ ಸಾಂಕೇತಿಕವಾಗಿ ಆಚರಣೆಯಾಗದೆ ನಿತ್ಯ ರೂಢಿಯಲ್ಲಿರಬೇಕು ಎಂದರು.

ಇದೇ ವೇಳೆ ದೈಹಿಕ ಶಿಕ್ಷಣ ಶಿಕ್ಷಕ ನಂದೀಶ್, ಕೃಷ್ಣಮೂರ್ತಿ ಮಕ್ಕಳಿಗೆ ಯೋಗಾಭ್ಯಾಸ ಹೇಳಿಕೊಟ್ಟರು. ಈ ವೇಳೆ ಶಾಲೆಯ ಮುಖ್ಯ ಶಿಕ್ಷಕ ಮಹಮ್ಮದ್ ಅಂಜುಪಾಷ, ಶಿಕ್ಷಕರಾದ ಶ್ವೇತಾ, ಶಿಲ್ಪ, ಜಯಣ್ಣ, ಗುರುಪ್ರಸಾದ್, ಶಂಕರ್, ಜಯಲಕ್ಷ್ಮಿ, ಶೀಲಾ, ಶೋಭಾರಾಣಿ, ಮಂಜುಳಾ, ಅಂತೋಣಿ ಮೇರಿ, ಅನಿತಾ, ನಂದಿನಿ, ಮಂಜುನಾಥ್, ಮಹದೇವಸ್ವಾಮಿ, ರಂಜನಿ ಅರಸ್, ಶಿವರಾತ್ರೀಶ್ವರ ಶಿವಾನುಭ ಮಂದಿರ ಮೇಲ್ವಿಚಾರಕ ಅಶೋಕ್, ಸ್ಕೌಟ್ ಅಂಡ್ ಗೈಡ್ ಮಕ್ಕಳು ಹಾಗೂ ಶಾಲಾ ಮಕ್ಕಳು ಭಾಗಿಯಾಗಿದ್ದರು.

ಮನೆ, ಮನಗಳಿಗೆ ಶರಣರ ಸಂದೇಶ ಕಾರ್ಯಕ್ರಮ



ಹಲವಾರ ಮಠಾಧ್ಯಕ್ಷ ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿದರು.

ಮೂಗೂರು, ಜೂ.22– ಶರಣರ ಕಾಯಕ ನಿಷ್ಠೆ ಮರೆತರೆ ಬದುಕಿನುದ್ದಕ್ಕೂ ಯಶಸ್ಸು ಕಾಣಲು ಹೆಣಗಾಡಬೇಕಾಗುತ್ತದೆ ಎಂದು ಹಲವಾರ ಮಠಾಧ್ಯಕ್ಷ ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಮೂಗೂರು ಸಮೀಪದ ಹೊಸಹಳ್ಳಿ ಗ್ರಾಮದಲ್ಲಿ ತಿ.ನರಸೀಪುರ ತಾಲೂಕು ಸಮಿತಿಯಿಂದ ನಡೆದ ಮನೆ– ಮನಗಳಿಗೆ ಶರಣರ ಸಂದೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನೆಯ ಹಿರಿಯರಲ್ಲಿ ಸಂಸ್ಕಾರ ದಿನೇ ದಿನೇ ಕಣ್ಮರೆಯಾಗುತ್ತಿದ್ದು, ಯುವ ಪೀಳಿಗೆ ಅಡ್ಡ ದಾರಿ ಹಿಡಿಯುತ್ತಿದೆ. ಇದರಿಂದಾಗಿ ಮನೆಯಲ್ಲಿ ಸಂಪತ್ತು ಎಷ್ಟೇ ಇದ್ದರೂ ಜ್ಞಾನ, ಅರಿವಿನ ಕೊರತೆಯಿಂದ ಸಮುದಾಯ ಏಳಿಗೆ ಕ್ಷೀಣಿಸುತ್ತಿದೆ ಎಂದು ವಿಷಾದಿಸಿದರು. ಪ್ರತಿಯೊಬ್ಬರೂ ಧಾರ್ಮಿಕ ಆಚರಣೆ, ಆಧ್ಯಾತ್ಮಿಕ ಚಿಂತನೆಗಳನ್ನು ಮನದಲಿ ಪಠಿಸುವಂತಾಗಬೇಕು. ಪ್ರಸ್ತುತ ನಮ್ಮ ಆಲೋಚನೆಗಳು ಶ್ರೀಮಂತವಾಗಿರಬೇಕು. ಶರಣರ ಸಂದೇಶವನ್ನು ಪ್ರತಿ ಮನೆಯಲ್ಲೂ ಬಿತ್ತುವ ಕಾಯಕ ಆಗಬೇಕಿದೆ ಎಂದರು.

ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು. ಈ ವೇಳೆ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮಿಜಿ, ಸಿದ್ದಲಿಂಗ ಸ್ವಾಮೀಜಿ, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಪ್ರಕಾಶ್, ಬಸವೇಶ್ವರ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಸುಗಂಧರಾಜು, ಉಪಾಧ್ಯಕ್ಷ ಸಿದ್ದಲಿಂಗಸ್ವಾಮಿ, ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ರವಿ, ಮಹಾಸಭಾ ನಿರ್ದೇಶಕರಾದ ಕುಮಾರ್, ಚಂದ್ರಧರ್, ಶಿವಕುಮಾರ್, ತೋಂಟೇಶ್, ನಟರಾಜು, ಜ್ಞಾನೇಂದ್ರಮೂರ್ತಿ, ಕುಮಾರಸ್ವಾಮಿ, ಚೇತನ್ ಪಟೇಲ್, ಎಂ.ಬಿ. ಮಹೇಂದ್ರ ಕುಮಾರ್, ಉಪಸ್ಥಿತರಿದ್ದರು.

ಬಿಳಿಕೆರೆ ಸುತ್ತಮುತ್ತ ರಜನಿಕಾಂತ್ ಚಿತ್ರ ಜೈಲರ್–2 ಚಿತ್ರೀಕರಣ



ಮೈಸೂರು, ಜೂ.22– ಖ್ಯಾತ ತಮಿಳು ನಟ ರಜನಿಕಾಂತ್ ಅಭಿನಯದ ಜೈಲರ್–2 ಚಿತ್ರತಂಡ ಹುಣಸೂರಿನಲ್ಲಿ ಬೀಡು ಬಿಟ್ಟಿದೆ. ಕಳೆದ 3 ದಿನಗಳಿಂದ ಚಿತ್ರತಂಡ ತಾಲೂಕಿನ ಬಿಳಿಕೆರೆ ಕೆರೆ ಏರಿ, ಹುಲ್ಲೇನಹಳ್ಳಿ ಗೇಟ್ ಬಳಿಯ ಇಟ್ಟಿಗೆ ಕಾರ್ಖಾನೆ, ಕೆರೆ ಏರಿ ಮೇಲಿನ ಬಸವೇಶ್ವರ ದೇವಸ್ಥಾನದಲ್ಲಿ ಚಿತ್ರೀಕರಣ ನಡೆದಿದ್ದು, ಸಾರ್ವಜನಿಕರಿಗೆ ಕೆರೆ ಬಳಿಗೆ ಪ್ರವೇಶ ನಿಷೇಧಿಸಲಾಗಿದೆ.

ಭಾರೀ ಭದ್ರತೆಯಲ್ಲಿ ನಡೆಯುತ್ತಿರುವ ಚಿತ್ರೀಕರಣಕ್ಕೆ ನಟ ರಜನಿಕಾಂತ್ ಆಗಮಿಸುವ ವೇಳೆ ಅವರನ್ನು ನೋಡಲು ಅಭಿಮಾನಿಗಳು ನೆರೆದಿದ್ದರು. ರಸ್ತೆ ಬದಿಯಲ್ಲಿ ನೆರೆದಿರುವ ಜನರತ್ತ ಕೈಬೀಸಿ, ಕೈ ಮುಗಿದು ನಮಸ್ಕರಿಸುತ್ತಾ ತೆರಳುವ ರಜಿನಿಕಾಂತ್ ರನ್ನು ನೋಡಲು ನಿತ್ಯ ನೂರಾರು ಜನ ಜಮಾಯಿಸುತ್ತಿದ್ದಾರೆ.

ಇದೆ ಕೆರೆ ಬಳಿಯಲ್ಲಿ ಹಾಗೂ ಹುಲ್ಲೇನಹಳ್ಳಿ ಸುತ್ತಮುತ್ತ ಈ ಹಿಂದೆ ವರನಟ ಡಾ.ರಾಜ್ ಕುಮಾರ್ ಅಭಿನಯದ ಕಾಮನ ಬಿಲ್ಲು ಚಲನಚಿತ್ರದ ಶೂಟಿಂಗ್ ಕೂಡಾ ನಡೆದಿತ್ತು.

ರೈತರಿಗೆ ತಾಲೂಕು ಮಟ್ಟದ ತಾಂತ್ರಿಕ ಕಾರ್ಯಾಗಾರ

ಯುವಕರು ಕೃಷಿಯಲ್ಲಿ ತೊಡಗಬೇಕು: ಸಹಾಯಕ ಕೃಷಿ ನಿರ್ದೇಶಕ ರವಿ



ನಂಜನಗೂಡಲ್ಲಿ ತಾಲೂಕು ಮಟ್ಟದ ತಾಂತ್ರಿಕ ಕಾರ್ಯಾಗಾರ ನಡೆಯಿತು.

ನಂಜನಗೂಡು, ಜೂ.22– ಕೃಷಿ ಲಾಭದಾಯಕವಲ್ಲ ಎಂದು ರೈತರೇ ತಮ್ಮ ಮಕ್ಕಳನ್ನು ಕೃಷಿಯಿಂದ ವಿಮುಖರಾಗುವಂತೆ ಮಾಡುತ್ತಿದ್ದಾರೆ. ಆದ್ದರಿಂದ ಯುವಕರಿಗೆ ತರಬೇತಿ ನೀಡಿ ಕೃಷಿಯನ್ನು ಲಾಭದಾಯಕವಾಗಿಸಿ ಕೃಷಿಯಲ್ಲಿ ತೊಡಗುವಂತೆ ಉತ್ತೇಜನ ನೀಡಲು ರೈತ ಬಾಂಧವರಿಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ರವಿ ಹೇಳಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ಕೃಷಿ ಇಲಾಖೆ ವತಿಯಿಂದ ಆತ್ಮ ಯೋಜನೆಯಡಿ ಏರ್ಪಡಿಸಲಾಗಿದ್ದ ರೈತ ಬಾಂಧವರಿಗೆ ತಾಲೂಕು ಮಟ್ಟದ ತಾಂತ್ರಿಕ ಕಾರ್ಯಾಗಾರ ಹಾಗೂ RKVY ಯೋಜನೆಯಡಿ ರೈತರಿಗೆ ಹೊರಾಂಗಣ ತರಬೇತಿ ಮತ್ತು ಸುರಕ್ಷಿತ ಕೀಟನಾಶಕ ಬಳಕೆ ಬಗ್ಗೆ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಣ್ಣು ನೈಸರ್ಗಿಕ ಪರಿಸರದ ಒಂದು ಪ್ರಮುಖ ಅಂಶ. ಬೆಳೆಗಳಲ್ಲಿ ಉತ್ಪಾದಕತೆ ಹೆಚ್ಚಿಸಲು ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು. ಪ್ರಮುಖವಾಗಿ ಮಣ್ಣಿನಲ್ಲಿ ಖನಿಜ ಸಾವಯವ ವಸ್ತು ನೀರು, ಸಾರಜನಕ ಪೊಟ್ಯಾಷ್ ಗಂಧಕ, ಸತು, ಸಾವಯವ ಇಂಗಾಲ ಸೇರಿದಂತೆ ಮಣ್ಣಿನ ಲವಣಾಂಶಗಳನ್ನು ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ರೈತರು ತಮ್ಮ ಹಿಡುವಳಿ ಮಣ್ಣು ಮಾದರಿಯನ್ನು ಪರೀಕ್ಷೆ ಮಾಡಿಸಿ ಬೆಳೆಗಳನ್ನು ಬೆಳೆಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸುತ್ತೂರಿನ ಕೆವಿಕೆ ಕೇಂದ್ರದ ವಿಜ್ಞಾನಿ ಡಾ. ಜ್ಞಾನೇಶ್, ಮಣ್ಣು ಹಾಗೂ ನೀರಿನ ಮಹತ್ವ, ನೀರಿನಲ್ಲಿನ ಖನಿಜಾಂಶ ಹಾಗೂ PH (ರಸಸಾರ) ಪರೀಕ್ಷಿಸುವ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮುಖಾಂತರ ತಿಳಿಸಿಕೊಟ್ಟರು. ಅಲ್ಲದೇ ಸುರಕ್ಷಿತ ಕೀಟನಾಶಕ ಬಳಕೆ ಹಾಗೂ ವಿವಿಧ ಬೆಳೆಗಳ ಬೀಜೋಪಚಾರ ತಾಂತ್ರಿಕತೆಗಳನ್ನು ತಿಳಿಸಿದರು.

ಕೆವಿಕೆ ಸುತ್ತೂರು ಕೇಂದ್ರದ ಕೃಷಿ ವಿಜ್ಞಾನಿ ಡಾ.ಪ್ರಸಾದ್ ಮಾತನಾಡಿ, ಭತ್ತ ಹಾಗೂ ಮೆಕ್ಕೆಜೋಳ ಬೆಳೆಗಳಲ್ಲಿ ಕಂಡು ಬರುವ ವಿವಿಧ ಕೀಟ ಹಾಗೂ ರೋಗ ಭಾದೆಗಳು ಹಾಗೂ ಹತೋಟಿ ಕ್ರಮಗಳ ಬಗ್ಗೆ ತಾಂತ್ರಿಕ ಮಾಹಿತಿ ನೀಡಿದರು.

ಕೃಷಿ ವಿಜ್ಞಾನಿ ಡಾ.ಶ್ಯಾಮ್ ರಾಜ್ ಮಾತನಾಡಿ, ಮಣ್ಣು ಪರೀಕ್ಷೆ ಆಧಾರಿತ ರಸಗೊಬ್ಬರದ ಬಳಕೆ ಹಾಗೂ ಮಣ್ಣಿನ ಫಲವತ್ತತೆ ಕುರಿತು ವಿವರಿಸಿದರು. ಕಾರ್ಯಕ್ರಮದಲ್ಲಿ IFFCO ಸಂಸ್ಥೆಯಿಂದ DRONE ಪ್ರಾತ್ಯಕ್ಷಿಕೆ ನಡೆಸಲಾಯಿತು. IMT ಸಂಸ್ಥೆಯ ರಾಘವೇಂದ್ರ ಅವರು ಮಣ್ಣು ಹಾಗೂ ನೀರು ಪರೀಕ್ಷೆ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ಸಂಘದ ಮುಖಂಡರು, ರೈತ ಬಾಂಧವರು, ಕೃಷಿ ಸಖಿಯರು ಹಾಜರಿದ್ದರು.

ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ

ನಾಮಪತ್ರ ವಾಪಸ್ ಪಡೆದ ಜೆ.ಸುನೀತಾ ವೀರಪ್ಪಗೌಡ



ಸುನೀತಾ ವೀರಪ್ಪಗೌಡ ನಾಮಪತ್ರ ವಾಪಸ್ ಪಡೆದರು.

ತಿ.ನರಸೀಪುರ, ಜೂ.22– ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರ ಚುನಾವಣೆಗೆ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದ ಮಾಜಿ ಶಾಸಕಿ ಜೆ. ಸುನೀತಾ ವೀರಪ್ಪಗೌಡ ಅವರು ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡರಿಗೆ ಬೆಂಬಲ ಸೂಚಿಸಿ ನಾಮಪತ್ರ ಹಿಂಪಡೆದರು.

ಕಾಂಗ್ರೆಸ್ ಹೈಕಮಾಂಡ್ ಆದೇಶದ ಹಿನ್ನೆಲೆಯಲ್ಲಿ ಹಾಗೂ ಸಂಸದ ಸುನೀಲ್ ಬೋಸ್ ಸೂಚನೆ ಮೇರೆಗೆ ಕಾಂಗ್ರೆಸ್ ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಅವರು, ಸುನೀತಾ ವೀರಪ್ಪಗೌಡರನ್ನು ಭೇಟಿ ಮಾಡಿ ಮನವೊಲಿಸಿದ್ದರಿಂದ ಉಮೇದುವಾರಿಕೆ ವಾಪಸ್ ಪಡೆದು ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಸಿ.ಬಸವೇಗೌಡರನ್ನು ಬೆಂಬಲಿಸಲಿದ್ದಾರೆ ಎಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ತಿಳಿಸಿದ್ದಾರೆ.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರ ಚುನಾವಣೆ ಜೂ.26ರಂದು ನಡೆಯಲಿದ್ದು, ಕಾಂಗ್ರೆಸ್ ಪಕ್ಷದ ಅಧಿಕೃತ ಅಭ್ಯರ್ಥಿ ಸಿ.ಬಸವೇಗೌಡ ಸ್ಪರ್ಧಿಸಿದ್ದು, ಪಕ್ಷದ ಕಾರ್ಯಕರ್ತರು, ಸಹಕಾರ ಬಂಧುಗಳು ಡೆಲಿಗೇಟ್‌ಗಳನ್ನು ಮನವೊಲಿಸಿ ಅವರ ಗೆಲುವಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ನಾಮಪತ್ರ ಹಿಂಪಡೆಯುವ ವೇಳೆ ಮುಡಾ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಸಿ.ಬಸವೇಗೌಡ, ಯಾಚೇನಹಳ್ಳಿ ಸಹಕಾರ ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡ, ಪಿ ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ವಿಚಾರವಾದಿ ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಚಳವಳಿ ಸದ್ದು!

●ದೇಶದಲ್ಲಿ ಕಳೆದ 11 ವರ್ಷದಿಂದ ಅಘೋಷಿತ ತುರ್ತು ಪರಿಸ್ಥಿತಿ ಇದೆ ●ಜನರಿಗೆ ನಿಧಾನವಾಗಿ ವಿಷ ನೀಡುವುದರ ವಿರುದ್ಧ ಚಳವಳಿಗಳು ಗಟ್ಟಿಗೊಳ್ಳಬೇಕು; ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಕರೆ

- 70, 80ರ ದಶಕದ ಚಳವಳಿಗಳು ಪುಟಿದೇಳಬೇಕು
- ಚಳವಳಿಗೆ ಕೋಮುವಾದ ಅಡ್ಡ ಬರುತ್ತದೆ
- ಉಗ್ರರ ತಲೆ ತಂದು ಕದನ ವಿರಾಮ ಘೋಷಿಸಬೇಕಿತ್ತು
- ಶಿಕ್ಷಿತರಿಗೆ ಬುದ್ಧಿ ತುಂಬುವುದು ಸವಾಲಿನ ಸಂಗತಿ



ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ವಿಚಾರವಾದಿ ಪ್ರೊಕೆ.ರಾಮದಾಸ್ ನೆನಪಿರಲಿ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶ್ ಮೂರ್ತಿ ಅವರು ರಾಜಕಾರಣದಲ್ಲಿ ನೈತಿಕತೆ ಪುಸ್ತಕ ಬಿಡುಗಡೆ ಮಾಡಿದರು.

ಮೈಸೂರು, ಜೂ.22(ಬಿಎಲ್‌ಯು)– ದೇಶದಲ್ಲಿ ಕಳೆದ 11 ವರ್ಷಗಳಿಂದ ಅಘೋಷಿತ ತುರ್ತು ಪರಿಸ್ಥಿತಿ ಇದ್ದು, ಜನರಿಗೆ ನಿಧಾನವಾಗಿ ವಿಷ ನೀಡಲಾಗುತ್ತಿದೆ. ಇದನ್ನು ಸಮರ್ಥವಾಗಿ ಎದುರಿಸಲು ಚಳವಳಿಗಳು ಗಟ್ಟಿಯಾಗಿ ನಿಲ್ಲಬೇಕು ಎಂದು ಹಿರಿಯ ಪತ್ರಕರ್ತರೂ ಆದ ಪ್ರಗತಿಪರ ಚಿಂತಕ ದಿನೇಶ್ ಅಮೀನ್ ಮಟ್ಟು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ನಗರದ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ವಿಚಾರವಾದಿ ಪ್ರೊ.ಕೆ.ರಾಮದಾಸ್ ನೆನಪಿರಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಘೋಷಿತ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಆದರೆ ನಾವು ನಿರಾಶರಾಗದೆ ಚಳವಳಿಯನ್ನು ಶಕ್ತಿಗೊಳಿಸಿ ಹೋರಾಟ ಮಾಡಬೇಕು. ಇದರ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಇಂದಿರಾ ಗಾಂಧಿ ಪ್ರಧಾನಿಯಾಗಿದ್ದಾಗ ಜಾರಿಯಲ್ಲಿದ್ದ ತುರ್ತು ಪರಿಸ್ಥಿತಿಯಲ್ಲಿ ರಾಜಕೀಯ ಪಕ್ಷಗಳು ಮಾತ್ರ ಹೋರಾಟ ಮಾಡಲಿಲ್ಲ. ತುರ್ತು ಪರಿಸ್ಥಿತಿಯ ವಿರುದ್ಧ ಜನಾಕ್ರೋಶ ಕೂಡ ಇತ್ತು. ಅದೇ ರೀತಿಯ ಜನಾಕ್ರೋಶ ಈಗ ಪುಟಿದೇಳಬೇಕು ಎಂದು ದಿನೇಶ್ ಅಮಿನ್‌ಮಟ್ಟು ಕರೆ ನೀಡಿದರು.

ಕೋಮುವಾದ ದೊಡ್ಡ ಬೆದರಿಕೆ ಹುಟ್ಟು ಹಾಕಿದೆ. ಕೋಮುವಾದ ಎಂಬ ಭೂತ ವ್ಯಾಪಕವಾಗಿ ಆವರಿಸಿಕೊಂಡಿದೆ. ನಾವು ಸ್ವತಂತ್ರವಾಗಿ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಅಭಿವ್ಯಕ್ತ ಸ್ವಾತಂತ್ರ್ಯ ಇಲ್ಲದಂತಾಗಿದೆ. ಯಾವುದಾದರೊಂದು ಅಭಿಪ್ರಾಯ ವ್ಯಕ್ತಪಡಿಸಿದರೆ ನಮ್ಮ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತದೆ. ಒಂದು ವೇಳೆ ಇದರ ವಿರುದ್ಧ ಚಳವಳಿ ರೂಪುಗೊಂಡರೆ ಕೋಮುವಾದ ಅಡ್ಡ ಬಂದು ನಿಲ್ಲುತ್ತದೆ. ಇಂತಹ ಬೆಳವಣಿಗೆ ದೇಶದ ಜನರಲ್ಲಿ ಆತಂಕ ಉಂಟು ಮಾಡಿದೆ ಎಂದು ತಿಳಿಸಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರಿಂದ ಹತ್ಯಾಕಾಂಡ ಬಳಿಕ ನಡೆದ ಆಪರೇಷನ್ ಸಿಂಧೂರ ಪರಿಕಲ್ಪನೆಯೇ ಬೇರೆಯಾಯಿತು. ಈ ಕಾರ್ಯಚರಣೆ ಯಶಸ್ವಿಗೊಂಡಿತು ಎಂದು ಬೀಗಿದರು. ಆದರೆ ಪಹಲ್ಗಾಮ್‌ನಲ್ಲಿ ಮಹಿಳೆಯ ಪತಿ ಕೊಂದು ಕುಂಕುಮ ಅಳಿಸಿದವರು ಇಂದಿಗೂ ಸಿಗಲಿಲ್ಲ. ಉಗ್ರರ ತಲೆ ತಂದು ಯುದ್ಧದ ಕದನ ವಿರಾಮ ಘೋಷಣೆ ಆಗಬೇಕಿತ್ತು ಆದರೆ ಅದು ಸಾಧ್ಯವಾಗಲಿಲ್ಲ. ಕೇಂದ್ರ ಸರ್ಕಾರದ ಇಂತಹ ಹಲವು ನಿರ್ಧಾರಗಳಿಂದ ಜನರು ಆಕ್ರೋಶಗೊಂಡಿದ್ದಾರೆ. ಆದರೆ ಅದು ಯಾವಾಗ ಸ್ಫೋಟಗೊಳ್ಳುವುದೋ ಗೊತ್ತಿಲ್ಲ ಎಂದು ಹೇಳಿದರು.

1970ರಿಂದ 1980ರವರೆಗೆ ನಡೆದ ಚಳವಳಿಯಿಂದ ಬಹಳಷ್ಟು ಫಲ ದೊರೆಯಿತು. ಭೂ ಸುಧಾರಣಾ ಕಾಯ್ದೆ, ಮೀಸಲಾತಿ ಸೌಲಭ್ಯ, ಜಿಲ್ಲಾ ಪಂಚಾಯತ್ ವಿಕೇಂದ್ರೀಕರಣ, ಪ್ರಗತಿ ಪರ ಕಾನೂನು ರೂಪುಗೊಳ್ಳಲು ಕಾರಣವಾಯಿತು. ಅಂದು ನಡೆದ ಚಳುವಳಿಗಳು ಇದಕ್ಕೆ ಕಾರಣೀಭೂತವಾಯಿತು. ಸದ್ಯ ಚಳವಳಿಗಳು ವಿಶ್ರಮಿಸಿರಬಹುದು, ಆದರೆ ಅವು ಇನ್ನು ಗಟ್ಟಿಯಾಗಿದ್ದು, ಸೊರಗಿಲ್ಲ ಎಂದರು.

ರೈತ ಚಳವಳಿ ಮತ್ತು ದಲಿತ ಚಳವಳಿಗಳು ಪರಿಣಾಮಕಾರಿಯಾಗಿವೆ. ಆದರೆ ಅದನ್ನು ಮುಂದುವರೆಸಿಕೊಂಡು ಹೋಗುತ್ತಿಲ್ಲ. ಭೂ ಸುಧಾರಣಾ ಕಾಯ್ದೆಗೆ ನಿರಂತರವಾಗಿ ತಿದ್ದುಪಡಿ ಮಾಡಿ ಅಸ್ಥಿಪಂಜರವಾಗಿ ಮಾಡಿದ್ದು, ಅದರ ಮೂಲ ಆಶಯವೇ ಇಲ್ಲದಂತಾಗಿದೆ ಎಂದರು.

ಉದ್ಯೋಗಕ್ಕಾಗಿ ಮೀಸಲಾತಿ ಹೋರಾಟ ನಡೆಯುತ್ತಿದೆ. ಆದರೆ ಕೇವಲ ಶೇಕಡ 2 ರಷ್ಟಿರುವ ಉದ್ಯೋಗದಿಂದ ಎಷ್ಟು ಉದ್ಯೋಗ ನಿರೀಕ್ಷಿಸಲು ಸಾಧ್ಯ ಎಂದು ಪ್ರಶ್ನಿಸಿದರು.

ಪ್ರಸ್ತುತ ಶಿಕ್ಷಣ ಕ್ಷೇತ್ರದಲ್ಲಿ ಖಾಸಗೀಕರಣ ಮಹತ್ವ ಪಡೆಯುತ್ತಿದೆ. ಬಹಳಷ್ಟು ಖಾಸಗಿ ವಿಶ್ವ ವಿದ್ಯಾನಿಲಯಗಳು ಸ್ಥಾಪನೆಗೊಂಡು, ಶಿಕ್ಷಣ ಮಾಫಿಯಾ ಗಟ್ಟಿಗೊಳ್ಳುತ್ತಿದೆ. ಇದರಿಂದ ಮೀಸಲಾತಿ ದುರ್ಬಲಗೊಳ್ಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇಂದು ಶಿಕ್ಷಿತರಿಗೆ ಬುದ್ಧಿ ತುಂಬುವುದು ದೊಡ್ಡ ಸವಾಲಿನ ಸಂಗತಿ. ಖಾಲಿ ತಲೆಯಲ್ಲಿ ಏನನ್ನಾದರೂ ತುಂಬಿಸಬಹುದು. ಆದರೆ ಕಸ ತುಂಬಿರುವ ತಲೆಯಲ್ಲಿ ಏನು ತುಂಬಿಸಲು ಸಾಧ್ಯ ಎಂದು ಮರು ಪ್ರಶ್ನಿಸಿದ ದಿನೇಶ್ ಅಮಿನ್ ಮಟ್ಟು, ಶಿಕ್ಷಿತರ ತಲೆಯಲ್ಲಿರುವ ಕಸ ತೆಗೆದು ಬುದ್ಧಿ ತುಂಬುವುದು ದೊಡ್ಡ ಸವಾಲಾಗಿದೆ ಎಂದು ಹೇಳಿದರು.

ರೈತರಿಗೆ ಕನಿಷ್ಠ ಪ್ರಜ್ಞೆ ಇದೆ. ಆದರೆ ಮಧ್ಯಮ ವರ್ಗದವರಿಗೆ ಸಮಾಜದ ಆಗುಹೋಗುಗಳ ಬಗ್ಗೆ ಜಾಗೃತಿಯೇ ಇಲ್ಲ. ಅವರು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ. ವೈಚಾರಿಕತೆ ಮೂಡಿಸುವ ಇಂತಹ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುವುದಿಲ್ಲ. ಇಂತಹವರಿಗೆ ಬುದ್ಧಿ ಹೇಳುವುದು ಕಷ್ಟದ ಕೆಲಸ. ಈ ಹಿನ್ನೆಲೆಯಲ್ಲಿ 70 ಮತ್ತು 80ರ ದಶಕದ ಚಳವಳಿಗಳು ಪುನರುತ್ಥಾನ ಪಡೆಯಬೇಕು ಎಂದು ಸಲಹೆ ನೀಡಿದರು.

ಇಂದು ಅಬ್ದುಲ್ ನಜೀರ್ ಸಾಬ್‌ರಂತಹ ಮಾದರಿ ರಾಜಕಾರಣಿಗಳನ್ನು ಜನರು ಗೆಲ್ಲಿಸುವುದಿಲ್ಲ. ಜಮೀರ್ ಅಹಮ್ಮದ್ ನಂತಹ ಖ್ಯಾತನಾಮರು ಸುಲಭವಾಗಿ ಜಯ ಗಳಿಸುತ್ತಾರೆ. ಈ ಮೂಲಕ ಕೂಗು ಮಾರಿ ನಾಯಕರ ಕೈಗೆ ಹೋಗುತ್ತಿದೆ. ಇಂತಹ ಬೆಳವಣಿಗೆ ಮುಕ್ತವಾಗಿಸಲು ಚಳವಳಿ ಗಟ್ಟಿಯಾಗಿ ಮತ್ತೆ ರೂಪ ಪಡೆಯಬೇಕು ಎಂದು ದಿನೇಶ್ ಅಮಿನ್ ಮಟ್ಟು ಹೇಳಿದರು.

ಹಿರಿಯ ರಂಗಕರ್ಮಿ ಪ್ರಸನ್ನ ಹೆಗ್ಗೋಡು, ಹಿರಿಯ ಪತ್ರಕರ್ತ ಆರ್.ಪಿ.ವೆಂಕಟೇಶ ಮೂರ್ತಿ, ಚಿಂತಕ ನಾ.ದಿವಾಕರ್, ಕೃಷ್ಣ ಜನಮನ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪೊಲೀಸರು ಚಾರ್ಜ್‌ಶೀಟ್ ಹಾಕಿದರೆ; ನ್ಯಾಯಾಲಯಗಳು ಜಾಮೀನು ನೀಡುತ್ತವೆ!

ಪೊಲೀಸರು ಆರೋಪಿಗಳ ವಿರುದ್ಧ ಚಾರ್ಜ್‌ಶೀಟ್ ಹಾಕಿದರೆ, ನ್ಯಾಯಾಲಯಗಳು ಜಾಮೀನು ನೀಡುತ್ತವೆ. ಇಂತಹ ಬೆಳವಣಿಗೆಗಳ ಮಧ್ಯೆ ನ್ಯಾಯಾಧೀಶರ ಮನೆಯಲ್ಲಿ ಕಂತೆ ಕಂತೆ ನೋಟುಗಳು ಪತ್ತೆಯಾಗುತ್ತಿದೆ ಎಂದು ದಿನೇಶ್ ಅಮೀನ್ ಮಟ್ಟು, ನ್ಯಾಯಾಂಗ ವ್ಯವಸ್ಥೆಯಲ್ಲಿನ ಬೆಳವಣಿಗೆಗಳ ಬಗ್ಗೆ ಆತಂಕಿಸಿದರು.

ಸಾಮಾಜಿಕ ನ್ಯಾಯದ ಪರವಾದ ಬರಹಗಳು ಪತ್ರಿಕೆಗಳಲ್ಲಿ ಕೂಡ ಕಡಿಮೆಯಾಗುತ್ತಿದೆ. ಪತ್ರಿಕೆಗಳು ಹೊಸ ವಿನ್ಯಾಸ ಪಡೆದಂತೆ ಸುದ್ದಿಯ ವಿವರಣೆ ಬಹಳ ಕಡಿಮೆಯಾಗುತ್ತಿದೆ. ಈಗ ಒಂದು ಸುದ್ದಿಯಲ್ಲಿ ಕೇವಲ 250 ಅಕ್ಷರಗಳಿದ್ದರೆ ಹೆಚ್ಚು ಎಂದು ಪತ್ರಿಕೋದ್ಯಮದ ಈಗಿನ ಬೆಳವಣಿಗೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಅಧಿಕಾರ, ಹಣ, ಹೆಂಡ ಹಪಾಹಪಿಸುವ ಚಳವಳಿ ಅಗತ್ಯವಿಲ್ಲ

ಅಧಿಕಾರ, ಹಣ, ಹೆಂಡಕ್ಕಾಗಿ ಹಪಾಹಪಿಸುವ, ಜಾತಿ ವ್ಯಾಮೋಹವಿರುವ ರಾಜಕಾರಣದ ಚಳವಳಿ ದೂರವಾಗಿ ರಚನಾತ್ಮಕ ಚಳವಳಿ ರೂಪ ಪಡೆಯಬೇಕು ಎಂದು ಹಿರಿಯ ರಂಗಕರ್ಮಿ ಪ್ರಸನ್ನ ಹೆಗ್ಗೋಡು ಅಭಿಪ್ರಾಯಪಟ್ಟರು.

ನೈತಿಕ ಸಿಟ್ಟು ನಿವಾರಿಸುವ, ಪ್ರಶ್ನೆಯನ್ನೆ ಮಾಡದಂತಹ ಆತಂಕದ ಪರಿಸ್ಥಿತಿ ನಿರ್ಮಾಣ ಮಾಡಲಾಗಿದೆ. ನರೇಂದ್ರ ಮೋದಿ ಹುಟ್ಟು ಹಾಕಿರುವ ಯಂತ್ರ ನಾಗರಿಕತೆಯ ರಾಕ್ಷಸತನವನ್ನು ಮಣಿಸಬೇಕು. ಇದನ್ನು ಸಾಕಾರಗೊಳಿಸಲು ಚಳವಳಿಗಳು ಗಟ್ಟಿಯಾಗಿ ನಿಲ್ಲಬೇಕು ಎಂದು ಪ್ರಸನ್ನ ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಿಎನ್‌ಎ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕುಬೇರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕುಬೇರಾ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬುಲೆಟ್ (ಕ) + ಭಗೀರಥ (ಕ)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶಾಲಾ ಮಕ್ಕಳಿಗೆ ಮುಖಚರ್ಯೆ ಆಧಾರಿತ ಇ–ಹಾಜರಾತಿ ಕಡ್ಡಾಯ!



ಬೆಂಗಳೂರು, ಜೂ.22– ಪ್ರಸಕ್ತ ವರ್ಷದಿಂದ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹೆಸರು ಕೂಗಿ ಹಾಜರಾತಿ ಪಡೆಯುವ ಬದಲಾಗಿ, ಶಿಕ್ಷಕರು ಮೊಬೈಲ್‌ನಲ್ಲಿ ವಿದ್ಯಾರ್ಥಿಗಳ ಫೋಟೋ ಕ್ಲಿಕ್ಕಿಸಿಕೊಳ್ಳುವ ಮೂಲಕ ಹಾಜರಾತಿ ದಾಖಲಿಸಿಕೊಳ್ಳಲಿದ್ದಾರೆ.

'ನಿರಂತರ' ಯೋಜನೆಯಡಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಸೇರಿ 52,686 ಶಾಲೆಗಳ 52 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಹಾಜರಾತಿಯನ್ನು ಕೃತಕ ಬುದ್ಧಿಮತ್ತೆ ಚಾಲಿತ, ಮುಖ ಚಹರೆ ಗುರುತು ಆಧಾರಿತವಾಗಿ (ಎಐ ಫೇಶಿಯಲ್ ರಿಕಗ್ನಿಷನ್) ತೆಗೆದುಕೊಳ್ಳಲಾಗುತ್ತದೆ.

ಸುಮಾರು 5 ಕೋಟಿ ವೆಚ್ಚದ ಈ ಯೋಜನೆಯನ್ನು ಕರ್ನಾಟಕ ಸ್ಟೇಟ್ ಡೇಟಾ ಸೆಂಟರ್ (ಕೆಎಸ್‌ಡಿಸಿ) ಮೂಲಕ ನಿರ್ವಹಣೆ ಮಾಡಲಾಗುತ್ತದೆ. ಇದಕ್ಕಾಗಿ ಸಾಫ್ಟ್‌ವೇರ್ ಕೂಡ ಸಿದ್ಧಪಡಿಸಲಾಗುತ್ತಿದೆ. ಇದು ಗರಿಷ್ಠ ಗೌಪ್ಯತೆ ಮತ್ತು ಸುರಕ್ಷತೆ ಕಾಪಾಡುತ್ತದೆ. ಪ್ರಸಕ್ತ ವರ್ಷದಿಂದಲೇ ಇ–ಹಾಜರಾತಿ ಜಾರಿಗೆ ಬರಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶದಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ, ನಕಲಿ ದಾಖಲಾತಿ ತೋರಿಸಿ ಸರ್ಕಾರದ ವಿವಿಧ ಸೌಲಭ್ಯ ಪಡೆಯುತ್ತಿರುವ ಶಾಲೆಗಳ ಕಳ್ಳಾಟಕ್ಕೆ ತಡೆ ಹಾಕಲು ಮುಂದಾಗಿರುವ ಶಿಕ್ಷಣ ಇಲಾಖೆ, 'ಇ–ಹಾಜರಾತಿ' ಕಡ್ಡಾಯದತ್ತ ಹೆಜ್ಜೆ ಇಟ್ಟಿದೆ. ಇದೇ ಶೈಕ್ಷಣಿಕ ಸಾಲಿನಿಂದಲೇ ಸರ್ಕಾರಿ ಹಾಗೂ ಸರ್ಕಾರದ ಅನುದಾನ ಪಡೆಯುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ 'ಇ–ಹಾಜರಾತಿ' ಕಡ್ಡಾಯಗೊಳಿಸುವ ಆದೇಶವನ್ನೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಮಕ್ಕಳ ಮುಖಚರ್ಯೆ ಗುರುತಿಸುವ ಮೂಲಕ ಇ–ಹಾಜರಾತಿ ದಾಖಲಿಸುವ 'ನಿರಂತರ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಾಗಿ ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ ಅವರನ್ನು ಯೋಜನೆಯ ಅನುಷ್ಠಾನಾಧಿಕಾರಿಯಾಗಿ ನೇಮಿಸಿದೆ.

ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಕೃತಕ ಬುದ್ಧಿಮತ್ತೆ ಆಧಾರಿತ ಮೊಬೈಲ್ ಹಾಗೂ ಇತರೆ ಪರಿಕರಗಳನ್ನು ರಾಜ್ಯದ 52,686 ಶಾಲೆಗಳಲ್ಲಿ ಅಳವಡಿಸಲು 5 ಕೋಟಿ ಅನುದಾನ ನೀಡಲಾಗಿದೆ ಯೋಜನೆಯ ಅನುಷ್ಠಾನಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ನಿಯಮಗಳ ಪ್ರಕಾರ ಟೆಂಡರ್ ಆಹ್ವಾನಿಸುವ ಅಧಿಕಾರವನ್ನು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರಿಗೆ ನೀಡಲಾಗಿದೆ.

ಹಲವು ಅಕ್ರಮಗಳಿಗೆ ತಡೆ ಸರ್ಕಾರಿ ಶಾಲೆ ಮಕ್ಕಳಿಗೆ ಸರ್ಕಾರ ಉಚಿತ ಪಠ್ಯಪುಸ್ತಕ, ಸಮವಸ್ತ್ರ ಶೂ, ಮಧ್ಯಾಹ್ನದ ಬಿಸಿಯೂಟ, ಕ್ಷೀರ ಭಾಗ್ಯ ಯೋಜನೆ ಅಡಿ ಹಾಲು ವಿತರಣೆ, ವಾರಕ್ಕೆ ಆರು ದಿನಗಳು ಮೊಟ್ಟೆ ಬಾಳೆ ಹಣ್ಣು ನೀಡುತ್ತಿದೆ. ಅದಕ್ಕಾಗಿ ಪ್ರತಿ ವರ್ಷ 4 ಸಾವಿರ ಕೋಟಿಗೂ ಅಧಿಕ ಮೊತ್ತ ವೆಚ್ಚ ಮಾಡಲಾಗುತ್ತಿದೆ. ಕೆಲ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇದ್ದರೂ, ಹೆಚ್ಚು ತೋರಿಸಿಕೊಂಡು ಯೋಜನೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬ ಆರೋಪಗಳು ಎದುರಾಗಿದ್ದವು.

ಯೋಗ ದೈಹಿಕ ವ್ಯಾಯಾಮ ಮಾತ್ರವಲ್ಲ, ನಮ್ಮ ಸಂಸ್ಕೃತಿ ಕೂಡ

ಯೋಗ ಸಮ್ಮೇಳನದಲ್ಲಿ ರಾಜೀವ್ ಗಾಂಧಿ ವಿಜ್ಞಾನ ವಿವಿ ಉಪಕುಲಪತಿ ಡಾ.ಬಿ.ಸಿ.ಭಗವಾನ್ ಅಭಿಪ್ರಾಯ



ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟದ ವತಿಯಿಂದ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ದ್ವಿತೀಯ ಯೋಗ ಸಮ್ಮೇಳನವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಬಿ.ಸಿ.ಭಗವಾನ್ ಉದ್ಘಾಟಿಸಿದರು.

ಮೈಸೂರು, ಜೂ.22(ಜಿಎ)–ಯೋಗ ಕೇವಲ ದೈಹಿಕ ವ್ಯಾಯಾಮ ಎಂದು ಹೇಳಲಾಗುತ್ತದೆ. ಆದರೆ ಯೋಗ ನಮ್ಮ ಸಂಸ್ಕೃತಿಯಾಗಿ ಬೆಳೆದಿದೆ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಉಪ ಕುಲಪತಿ ಡಾ.ಬಿ.ಸಿ.ಭಗವಾನ್ ಅಭಿಪ್ರಾಯಪಟ್ಟಿದ್ದಾರೆ.

ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟದ ವತಿಯಿಂದ ಮೈಸೂರಿನ ಕಲಾಮಂದಿರದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ದ್ವಿತೀಯ ಯೋಗ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯೋಗ ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆದಿದೆ. ಜೊತೆಗೆ ನಮ್ಮ ಜೀವನ ಅಭ್ಯಾಸದ ಶೈಲಿ ಆಗಿದ್ದು, ಆರೋಗ್ಯ ಕಾಪಾಡಿಕೊಳ್ಳಲು, ರಕ್ತ ಪರಿಚಲನೆ, ಒತ್ತಡ ಸಮತೋಲನಗೊಳಿಸಿಕೊಳ್ಳಲು ಮತ್ತು ಸಮಾಜದ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ ಎಂದರು.

ಈ ಹಿಂದೆ ಯೋಗ ಎಂಬುದು ದೈಹಿಕ ವ್ಯಾಯಾಮ ಎಂದು ತಿಳಿದುಕೊಳ್ಳಲಾಗಿತ್ತು. ಆದರೆ, ಸಾವಿರಾರು ವರ್ಷಗಳ ಹಿಂದೆ ಯೋಗದ ಬಗ್ಗೆ ಸಾಕಷ್ಟು ಮಾಹಿತಿ ಇದ್ದರೂ ಅದರ ಅರಿವಿನ ಕೊರತೆ ಹಿನ್ನೆಲೆಯಲ್ಲಿ ಪ್ರಾಮುಖ್ಯತೆ ತಿಳಿದಿರಲಿಲ್ಲ. ಇಂದು ಯೋಗ ನಮ್ಮ ಸಂಸ್ಕೃತಿ ಆಗಿ ಬೆಳೆಯುತ್ತಿದೆ. ಅಂತರರಾಷ್ಟ್ರೀಯ ಯೋಗ ದಿನವನ್ನು 180ಕ್ಕೂ ಹೆಚ್ಚು ದೇಶದಲ್ಲಿ ಆಚರಿಸಲಾಗಿದೆ. ಹಾಗೇ ನಮ್ಮ ರಾಜೀವ್ ಗಾಂಧಿ ವಿವಿ ಅಡಿ ಬರುವ ಎಲ್ಲಾ ಸಂಸ್ಥೆಗಳಿಗೂ ನಿರ್ದೇಶನ ನೀಡಿ ಯೋಗ ಪ್ರದರ್ಶನ ಮಾಡಲಾಯಿತು ಎಂದು ತಿಳಿಸಿದರು.

1830ರ ಸಂದರ್ಭದಲ್ಲಿ ಬ್ರಿಟಿಷರು ಭಾರತವನ್ನು ಒಡೆದು ಸೋಲಿಸಲು ಸಾಧ್ಯವಿಲ್ಲ ಎಂದು ಹೇಳಿಕೆ ನೀಡಿದರು. ಅದರಂತೆ ಬ್ರಿಟಿಷರು ಭಾರತದಲ್ಲಿ ಆಳ್ವಿಕೆ ಮಾಡಿದರೂ ಹೊರತು ಗೆಲ್ಲಲಿಲ್ಲ. ಬದಲಾಗಿ ನಮ್ಮ ಶಿಕ್ಷಣ ನೀತಿಯನ್ನು ಬದಲಿಸಿ, ಪಾಶ್ಚಿಮಾತ್ಯ ಶಿಕ್ಷಣ ನೀತಿ ಅಳವಡಿಸಿದರೆ ಭಾರತದಲ್ಲಿ ಬದಲಾವಣೆ ತರಬಹುದು ಎಂದು ಉದ್ದೇಶಿಸಿ, ಅವರ ಶಿಕ್ಷಣ ನೀತಿ ಅಳವಡಿಸಿದ್ದಾರೆ ಎಂದು ಅವರು ಹೇಳಿದರು.

ಬ್ರಿಟಿಷರ ಆಲೋಚನೆಯಂತೆ ಇಂದಿನ ಪೀಳಿಗೆಯೂ ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿದ್ದಾರೆ. ಸಾಹಿತ್ಯ, ಸಂಸ್ಕೃತಿ ಬಗ್ಗೆ ತಿಳಿದುಕೊಳ್ಳುತ್ತಿಲ್ಲ. ಬದಲಾಗಿ ಶಾರ್ಟ್ ವಿಡಿಯೋ ನೋಡಿ ಕ್ಷಣ ಕಾಲಕ್ಕೆ ಬೆರೆತುಕೊಳ್ಳುತ್ತಿದ್ದಾರೆ. ಅವರಿಗೆ ಉತ್ತಮ ಶಿಕ್ಷಣ ನೀಡಿ, ಅಲೋಪತಿ ಮಾತ್ರವಲ್ಲದೇ ಆಯುರ್ವೇದ ಪದ್ಧತಿಯ ಶಿಕ್ಷಣ ನೀಡಬೇಕಿದೆ. ಮಾದಕ ದ್ರವ್ಯಗಳ, ಮದ್ಯ ಸೇವನೆಯಿಂದ ವಿದ್ಯಾರ್ಥಿಗಳು ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಅವರನ್ನು ಸರಿ ದಾರಿಗೆ ತರಬೇಕಾದ ಕೆಲಸ ಮಾಡಬೇಕಿದೆ. ಆ ನಿಟ್ಟಿನಲ್ಲಿ ರಾಜೀವ್ ಗಾಂಧಿ ವಿವಿ ವತಿಯಿಂದ ಡ್ರಗ್ಸ್ ಫ್ರೀ ಕ್ಯಾಂಪಸ್ ಮಾಡಲಾಗುತ್ತದೆ ಎಂದು ತಿಳಿಸಿದರು.

ಸಮ್ಮೇಳನಕ್ಕೂ ಮುನ್ನ ಸಮ್ಮೇಳನದ ಸರ್ವಾಧ್ಯಕ್ಷರಾದ ವೇದ ವಿಜ್ಞಾನ ಗುರುಕುಲಂನ ಅಧ್ಯಕ್ಷರೂ ಆದ ಪ್ರೊ.ರಾಮಚಂದ್ರ ಜಿ.ಭಟ್ ಕೋಟೆ ಮನೆ ಅವರನ್ನು ಬೆಳ್ಳಿ ರಥದ ಮೂಲಕ ಮಂಗಳವಾದ್ಯ, ಕಲಾತಂಡಗಳೊಂದಿಗೆ ಹಳೆ ಡಿಸಿ ಕಚೇರಿಯಿಂದ ಕಲಾಮಂದಿರವರೆಗೂ ಮೆರವಣಿಗೆ ಮೂಲಕ ಬರಮಾಡಿಕೊಂಡು ಪೂರ್ಣಕುಂಭ ಸ್ವಾಗತ ನೀಡಲಾಯಿತು.

ಈ ಸಂದರ್ಭದಲ್ಲಿ ಶಾಸಕರಾದ ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವ ನಾರಾಯಣ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಉದ್ಯಮಿ ಕವೀಶ್‌ಗೌಡ, ಡಾ.ಲೀಲಾ ಪ್ರಕಾಶ್, ಸಮ್ಮೇಳನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಪ್ರಧಾನ ಸಂಚಾಲಕ ಎನ್.ಅನಂತು, ಉಪಾಧ್ಯಕ್ಷ ಬಿ.ಪಿ. ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ತಂತ್ರಾಂಶ ಅಳವಡಿಕೆ: ತಾತ್ಕಾಲಿಕವಾಗಿ ಅಂಚೆ ವಹಿವಾಟುಗಳು ಸ್ಥಗಿತ

ಮೈಸೂರು,ಜೂ.22– ಭಾರತೀಯ ಅಂಚೆ ಇಲಾಖೆ ಆದೇಶದಂತೆ ಜೂನ್ 23 ರಂದು ನಂಜನಗೂಡು ಪ್ರಧಾನ ಅಂಚೆ ಕಚೇರಿ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪ ಹಾಗೂ ಶಾಖಾ ಅಂಚೆ ಕಚೇರಿಗಳಲ್ಲಿ ಹಾಗೂ ಜೂನ್ 26 ರಂದು ಕೊಳ್ಳೆಗಾಲ ಅಂಚೆ ಕಚೇರಿಗಳಲ್ಲಿ ಹೊಸ ತಂತ್ರಾಂಶ (apt 2.0) ಅಳವಡಿಕೆ ಜಾರಿಯಾಗುತ್ತದೆ. ಈ ಹಿನ್ನೆಲೆ ಹೊಸ ತಂತ್ರಾಂಶ ಜಾರಿಯಾಗುತ್ತಿರುವುದರಿಂದ, ಅದರ ಪೂರ್ವ ಸಿದ್ಧತೆಗಾಗಿ 21 ರಂದು ನಂಜನಗೂಡು ಪ್ರಧಾನ ಅಂಚೆ ಕಚೇರಿ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪ ಹಾಗೂ ಶಾಖಾ ಅಂಚೆ ಕಚೇರಿಗಳಲ್ಲಿ ಹಾಗೂ ಜೂನ್ 24 ಹಾಗೂ 25 ರಂದು ಕೊಳ್ಳೇಗಾಲ ಪ್ರಧಾನ ಅಂಚೆ ಕಚೇರಿ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉಪ ಹಾಗೂ ಶಾಖಾ ಅಂಚೆ ಕಚೇರಿಗಳಲ್ಲಿ ಎಲ್ಲಾ ರೀತಿಯ ಅಂಚೆ ವಹಿವಾಟುಗಳು ಸ್ಥಗಿತಗೊಳ್ಳಲಿದೆ. ಆದ್ದರಿಂದ ಸಾರ್ವಜನಿಕರು ಸಹಕರಿಸಬೇಕೆಂದು ನಂಜನಗೂಡು ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ – ವಿದೇಶ

ಇರಾನ್ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ: 865 ಮಂದಿ ಸಾವು

3,396 ಜನರಿಗೆ ಗಾಯ; ಮಾನವ ಹಕ್ಕು ಸಂಘಟನೆ ವರದಿ

ದುಬೈ, ಜೂ.22– ಇರಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ 865 ಜನರು ಮೃತಪಟ್ಟು 3,396 ಜನರು ಗಾಯಗೊಂಡಿದ್ದಾರೆ ಎಂದು ಮಾನವ ಹಕ್ಕುಗಳ ಗುಂಪು ಭಾನುವಾರ ತಿಳಿಸಿದೆ. ಅಮೆರಿಕದ ವಾಷಿಂಗ್ಟನ್ ಮೂಲದ ಮಾನವ ಹಕ್ಕುಗಳ ಕಾರ್ಯಕರ್ತರ ಗುಂಪು ಈ ಅಂಕಿಅಂಶಗಳನ್ನು ನೀಡಿದ್ದು, ಇದು ಇಡೀ ಇರಾನ್ ಅನ್ನು ಒಳಗೊಂಡಿದೆ. 363 ನಾಗರಿಕರು ಮತ್ತು 215 ಭದ್ರತಾ ಪಡೆ ಸಿಬ್ಬಂದಿ ಮೃತಪಟ್ಟಿದ್ದಾರೆ. ಎಂದು ಗುರುತಿಸಲಾಗಿದೆ.

ಮಹ್ಸಾ ಅಮಿನಿಯ ಸಾವಿನ ವಿರುದ್ಧ 2022 ರಲ್ಲಿ ನಡೆದ ಪ್ರತಿಭಟನೆಗಳ ಸಂದರ್ಭದಲ್ಲಿ ಸಾವುನೋವು ಅಂಕಿಅಂಶಗಳನ್ನು ಒದಗಿಸಿದ ಮಾನವ ಹಕ್ಕುಗಳ ಕಾರ್ಯಕರ್ತರು, ಇಸ್ಲಾಮಿಕ್ ಗಣರಾಜ್ಯದ ಸ್ಥಳೀಯ ವರದಿಗಳನ್ನು, ದೇಶದಲ್ಲಿ ಅಭಿವೃದ್ಧಿಪಡಿಸಿದ ಮೂಲಗಳ ಜಾಲದೊಂದಿಗೆ ಪರಿಶೀಲಿಸುತ್ತಾರೆ.

ಸಂಘರ್ಷದ ಸಮಯದಲ್ಲಿ ಇರಾನ್ ನಿಯಮಿತ ಸಾವಿನ ಸಂಖ್ಯೆಯನ್ನು ನೀಡುತ್ತಿಲ್ಲ. ಇರಾನ್‌ನ ಆರೋಗ್ಯ ಸಚಿವಾಲಯವು ಇಸ್ರೇಲ್ ದಾಳಿಯಲ್ಲಿ ಸುಮಾರು 400 ಇರಾನಿಯನ್ನರು ಮೃತಪಟ್ಟು 3,056 ಮಂದಿ ಗಾಯಗೊಂಡಿದ್ದಾರೆ ಎಂದು ಹೇಳಿದೆ.

ರೋಡ್ ಶೋ ವೇಳೆ ಜಗನ್ ಮೋಹನ್ ರೆಡ್ಡಿ ಕಾರು ತಲೆ ಮೇಲೆ ಹರಿದು ವ್ಯಕ್ತಿ ಸಾವು!

ಗುಂಟೂರು, ಜೂ.22– ಆಂಧ್ರ ಪ್ರದೇಶದ ಗುಂಟೂರಿನಲ್ಲಿ ಬೆಚ್ಚಿ ಬೀಳಿಸುವ ಘಟನೆಯೊಂದು ನಡೆದಿದ್ದು ಮಾಜಿ ಸಿಎಂ ಹಾಗೂ ವೈಎಸ್‌ಆರ್ ಕಾಂಗ್ರೆಸ್ ಮುಖ್ಯಸ್ಥ ಜಗನ ಮೋಹನ್ ರೆಡ್ಡಿ ರೋಡ್ ಶೋ ವೇಳೆ ವ್ಯಕ್ತಿಯೋರ್ವ ಅವರ ಕಾರಿನ ಚಕ್ರಕ್ಕೆ ಸಿಲುಕಿ ಸಾವನ್ನಪ್ಪಿದ್ದಾನೆ.

ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್.ಜಗನ್ ಅವರು ಪಲ್ನಾಡು ಜಿಲ್ಲೆಗೆ ಭೇಟಿ ನೀಡುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಗುಂಟೂರು ಜಿಲ್ಲೆಯ ಎಟುಕುರು ಬಳಿಯ ಲಾಲ್‌ಪುರಂ ಹೆದ್ದಾರಿಯಲ್ಲಿ ವೈಎಸ್‌ಆರ್‌ಸಿಪಿ ಆಯೋಜಿಸಿದ್ದ ರ‍್ಯಾಲಿ ವೇಳೆ ಜಗನ್ ಪ್ರಯಾಣಿಸುತ್ತಿದ್ದ ಕಾರು ವ್ಯಕ್ತಿ ಮೇಲೆ ಹರಿದಿದ್ದು ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಜಗನ್ ತಮ್ಮ ಬೆಂಗಾವಲು ಪಡೆಯೊಂದಿಗೆ ಬರುತ್ತಿದ್ದಾಗ ಅವರ ಕಾರನ್ನು ಅವರ ಅಭಿಮಾನಿಗಳು ತಡೆದಿದ್ದು ಈ ವೇಳೆ ಓರ್ವ ವ್ಯಕ್ತಿ ಜಗನ್ ಇದ್ದ ಕಾರಿನ ಕೆಳಗೆ ಬಿದ್ದಿದ್ದಾನೆ. ಇದನ್ನು ಗಮನಿಸದ ಜಗನ್ ಕಾರು ಚಾಲಕ ಕಾರನ್ನು ಮುಂದಕ್ಕೆ ಚಲಾಯಿಸಿದ್ದು ಈ ವೇಳೆ ಕಾರಿನ ಚಕ್ರ ವ್ಯಕ್ತಿಯ ಕುತ್ತಿಗೆ ಮೇಲೆ ಹರಿದಿದೆ. ಈ ವೇಳೆ ಜನ ಕೂಗಿದಾಗ ಚಾಲಕ ಕಾರು ನಿಲ್ಲಿಸಿದ್ದಾನೆ. ಕೂಡಲೇ ಜನರು ಗಂಭೀರವಾಗಿ ಗಾಯಗೊಂಡ ಆ ವ್ಯಕ್ತಿಯನ್ನು ಸ್ಥಳೀಯರು ಗುಂಟೂರು ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಆದರೆ ಆ ವ್ಯಕ್ತಿ ಚಿಕಿತ್ಸೆಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ನೀವು ಯುದ್ಧ ಆರಂಭಿಸಿದ್ದೀರಿ! ಅಂತ್ಯ ನಾವು ಹಾಡುತ್ತೇವೆ!!

ಅಮೆರಿಕಾ ದಾಳಿ ಬೆನ್ನಲ್ಲೇ ಟ್ರಂಪ್‌ಗೆ ಇರಾನ್ ಎಚ್ಚರಿಕೆ


ಟೆಹರಾನ್, ಜೂ.22– ಇಸ್ರೇಲ್–ಇರಾನ್ ನಡುವಿನ ಸಂಘರ್ಷದಲ್ಲಿ ಇಸ್ರೇಲ್‌ಗೆ ಬೆಂಬಲ ವ್ಯಕ್ತಪಡಿಸಿ ಇರಾನ್ ಮೇಲೆ ದಾಳಿ ನಡೆಸುವ ಮೂಲಕ ಸಂಘರ್ಷಕ್ಕೆ ಅಮೆರಿಕಾ ಅಧಿಕೃತ ಎಂಟ್ರಿ ಕೊಟ್ಟಿದ್ದು, ಅಮೆರಿಕಾ ದಾಳಿಗೆ ಇರಾನ್ ತೀವ್ರವಾಗಿ ಕಿಡಿಕಾರಿದೆ. ಅಮೆರಿಕದ ಈ ದಾಳಿಯಲ್ಲಿ, ಫೋರ್ಡೋ, ನಟಾಂಜ್ ಮತ್ತು ಇಸ್ಫಹಾನ್ ಪರಮಾಣು ಸ್ಥಾವರಗಳು ಸಂಪೂರ್ಣವಾಗಿ ನಾಶವಾಗಿವೆ ಎಂದು ಹೇಳಲಾಗುತ್ತಿದ್ದು, ಅಮೆರಿಕಾದ ಈ ದಾಳಿಗಳನ್ನು ಇರಾನ್ ದೃಢಪಡಿಸಿದೆ.

ಅಲ್ಲದೆ, ಇರಾನ್ ಡೊನಾಲ್ಡ್ ಟ್ರಂಪ್‌ಗೆ ನೇರ ಎಚ್ಚರಿಕೆ ನೀಡಿರುವ ಇರಾನ್, ಯುದ್ಧ ನೀವು ಪ್ರಾರಂಭಿಸಿದ್ದೀರಿ, ಈಗ ನಾವು ಅದನ್ನು ಕೊನೆಗೊಳಿಸುತ್ತೇವೆ ಎಂದು ಖಮೇನಿ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಎಚ್ಚರಿಕೆ ನೀಡಿದ್ದಾರೆ.

ಇರಾನ್‌ನ ಸರ್ಕಾರಿ ದೂರದರ್ಶನ ಅಮೆರಿಕಾಗೆ ನೇರ ಎಚ್ಚರಿಕೆ ನೀಡಿದ್ದು, ಡೊನಾಲ್ಡ್ ಟ್ರಂಪ್‌ಗೆ ನೀವೇ ಅದನ್ನು ಪ್ರಾರಂಭಿಸಿದ್ದೀರಿ, ಈಗ ನಾವು ಅದನ್ನು ಕೊನೆಗೊಳಿಸುತ್ತೇವೆ ಎಂದು ಎಚ್ಚರಿಕೆ ಕೊಟ್ಟಿದೆ.

ಅಮೆರಿಕಾ ದಾಳಿ ಕುರಿತು ಪ್ರತಿಕ್ರಿಯೆ ನೀಡಿರುವ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ, ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದ್ದಾರೆ.

ಇರಾನ್ ಅಧ್ಯಕ್ಷ ಮಸೌದ್ ಪೆಜೆಷ್ಕಿಯಾನ್ ಜೊತೆ ಪ್ರಧಾನಿ ಮೋದಿ ಮಾತುಕತೆ




ನವದೆಹಲಿ, ಜೂ.22– ಪ್ರಧಾನಿ ನರೇಂದ್ರ ಮೋದಿ ಭಾನುವಾರ ಇರಾನ್ ಅಧ್ಯಕ್ಷ ಮಸೌದ್ ಪೆಜೆಷ್ಕಿಯಾನ್ ಅವರೊಂದಿಗೆ ಮಾತನಾಡಿ, ಮಾತುಕತೆ ಮತ್ತು ರಾಜ ತಾಂತ್ರಿಕತೆ ಮೂಲಕ ಇಸ್ರೇಲ್ ಜೊತೆಗಿನ ಸಂಘರ್ಷವನ್ನು ತಕ್ಷಣವೇ ಕಡಿಮೆ ಮಾಡುವಂತೆ ಸಲಹೆ ನೀಡಿದ್ದಾರೆ.

ಇರಾನ್‌ನಲ್ಲಿನ ಮೂರು ಅಣ್ವಸ್ತ್ರ ನೆಲೆಗಳ ಮೇಲೆ ಅಮೆರಿಕ ಬಾಂಬ್ ದಾಳಿ ನಡೆಸಿದ ಕೆಲವೇ ಗಂಟೆಗಳ ನಂತರ ಮೋದಿ ಮತ್ತು ಪೆಜೆಷ್ಕಿಯಾನ್ ನಡುವೆ ಫೋನ್ ಸಂಭಾಷಣೆ ನಡೆದಿದೆ.

ಇರಾನಿನ ಪರಮಾಣು ಸೌಲಭ್ಯಗಳ ಮೇಲೆ ಅಮೆರಿಕ ದಾಳಿಯ ನಂತರ ಇರಾನ್ ಅಧ್ಯಕ್ಷ ಪೆಜೆಷ್ಕಿಯಾನ್ ಅವರಿಂದ ಕರೆ ಬಂದಿತು. ಅವರು ಪ್ರಧಾನಿ ಮೋದಿ ಅವರಿಗೆ ಪರಿಸ್ಥಿತಿಯ ಬಗ್ಗೆ ವಿವರಿಸಿದರು. ಈ ಕರೆ 45 ನಿಮಿಷಗಳ ಕಾಲ ನಡೆಯಿತು. ಪ್ರಾದೇಶಿಕ ಶಾಂತಿ, ಭದ್ರತೆ ಮತ್ತು ಸ್ಥಿರತೆಯನ್ನು ಉತ್ತೇಜಿಸುವಲ್ಲಿ ಭಾರತವನ್ನು ಸ್ನೇಹಿತ ಮತ್ತು ಪಾಲುದಾರ ಎಂದು ಬಣ್ಣಿಸಿದ ಅವರು, ಭಾರತದ ನಿಲುವು ಮತ್ತು ಉದ್ವಿಗ್ನತೆ ನಿವಾರಣೆ, ಸಂವಾದ ಮತ್ತು ರಾಜತಾಂತ್ರಿಕತೆಗೆ ಕರೆ ನೀಡಿದ್ದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದರು ಎಂದು ಮೂಲಗಳು ತಿಳಿಸಿವೆ.

ಇಸ್ರೇಲ್ ಮೇಲೆ ಬ್ಯಾಲಿಸ್ಟಿಕ್ ಮಿಸೈಲ್‌ಗಳ ಸುರಿಮಳೆ; 23ಕ್ಕೂ ಹೆಚ್ಚು ಜನರಿಗೆ ಗಾಯ..!



ಟೆಹರಾನ್, ಜೂ.22– ತನ್ನ ಅಣ್ವಸ್ತ್ರ ಕೇಂದ್ರಗಳ ಮೇಲೆ ಅಮೆರಿಕಾ ದಾಳಿ ಮಾಡುವುದರೊಂದಿಗೆ ಖಡಕ್ ಎಚ್ಚರಿಕೆ ನೀಡಿದ ಬಳಿಕವೂ ಜಗ್ಗದ ಇರಾನ್, ಇಸ್ರೇಲ್ ಮೇಲಿನ ತನ್ನ ದಾಳಿಯನ್ನು ಮತ್ತೆ ಮುಂದುವರೆಸಿದೆ.

ಅಮೆರಿಕ ದಾಳಿ ಬಳಿಕ ಇರಾನ್‌ನ ಮೊದಲ ಪ್ರತೀಕಾರ ಇದಾಗಿದ್ದು, ಇಸ್ರೇಲ್‌ನ 10ಕ್ಕೂ ಹೆಚ್ಚು ಸ್ಥಳಗಳ ಮೇಲೆ 30ಕ್ಕೂ ಅಧಿಕ ಖಂಡಾಂತರ ಕ್ಷಿಪಣಿಗಳಿಂದ ದಾಳಿ ನಡೆಸಿದೆ.

ಇಸ್ರೇಲ್‌ನ ಹೈಫಾ ನಗರ, ರಾಜಧಾನಿ ಟೆಲ್ ಅವೀವ್, ಜೆರುಸಲೆಂ ಸೇರಿದಂತೆ 10ಕ್ಕೂ ಹೆಚ್ಚು ನಗರಗಳ ಮೇಲೆ ಮಿಸೈಲ್ ಮಳೆ ಸುರಿಸಿದೆ. ಇರಾನ್‌ನ ಮಿಸೈಲ್‌ಗಳು ನಗರಕ್ಕೆ ಅಪ್ಪಳಿಸುತ್ತಿದ್ದಂತೆ ಇಸ್ರೇಲ್‌ನ ಕೆಲವು ಭಾಗಗಳಲ್ಲಿ ಸೈರನ್ ಮೊಳಗಿದ್ದು, ನಾಗರಿಕರನ್ನ ಸುರಕ್ಷಿತ ಸ್ಥಳಗಳು ಮತ್ತು ಬಂಕರ್‌ಗಳಿಗೆ ಸ್ಥಳಾಂತರಿಸಲಾಗಿದೆ.

ಮುಂದಿನ ಸೂಚನೆ ಬರುವವರೆಗೂ ಬಂಕರ್‌ಗಳಿಂದ ಹೊರಗೆ ಬರದಂತೆ ಸೂಚಿಸಲಾಗಿದೆ. ನಾಗರಿಕರನ್ನು ಗುರಿಯಾಗಿಸಿ ಇರಾನ್ ನಡೆಸಿದ ಈ ದಾಳಿಯಲ್ಲಿ 23ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ವರದಿಗಳು ತಿಳಿಸಿವೆ.

ಕನಿಷ್ಠ ಮೂಲ ಸೌಕರ್ಯ ಇಲ್ಲದ ಬಡಾವಣೆ; ಜನರ ಸಮಸ್ಯೆ ಕಂಡು ಮರುಗಿದ ಶಾಸಕ ಜಿಟಿಡಿ



ಮೈಸೂರಿನ ರೂಪಾನಗರದ ಸ್ಥಳೀಯ ನಿವಾಸಿಗಳ ಸಂಘ ಭಾನುವಾರ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಸಸಿಗಳನ್ನು ವಿತರಿಸಿದರು.

ಮೈಸೂರು,ಜೂ.22 (ಬಿಎಲ್‌ಯು) –ಖಾಸಗಿ ಬಡಾವಣೆ ನಿರ್ಮಾಣ ಮಾಡುವ ಮಾಲೀಕರು ನಿವೇಶನ ಮಾರಾಟ ಮಾಡಿ ಹಣ ಮಾಡಿಕೊಂಡರೆ, ನಿವೇಶನ ಖರೀದಿಸಿ ಅಲ್ಲಿ ಮನೆ ಕಟ್ಟಿದವರು ಮೂಲ ಸೌಕರ್ಯಗಳಿಲ್ಲದೆ ಹಲವು ರೀತಿಯ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಶಾಸಕ ಜಿ.ಟಿ. ದೇವೇಗೌಡರು ಹೇಳಿದರು.

ಮೈಸೂರಿನ ರೂಪಾನಗರದ ಸ್ಥಳೀಯ ನಿವಾಸಿಗಳ ಸಂಘ ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸಸಿಗಳನ್ನು ವಿತರಿಸಿ ಮಾತನಾಡಿದ ಅವರು, ಬಡಾವಣೆ ನಿರ್ಮಾಣ ಮಾಡಿದವರು ಒಳಚರಂಡಿ, ಸೆಪ್ಟಿಕ್ ಟ್ಯಾಂಕ್, ರಸ್ತೆ, ವಿದ್ಯುತ್ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸದೆ ನಿವೇಶನ ಹಂಚಿಕೆ ಮಾಡಿ ಕೈ ತೊಳೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಒಂದು ಸಾವಿರ ಬಡಾವಣೆಗಳಿದ್ದು, ಅಲ್ಲೆಲ್ಲಾ ಒಂದಲ್ಲ ಒಂದು ಸಮಸ್ಯೆಗಳಿವೆ. ದಿನ ನಿತ್ಯವೂ ಅಲ್ಲಿನ ಜನರ ಸಮಸ್ಯೆ ಕೇಳಿ ಅದನ್ನು ಪರಿಹಾರ ಮಾಡುವ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿದರು.

ರೂಪಾನಗರ ಸೇರಿದಂತೆ ಇತರೆ ಬಡಾವಣೆಗಳಿಗೆ ಕಬಿನಿಯಿಂದ 60 ಎಂಎಲ್‌ಡಿ ನೀರು ಪೂರೈಸುವ ಕೆಲಸ ಶೀಘ್ರ ಆರಂಭವಾಗಲಿದೆ. ಇದಲ್ಲದೆ ಕಬಿನಿ ನದಿಯಿಂದ ಹೆಚ್ಚುವರಿ 60 ಎಂಎಲ್‌ಡಿ ನೀರು ಸರಬರಾಜಾಗಲಿದೆ. ಅದೇ ರೀತಿ ಹಳೆ ಉಂಡುವಾಡಿ ಯೋಜನೆಯಲ್ಲಿ 545 ಕೋಟಿ ವೆಚ್ಚದ ಕಾಮಗಾರಿ ನಡೆಯುತ್ತಿದೆ. ಇದು 1 ವರ್ಷದಲ್ಲಿ ಪೂರ್ಣಗೊಂಡರೆ ಕ್ಷೇತ್ರದ 200 ಹಳ್ಳಿಗಳಿಗೆ ನೀರು ದೊರೆಯಲಿದೆ. ಈ ಮೂಲಕ ನಗರದ ಹೊರವಲಯದ ಬಡಾವಣೆ, ಹಳ್ಳಿಗಳಿಗೆ ಕಬಿನಿಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುವುದು ಎಂದರು.

ಚಾಮರಾಜ, ನರಸಿಂಹರಾಜ ಹಾಗೂ ಕೃಷ್ಣರಾಜ ಕ್ಷೇತ್ರ ರಿಂಗ್ ರಸ್ತೆ ಒಳಗಿದ್ದರೆ, ಚಾಮುಂಡೇಶ್ವರಿ ಕ್ಷೇತ್ರ ರಿಂಗ್ ರಸ್ತೆ ಒಳಗೆ ಮತ್ತು ಹೊರಗೆ ಇದ್ದು, ಒಂದು ನಗರಸಭೆ, ನಾಲ್ಕು ಪಟ್ಟಣ ಪಂಚಾಯಿತಿ, ಐದು ನಗರ ಪಾಲಿಕೆ ವಾರ್ಡ್‌ಗಳನ್ನು ಒಳಗೊಂಡಿದೆ. ಜೊತೆಗೆ 40 ಕಿಲೋ ಮೀಟರ್ ವ್ಯಾಪ್ತಿ ಪ್ರದೇಶ ಹೊಂದಿದೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

> ರೂಪಾನಗರ ಸೇರಿದಂತೆ ಇತರೆ ಬಡಾವಣೆಗಳಿಗೆ ಕಬಿನಿಯಿಂದ 60 ಎಂಎಲ್‌ಡಿ ನೀರು ಪೂರೈಸುವ ಕೆಲಸ ಶೀಘ್ರ ಆರಂಭವಾಗಲಿದೆ. ಇದಲ್ಲದೆ ಕಬಿನಿ ನದಿಯಿಂದ ಹೆಚ್ಚುವರಿ 60 ಎಂಎಲ್‌ಡಿ ನೀರು ಸರಬರಾಜಾಗಲಿದೆ. ಅದೇ ರೀತಿ ಹಳೆ ಉಂಡುವಾಡಿ ಯೋಜನೆಯಲ್ಲಿ 545 ಕೋಟಿ ವೆಚ್ಚದ ಕಾಮಗಾರಿ ನಡೆಯುತ್ತಿದೆ. ಇದು 1 ವರ್ಷದಲ್ಲಿ ಪೂರ್ಣಗೊಂಡರೆ ಕ್ಷೇತ್ರದ 200 ಹಳ್ಳಿಗಳಿಗೆ ನೀರು ದೊರೆಯಲಿದೆ ಈ ಮೂಲಕ ನಗರದ ಹೊರವಲಯದ ಬಡಾವಣೆ, ಹಳ್ಳಿಗಳಿಗೆ ಕಬಿನಿಯಿಂದ ಕುಡಿಯುವ ನೀರು ಸರಬರಾಜು ಮಾಡಲಾಗುವುದು.
>
> -ಜಿ.ಟಿ.ದೇವೇಗೌಡರು, ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ.

ಈಗ ಚಾಮುಂಡೇಶ್ವರಿ ಕ್ಷೇತ್ರದ ಎಲ್ಲಾ ಬಡಾವಣೆ ಮತ್ತು ಹಳ್ಳಿಗಳಿಗೆ ಕಬಿನಿ ಕುಡಿಯುವ ನೀರು ದೊರೆಯಲಿದೆ ಎಂದು ಭರವಸೆ ನೀಡಿದ ಜಿ.ಟಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಶ್ರಮ ಪಟ್ಟು ಹಳೆ ಉಂಡುವಾಡಿ ಯೋಜನೆ ಸಾಕಾರಗೊಳಿಸಿದ ಶ್ರಮದ ಪರಿಯನ್ನು ವಿವರಿಸಿದರು.

ಬಡಾವಣೆಗಳಲ್ಲಿ ಮರಗಿಡ ಬೆಳೆಸಿ ಪೋಷಿಸಬೇಕು. ಮರ ಇದ್ದರೆ ಪ್ರಕೃತಿ ಉಳಿಯಲಿದೆ ಎಂಬುದನ್ನು ಅರಿಯಬೇಕು ಎಂದು ಸಲಹೆ ನೀಡಿದರು.

ಗ್ರಾಮಾಂತರ ಪ್ರದೇಶದಲ್ಲಿ ಕುಂಟಬಿಲ್ಲೆ, ರಿಂಗ್ ಆಟ, ಬುಗುರಿ ಸೇರಿದಂತೆ ಹಲವು ಗ್ರಾಮೀಣ ಶೈಲಿಯ ಆಟಗಳಿದ್ದವು, ಆದರೆ ಈಗ ಕ್ರಿಕೆಟ್, ಫುಟ್‌ಬಾಲ್ ಬಿಟ್ಟರೆ ಬೇರೆ ಆಟಗಳು ಮರೆಯಾಗಿವೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.22– ಮೈಸೂರು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2025–26 ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂನ್ 25 ಕೊನೆಯ ದಿನಾಂಕವಾಗಿದೆ ಎಂದು ಮೈಸೂರು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಎನ್.ಬಿ. ವಾಸು ಬಿನ್ ಲೇಟ್ ಬೆಟ್ಟೇಗೌಡ ಕಲ್ಲೂರು ನಾಗನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು, ಇವರು ಹೂಡಿರುವ ದಾವಾ ಸಂಖ್ಯೆ: O.S. No. 754/2025 7ನೇ ಅಡಿಷನಲ್ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಮೈಸೂರು.

ವಿರುದ್ಧ

ಎನ್.ಬಿ. ಮಂಜು ಬಿನ್ ಲೇಟ್. ಬೆಟ್ಟೇಗೌಡ ಹಾಗೂ ಇತರರು ವಿರುದ್ಧ 7ನೇ ಒಂದು ಭಾಗ ವಿಭಾಗಕ್ಕೆ ಈ ಕೆಳಕಂಡ ಸ್ವತ್ತುಗಳಿಗೆ ದಿನಾಂಕ: 04.06.2025ರಂದು ಮೇಲ್ಕಂಡ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ತಂದಿರುತ್ತಾರೆ. ಹಾಗಾಗಿ ಈ ಕೆಳಕಂಡ ಸ್ವತ್ತುಗಳಲ್ಲಿ ಯಾವುದೇ ರೀತಿಯ ವ್ಯವಹಾರ ಮಾಡಕೂಡದೆಂದು ಪತ್ರಿಕಾ ಪ್ರಕಟಣೆ ನೀಡಲಾಗಿದೆ.

ಷೆಡ್ಯೂಲ್

1. ಕಲ್ಲೂರು ನಾಗನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ ವ್ಯಾಪ್ತಿಯಲ್ಲಿರುವ ಸರ್ವೆ ನಂ. 257/1 ರಲ್ಲಿ 1 ಎಕರೆ 24 ಗುಂಟೆ, 257/3 ರಲ್ಲಿ 1 ಎಕರೆ 34 ಗುಂಟೆ, 257/5 ರಲ್ಲಿ 1 ಎಕರೆ 7 ಗುಂಟೆ, 257/7 ರಲ್ಲಿ ಎಕರೆ ಇಲ್ಲ ಗುಂಟೆ 08, 257/8 ರಲ್ಲಿ ಎಕರೆ ಇಲ್ಲ 08 ಗುಂಟೆ, 257/9 ರಲ್ಲಿ ಎಕರೆ ಇಲ್ಲ 21 ಗುಂಟೆ, ಸರ್ವೆ ನಂ. 283/1 ಎಕರೆ ಇಲ್ಲ 17 ಗುಂಟೆ, 283/3 ಎಕರೆ ಇಲ್ಲ 32 ಗುಂಟೆ, 283/4 ಎಕರೆ ಇಲ್ಲ 25 ಗುಂಟೆ, 283/5 ಎಕರೆ ಇಲ್ಲ 24 ಗುಂಟೆ, 283/6 ಎಕರೆ ಇಲ್ಲ 24 ಗುಂಟೆ, 283/7 ಎಕರೆ ಇಲ್ಲ 25 ಗುಂಟೆ, 283/8 ಎಕರೆ ಇಲ್ಲ 32 ಗುಂಟೆ, 283/9 ಎಕರೆ ಇಲ್ಲ 16 ಗುಂಟೆ, 284/1 1 ಎಕರೆ 33 ಗುಂಟೆ ಇವಿಷ್ಟು ಸ್ವತ್ತುಗಳು ಮೇಲ್ಕಂಡ ದಾವೆಗೆ ಒಳಪಟ್ಟಿರುತ್ತವೆ.

2. ಕಲ್ಲೂರು ನಾಗನಹಳ್ಳಿ ಕಾವಲ್, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಹಾಗೂ ಜಿಲ್ಲೆ ವ್ಯಾಪ್ತಿಯಲ್ಲಿರುವ ಸರ್ವೆ ನಂ. 41 ರಲ್ಲಿ 4 ಎಕರೆ, 66/5 ರಲ್ಲಿ ಎಕರೆ ಇಲ್ಲ 12.08 ಗುಂಟೆ, 66/6 ರಲ್ಲಿ ಎಕರೆ ಇಲ್ಲ 12.04 ಗುಂಟೆ, 66/7 ರಲ್ಲಿ ಎಕರೆ ಇಲ್ಲ 12.04 ಗುಂಟೆ, 69/1 ರಲ್ಲಿ ಎಕರೆ ಇಲ್ಲ 26.04 ಗುಂಟೆ, 69/2 ರಲ್ಲಿ ಎಕರೆ ಇಲ್ಲ 27 ಗುಂಟೆ, ಸರ್ವೆ ನಂ. 70 ರಲ್ಲಿ 1 ಎಕರೆ 12 ಗುಂಟೆ, 70/1 ರಲ್ಲಿ 1 ಎಕರೆ 13 ಗುಂಟೆ, ಇವಿಷ್ಟು ಸ್ವತ್ತುಗಳು ಅಲ್ಲದೆ 3. ಹೊಸಹಳ್ಳಿ ಗ್ರಾಮ, ಕಸಬಾ ಹೋಬಳಿ, ಕೆ.ಆರ್.ನಗರ ತಾಲ್ಲೂಕು, ಸರ್ವೆ ನಂ. 90/9 ರಲ್ಲಿ ಎಕರೆ ಇಲ್ಲ 25.08 ಗುಂಟೆ ಇವಿಷ್ಟು ಸ್ವತ್ತುಗಳಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿರುತ್ತದೆ ಎಂದು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.

ಕೆ.ಆರ್. ಶ್ರೀನಿವಾಸ್ ವಕೀಲರು, ನಂ. 1, 2ನೇ ಮಹಡಿ, ನ್ಯೂ ಕಾಂತರಾಜಅರಸ್ ರೋಡ್, ಒಕ್ಕಲಿಗರ ಹಿತರಕ್ಷಣಾ ಕಟ್ಟಡ, ಕೆ.ಜಿ.ಕೊಪ್ಪಲು, ಮೈಸೂರು–570009.ಮೊ.: 9964168223.